Misappropriation of Amount in Lakkavalli Panchayat

301. Sri HANJI SHIVANNA (Tarikere).—

Will the Minister for Development be pleased to state :—

(*a*) the amount misappropriated in Lakkavalli Panchayat, Tarikere Taluk from 1960 to 1968 as per the audit report;

(*b*) the action taken for the recovery of the said amount;

(*c*) whether the said amount will be recovered with interest; and is it not proper to supersede the said Panchayat ?

Sri P. M. NADGOUDA (Minister for Development).—

(*a*) Rs. 2,610.

(*b*) Action is being taken by the Assistant Commissioner to recover the amount from the concerned persons.

(*c*) Action will be taken in this behalf after the completion of enquiry by the Assistant Commissioner. As the present Panchayat has not misappropriated the amount, the question of superseding does not arise.

Budget Estimates for 1970-71

(General Discussion).

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, 1970-71 ನೇ ಇಸವಿಯ ದೇಶದ ಆಯವ್ಯಯ ಪತ್ರವನ್ನು ಈ ಸಭೆಯ ಮುಂದೆ ನಮ್ಮ ರಾಜ್ಯದ ಆರ್ಥಿಕ ಸಚಿವರಾದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮಂಡನೆ ಮಾಡಿದ್ದಾರೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ವರ್ಷ ಒಂದು ಪ್ರಶಂಸನೀಯವಾದ ಬದಲಾವಣೆ ಮಾಡಿದ್ದಾರೆ ಎಂದು ನಾನಾದರೂ ಹೇಳುತ್ತೇನೆ. ಅದು ಏನೆಂದರೆ ಬಹಳ ಸ್ವಚ್ಛವಾದ ಕನ್ನಡದಲ್ಲಿ ಈ ಭಾಷಣವನ್ನು ಓದಿದರು. ಬಹಳ ಚೆನ್ನಾಗಿ ಓದಿದರು. ಅದಕ್ಕಾಗಿ ಅದರ ವಿಚಾರ ಏನೇ ಇರಲಿ, ಅದರ ವಿಮರ್ಶೆ ಏನೇ ಇರಲಿ, ಆ ಬಗ್ಗೆ ಅವರನ್ನು ಹೃತ್ಪೂರ್ವಕವಾಗಿ ಈ ಸಭೆಯ ಪರವಾಗಿ ನಾನಾದರೂ ಕೂಡ ವಂದನೆಗಳನ್ನು ಅರ್ಪಣೆ ಮಾಡಬೇಕಾಗಿದೆ.

ಸಭಾಪತಿಯವರೇ, ಈವೊತ್ತು ಇಷ್ಟೊಂದು ಸೊಗಸಾದ ಕನ್ನಡದಲ್ಲಿ ಓದಿದ ಭಾಷಣದಲ್ಲಿ ಇದರ ಬಗ್ಗೆ ನಾನು ಎರಡು ವಾಕ್ಯಗಳಲ್ಲೇ ಹೇಳುವುದಾದರೆ ಅವರು ಆ ಭಾಷಣದಲ್ಲಿ ಅನೇಕ ಉಪವಚನಗಳನ್ನು ಹೇಳಿದ್ದಾರೆ. ಮತ್ತು ತಮ್ಮ ಅಸಹಾಯಕತೆ, ಅಸಂತೃಪ್ತಿ, ಮತ್ತು ಹಣದ ಅಭಾವ ಇವುಗಳ ಬಗ್ಗೆ ಏನೆಂದೂ ಕೂಡ ಹೇಳಿದ್ದಾರೆ. ಇದನ್ನು ಅವರು ಭಾಷಣದ ಪ್ರಥಮ ಪುಟದಲ್ಲೇ ಹೇಳಿದ್ದಾರೆ. ಈ ಶತಮಾನದ ಆರನೆಯ ದಶಕದಿಂದ ಮುಂದಿನ ದಶಕಕ್ಕೆ ದಾಟಿ ಅಂದರೆ 7ನೇ ದಶಕಕ್ಕೆ ಕಾಲು ಇಡತಕ್ಕಂಥ ಕಾಲದಲ್ಲಿ ಅವರು ಏನೇನು ಮಾಡಬೇಕು ಎಂಬುದನ್ನು ಈ ಬಡ್ಜೆಟ್ಟಿನಲ್ಲಿ ಹೇಳಿದ್ದಾರೆ. ಅದು ಈ ರೀತಿ ಇದೆ :

> "ಈ ಶತಮಾನದ ಆರನೆಯ ದಶಕ ಆರಂಭವಾದಾಗ, ಜಗತ್ತಿನ ಅಭಿವೃದ್ಧಿ ಹೊಂದದ ಪ್ರದೇಶಗಳ ಬೆಳವಣಿಗೆ ಈ ದಶಕದಲ್ಲಿ ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಬಹ್ವಂಶ ಮಾನವಕೋಟಿಯ ಪಾಲಿಗೆ ಆ ಭರವಸೆ ಪೂರ್ಣವಾಗಿ ಈಡೇರಿಲ್ಲ. ಪ್ರಗತಿಯೇ ಆಗಿಲ್ಲ ಎಂದು ಇದರ ಅರ್ಥವಲ್ಲ. ಹೀಗೆ ಹೇಳುವುದರ ಉದ್ದೇಶ—ಜನತೆ ಧೀರ ಪ್ರಯತ್ನಗಳನ್ನು ಮಾಡಿದರೂ ಸಮಾನವಾಗಿ ಆಗಿಲ್ಲ; ಎಂಬು

ದನ್ನು ಸ್ಪಷ್ಟೀಕರಿಸುವುದು. ದಶಕದ ಮುಕ್ತಾಯಕ್ಕೆ ಮುನ್ನವೇ ಮಾನವ ಚಂದ್ರನ ಮೇಲೆ ಪದಾರ್ಪಣ ಮಾಡಿದ; ಆದರೆ, ಅಷ್ಟೇ ಯಶಸ್ಸು, ಅಭಾವಕ್ಕೆದಿರಾದ ಸಮರ ದಲ್ಲಿ, ಪ್ರತಿಯೊಂದು ಕಣ್ಣಿನಿಂದ ಪ್ರತಿಯೊಂದು ಕಂಬನಿಯನ್ನು ತೊಡೆಯುವುದರಲ್ಲಿ, ಅವನಿಗೆ ಪ್ರಾಪ್ತವಾಗಲಿಲ್ಲ. ಪ್ರಭಾಮಯವಾದ ಈ ಜಗತ್ತಿನಲ್ಲಿ ಅಂಧಕಾರ ಕವಿದ ಕೆಲ ಪ್ರದೇಶಗಳು ಇನ್ನೂ ಹಾಗೆಯೇ ಉಳಿದಿವೆ.

ಹಿಂದಕ್ಕೆ ತಿರುಗಿ ನೋಡಿ, ನಾವು ಸಾಧಿಸಿರುವುದೆಷ್ಟು, ಸಾಧಿಸಲು ಇನ್ನೂ ಉಳಿದಿರುವುದೆಷ್ಟು'' ಎಂಬುದನ್ನೂ ಹೇಳಿದ್ದಾರೆ, ಮುಂದೆ ಕೆಲವು ವಿಚಾರಗಳನ್ನೂ ಕೂಡ ಹೇಳಿದ್ದಾರೆ. ಈ ಮಾತನ್ನೇ ನಾನು ಅಭಿಪ್ರಾಯವಾಗಿಟ್ಟುಕೊಂಡು ನಾನು ಮಾತನಾಡುತ್ತೇನೆ. ಈವೊತ್ತು ಬಡ್ಜೆಟ್ ಮಂಡನೆ ಮಾಡತಕ್ಕಂಥ ಕಾಲದಲ್ಲಿ ಹಣಕಾಸಿನ ಸಚಿವರು ನಮ್ಮ ರಾಜ್ಯದಲ್ಲಿ ಹಿಂದಿನ ದಶಕದಲ್ಲಿ ಏನು ಸಾಧನೆ ಮಾಡಬೇಕಾಗಿತ್ತೋ, ಆ ಸಾಧನೆ ನಿರಾಸೆ ಆಗಿ ಆ ಕೆಲಸ ಪೂರ್ಣವಾಗಿ ಈಡೇರಿಲ್ಲ ಎಂದು ಹೇಳಿದ್ದಾರೆ. ಇನ್ನು ಎರಡು ವರ್ಷಗಳು ಕಾದಲ್ಲಿ ಅವರು ಮಾಡಿರುವ ಭರವಸೆಗಳನ್ನು ಈಡೇರಿಸಿಕೊಳ್ಳದಿರುವುದಕ್ಕೆ ಪ್ರಾಯಶ್ಚಿತ್ತ ರೂಪವಾಗಿ ಈ ಒಂದು ಹೊಸ ಉಪವಚನವನ್ನು ಹೇಳುವುದಕ್ಕೆ ಮಾನ್ಯ ಅರ್ಥ ಸಚಿವರು ಹೊರಟಿದ್ದಾರೆ. ಈ ಉಪವಚನ ಏನೆಂದರೆ ಈ ದೇಶದಲ್ಲಿ ನಾವು ಏನು ಸಾಧನೆ ಮಾಡುವುದಕ್ಕೆ ಹೊರಟಿದ್ದೆವೋ ಅದು ಅಷ್ಟು ಸಂಪೂರ್ಣವಾಗಿ ಈಡೇರಿಲ್ಲ ಮತ್ತು ಜನತೆಯ ಆಶೋತ್ತರಗಳೂ ಸಂಪೂರ್ಣವಾಗಿ ಈಡೇರಿಲ್ಲ ಎನ್ನುವುದನ್ನೂ ಕೂಡ ಜನತೆಯ ಮುಂದೆ ಇಟ್ಟಿದ್ದಾರೆ. ಈ ದೇಶದಲ್ಲಿ ಆಡಳಿತ ಪಕ್ಷವೇ ಮತ್ತೊಂದು ವಿರೋಧಪಕ್ಷವಾಗಿದೆ ಎಂದು ಹೇಳುತ್ತೇನೆ. ಈ 7ನೆಯ ದಶಕದ ಪ್ರಾರಂಭದಲ್ಲೇ ಏನಾಗಿದೆ ಎಂದರೆ ಕಾಂಗ್ರೆಸ್ ಇಬ್ಭಾಗವಾಗಿ ಕೇಂದ್ರ ಸರ್ಕಾರದಲ್ಲಿ ಇಂಡಿಕೇಟ್ ಕಾಂಗ್ರೆಸ್ಸೇ ಆಡಳಿತ ಪಕ್ಷವಾಗಿದೆ; ಸಿಂಡಿಕೇಟ್ ಕಾಂಗ್ರೆಸ್ ವಿರೋಧ ಪಕ್ಷವಾಗಿ ಕುಳಿತಿದೆ. ನಮ್ಮ ರಾಜ್ಯದಲ್ಲಿ ಸಿಂಡಿಕೇಟ್ ಆಡಳಿತ ಪಕ್ಷವಾಗಿ ಇಂಡಿಕೇಟ್ ವಿರೋಧ ಪಕ್ಷವಾಗಿ ಕುಳಿತಿದೆ. ಹೀಗೆ ಕಾಂಗ್ರೆಸ್ ಎರಡು ಭಾಗವಾಗಿ 7ನೇ ದಶಕದಲ್ಲಿ ಒಂದು ಹೊಸರೂಪ ತಾಳಿದೆ. ಇದರಿಂದ ಏನು ಗೊತ್ತಾಗುತ್ತದೆ ಎಂದರೆ 22 ವರ್ಷದೊಳಗೆ ಇದ್ದಂತ ಜವಾಬ್ದಾರಿಯುತವಾದ ಸರ್ಕಾರ ತಪ್ಪುಮಾಡಿರುವುದರಿಂದ ಈ ರೀತಿಯಾಗಿದೆ ಎಂದು ಹೇಳುತ್ತೇನೆ. ಈಗ 1970-71ನೇ ಬಡ್ಜೆಟ್ಟಿನಲ್ಲಿ ಆಗಿರತಕ್ಕಂಥ ವೆಚ್ಚದ ಅಂಕಿಅಂಶಗಳ ಕಡೆಗೆ ಕೆಲವೊಂದು ವಿಷಯಗಳನ್ನು ಈ ಸಭೆಯ ಮುಂದೆ ಇಡುತ್ತೇನೆ. ಮುಂದೆ ಅದರ ಪರಿಣಾಮ ಏನೆಂಬುದನ್ನು ವಿಮರ್ಶೆ ಮಾಡಲು ಪ್ರಯತ್ನ ಮಾಡುತ್ತೇನೆ.

ಸಭಾಪತಿಯವರೇ, ಈವೊತ್ತು ನಮ್ಮ ಆರ್ಥಿಕ ಸಚಿವರು ಇಟ್ಟಿರತಕ್ಕಂಥ ಬಡ್ಜೆಟ್ಟಿನಲ್ಲಿ ನಮ್ಮ ದೇಶದ ಆದಾಯ 233.47 ಕೋಟಿ ರೂಪಾಯಿ, ವೆಚ್ಚ 248.95 ಕೋಟಿ ರೂಪಾಯಿ. ಇದರಿಂದಾಗಿ ಡಿಫಿಸಿಟ್ 15.48 ಕೋಟಿ ರೂಪಾಯಿ ಇದೆ. ಈ ರೀತಿ ಡಿಫಿಸಿಟ್‌ನ ಒಂದು ಬಡ್ಜೆಟ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಮತ್ತು 1970-71ರ ಓಪನಿಂಗ್ ಬ್ಯಾಲೆನ್ಸ್ 2.96 ಕೋಟಿ ರೂಪಾಯಿ ಇದೆ. ಅಲ್ಲದೆ ಓಪನಿಂಗ್ ಬ್ಯಾಲೆನ್ಸ್ ಏನು ಇದೆಯೋ ಅದನ್ನು ಕ್ಲೋಸಿಂಗ್ ಬ್ಯಾಲೆನ್ಸಿನಿಂದ ಕಳೆದರೆ 9 ಕೋಟಿ ರೂಪಾಯಿ ಆಗುತ್ತದೆ. 1960-61ನೇ ಇಸವಿ ಬಡ್ಜೆಟ್‌ಗೆ ಹೋಲಿಸುವುದಾದರೆ ಆವಾಗ ನಮ್ಮ ದೇಶದ ಆದಾಯ 92 ಕೋಟಿ ರೂಪಾಯಿ, ವೆಚ್ಚ 90 ಕೋಟಿ ರೂಪಾಯಿ ಇತ್ತು. ಈವೊತ್ತು ನಮ್ಮ ರಾಜ್ಯದ ಆದಾಯ 233.47 ಕೋಟಿ ರೂಪಾಯಿ ಇದ್ದರೂ ಡಿಫಿಸಿಟ್ ಆಗಿದೆ. 1960-61 ರಲ್ಲಿ ಕಡಿಮೆ ವರಮಾನ ಇದ್ದಾಗ 2 ಕೋಟಿ ರೂಪಾಯಿಯನ್ನು ಸರ್‌ಪ್ಲಸ್ ತೋರಿಸಿದ್ದರು.

ಇನ್ನು ನಮ್ಮ ದೇಶದ ಅಸೆಟ್ಸ್ ಅಂಡ್ ಲಯಬಿಲಿಟೀಸ್ ವಿಚಾರ ತೆಗೆದುಕೊಂಡರೆ 1970-71ರ ಹೊತ್ತಿಗೆ ದೇಶದ ಬಂಡವಾಳ ಸುಮಾರು 711.8 ಕೋಟಿ ರೂಪಾಯಿಗಳು ನಮ್ಮ ಲೆಕ್ಕಪತ್ರದಂತೆ ಇವೆ. ಇದರ ಬಗ್ಗೆ ಸಾಲಸೋಲಗಳು ತೆಗೆದುಕೊಂಡರೆ ಲೆಕ್ಕಪತ್ರದ ಪ್ರಕಾರ ಎಕ್ಸೆಸ್ ಆಫ್ ಅಸೆಟ್ಸ್ ಓವರ್ ಲಯಬಿಲಿಟೀಸ್ 107 ಕೋಟಿ ರೂಪಾಯಿ. ಅಲ್ಲಿಗೆ 604 ಕೋಟಿ ರೂಪಾಯಿ ಸಾಲ ಮಾಡಿದ ಹಾಗಾಯಿತು. ನಮ್ಮ ಬಂಡವಾಳ 711 ಕೋಟಿ ರೂಪಾಯಿ. 1970 ನೇ ಇಸವಿಯೊಳಗೆ ಭಾರತ ಸರ್ಕಾರಕ್ಕೆ ಕೊಡಬೇಕಾಗಿರತಕ್ಕಂಥ ಸಾಲ 114 ಕೋಟಿ ರೂಪಾಯಿ ಇತ್ತು. 71 ನೇ ಅಂತ್ಯಕ್ಕೆ ಇದು ಏನಾಗಿದೆ ಎಂದರೆ ಸಾಲ ತಂದು ಬಂಡವಾಳ ಹಾಕಿರುವುದು ಕಡಿಮೆಯಾಗಿದೆ ಅಂದರೆ 114 ಕೋಟಿ ರೂಪಾಯಿ ಮಾತ್ರ ಹಾಕಿದ್ದಾರೆ. 1970-71 ರ ಹೊತ್ತಿಗೆ ಎಕ್ಸೆಸ್ ಆಫ್ ಅಸೆಟ್ಸ್ ಓವರ್ ಲಯಬಲಿಟೀಸ್ 107 ಕೋಟಿ ರೂಪಾಯಿ, ಸಾಲ ಮಾಡಿರುವುದು 114 ಕೋಟಿ ರೂಪಾಯಿ. ಇನ್ನು ಉಳಿದ 7 ಕೋಟಿ ರೂಪಾಯಿ ಏನಾಗಿದೆ ಎನ್ನುವುದಕ್ಕೆ ಆರ್ಥಿಕ ಸಚಿವರು

(ಶ್ರೀ ಎಸ್. ಶಿವಪ್ಪ)

ವಿವರಣೆ ಕೊಡಬೇಕು ಎಂದು ನಾನು ಕೇಳುತ್ತೇನೆ. ಈ ದೇಶದಲ್ಲಿ ನಮ್ಮ ಸಾಲದ ಹೊರೆಯ ಜೊತೆಗೆ ಆ ಸಾಲಕ್ಕಾಗಿ ಕೊಡತಕ್ಕಂಥ ಬಡ್ಡಿ 23.18 ಕೋಟಿ ಆಗುತ್ತದೆ. ಇಷ್ಟೊಂದು ಹಣವನ್ನು ಕೇವಲ ಬಡ್ಡಿಗಾಗಿ ಕೊಡಬೇಕಾಗಿದೆ. ಈ ಸಾಲದ ತೀರ್ಮಗಾಗಿ ಪಬ್ಲಿಕ್‌ನಿಂದ, ಸೆಂಟ್ರಲ್‌ನಿಂದ, ರಿಸರ್ವ್‌ನಿಂದ, ಎಲ್ಲಾ ಸೇರಿ ಸುಮಾರು 53 ಕೋಟಿ ರೂಪಾಯಿಯ ಕನ್ಸಾಲಿಡೇಟ್ ಫಂಡ್‌ನಿಂದ ಕೊಡಬೇಕಾಗಿದೆ. ನಮ್ಮ ಆದಾಯ ಸುಮಾರು 233.47 ಕೋಟಿ ಎಂದು ಇರುವಾಗ ಸಾಲವನ್ನು ತೀರಿಸುವುದಕ್ಕೆ ಮತ್ತು ಸಾಲದ ಬಡ್ಡಿಗಾಗಿ ಸುಮಾರು 76 ಕೋಟಿಯಷ್ಟು ಕೊಡಬೇಕಾಗಿ ಬರುತ್ತದೆ. ಇಂತಹ ಪರಿಸ್ಥಿತಿ ಇಂದು ನಮ್ಮ ಸರಕಾರಕ್ಕೆ ಬಂದಿದೆ. ಇಷ್ಟೇ ಅಲ್ಲದೆ ಇನ್ನು ಓವರ್‌ಡ್ರಾಫ್ಟ್‌ಗಳ ಲೆಕ್ಕ ಬೇರೆ ಬರುತ್ತದೆ. ಇದರ ಲೆಕ್ಕ ಮಾಡುವಾಗ ಸುಮಾರು 20.4 ಕೋಟಿ ಎಂದು ಇದರಲ್ಲಿ ಹೇಳುತ್ತಾರೆ. ಇದು ಮುಂದೆ ಇನ್ನೂ 24-25 ಕೋಟಿಯವರೆಗೆ ಬರುತ್ತದೆ. ಇವೆಲ್ಲವನ್ನೂ ಸರಿದೂಗಿಸಿ ಕೊನೆಯಲ್ಲಿ ನಮ್ಮ ರಾಜ್ಯದ ಲೆಕ್ಕವನ್ನು ನೋಡಿದರೆ ಸುಮಾರು 45 ಕೋಟಿಯವರೆಗೆ ಓವರು ಡ್ರಾಫ್ಟ್ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಇದರ ಜೊತೆಗೆ ಐದನೇ ಫೈನಾನ್ಸ್‌ಕಮಿಷನ್‌ನವರು ರಾಜ್ಯಕ್ಕೆ ಸರಿಯಾಗಿ ಸಹಾಯ ಕೊಡದೇ ಹೋದುದರಿಂದಾಗಿ ನಮ್ಮ ದೇಶದ ಹಣಕಾಸಿನ ಮೇಲೆ ಬಹಳ ದೊಡ್ಡ ಹೊಡೆತ ಬಿದ್ದಿದೆ ಎಂದು ಅವರು ತಮ್ಮ ಭಾಷಣದಲ್ಲೂ ಹೇಳಿದ್ದಾರೆ. ನಾಲ್ಕನೇ ಫೈನಾನ್ಸ್‌ಕಮಿಷನ್‌ನಲ್ಲಿ ಸುಮಾರು 214 ಕೋಟಿಯಷ್ಟು ನೆರವನ್ನು ರಾಜ್ಯಕ್ಕೆ ಕೊಟ್ಟಿದ್ದರು. ಆದರೆ ಐದನೇ ಫೈನಾನ್ಸ್ ಕಮಿಷನ್ನಿನಲ್ಲಿ 197.4 ಕೋಟಿಯಷ್ಟು ಕೊಡಲಾಗಿದೆ. ಎಂದರೆ ಸುಮಾರು 18-20 ಕೋಟಿಯಷ್ಟು ಕಡಿಮೆ ಬಂದಿದೆ. ಇದೂ ಅಲ್ಲದೆ ಸೆಂಟ್ರಲ್ ಡ್ಯೂಟಿ ಹಾಗೂ ಇನ್ನಿತರ ಬಾಬುಗಳ ವರಮಾನದ ಶೇಕಡಾವಾರು ನೋಡಿದರೆ ಹಿಂದೆ ಶೇಕಡಾ 5.24 ಎಂದು ಕೊಡುತ್ತಿದ್ದುದು ಈಗ ಇದು 4.65ರ ವರೆಗೆ ಇಳಿದಿದೆ. ಬಹುಶಃ ಇದರಿಂದ ನಮ್ಮ ರಾಜ್ಯಕ್ಕೆ ಸುಮಾರು 50-60 ಕೋಟಿಯವರೆಗೆ ಲುಕ್ಸಾನು ಆಗುತ್ತದೆ ಮತ್ತು ಫೈನಾನ್ಸ್ ಕಮಿಷನ್ನಿನವರಿಂದಲೂ ಸರಿಯಾದ ನೆರವು ಬಾರದಿದ್ದುದರಿಂದ ನಮಗೆ ಲುಕ್ಸಾನು ಆಗಿದೆ ಎಂದು ಮಾನ್ಯ ಅರ್ಥ ಸಚಿವರು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಆದರೆ ದೇಶದಲ್ಲಿ ಇವೊತ್ತಿನ ಹಣಕಾಸಿನ ಪರಿಸ್ಥಿತಿ ಎಂತಹ ಮಟ್ಟಕ್ಕೆ ಬಂದಿದೆ ಎನ್ನುವ ವಿಚಾರವನ್ನು ಆರ್ಥಿಕ ಸಚಿವರು ಸಭೆಯ ಮುಂದೆ ಹೇಳುತ್ತಾ ಮುಂದೆ ಇಂತಿಂತಹ ಪ್ರೋಗ್ರಾಂ ಮಾಡಬೇಕೆಂದು ಇದ್ದೇವೆ ಎಂತಲೂ ಹೇಳಿದ್ದಾರೆ ಮತ್ತು ಇದರಿಂದ ನಮ್ಮ ದೇಶದ ಖಜಾನೆಯನ್ನು ತುಂಬಬೇಕಾಗಿದೆ ಎಂತಲೂ ಮತ್ತು ಇದನ್ನು ಹೇಗೆ ಜಾಸ್ತಿ ಮಾಡಬೇಕು ಎನ್ನುವುದರ ಬಗೆಗೂ ತಿಳಿಸಿದ್ದಾರೆ. ನಾವು ಇಷ್ಟು ಸಾಲ ಮಾಡಿಕೊಂಡು ಇದರ ಬಡ್ಡಿಗಾಗಿಯೇ ಹೆಚ್ಚು ಹಣ ಕೊಡಬೇಕಾಗಿ ಇರುವುದರಿಂದ ನಮಗೆ ಉಳಿಯುವ ಹಣ ವಾದರೂ ಎಲ್ಲಿ ಬರುತ್ತದೆ ? ಮತ್ತು ನಮ್ಮ ರಾಜ್ಯದ ಬಂಡವಾಳವನ್ನು ಬೇರೆ ಅಭಿವೃದ್ಧಿ ಕೆಲಸಗಳಿಗೆ ಖರ್ಚು ಮಾಡಲು ಎಲ್ಲಿಂದ ತರಬೇಕು ಎನ್ನುವುದನ್ನು ವಿಚಾರ ಮಾಡಬೇಕು. ಮಾನ್ಯಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಇದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎಂದು ಇದರಲ್ಲಿ ದಶಾಂಶ ಸೂತ್ರಗಳನ್ನು ಪಟ್ಟಿ ಮಾಡಿ ತೋರಿಸಿದ್ದಾರೆ. ಇದರ ಬಗ್ಗೆ ಯಾವ ರೀತಿ ಅನುಕೂಲವಾಗುತ್ತದೆ ಇಲ್ಲ ಎನ್ನುವುದನ್ನು ನಾನು ಮುಂದೆ ಹೇಳುತ್ತೇನೆ. ಇವನ್ನೆಲ್ಲಾ ಕಾರ್ಯಸಾಧನೆ ಮಾಡಬೇಕಾದರೆ ಈ ದೇಶದಲ್ಲಿ ಹಣವನ್ನು ಎಲ್ಲಿಂದ ತರುತ್ತೀರಿ ? ಇದು ನಮ್ಮ ಮುಂದೆ ಇರುವ ಪ್ರಶ್ನೆ. ಸುಮಾರು 700 ಕೋಟಿ ರೂಪಾಯಿಗಳ ಬಂಡವಾಳ ಇದೆ. ಈ ಬಂಡವಾಳದಿಂದ ರಾಜ್ಯಕ್ಕೆ ಬರುವ ಆದಾಯ ಎಷ್ಟು ? ಇದಕ್ಕೆ ತಕ್ಕಂತೆ ಆದಾಯ ಬಾರದೆಹೋದರೆ ಅದಕ್ಕೆ ಕಾರಣರು ಯಾರು ? ಇನ್ನು ನೀರಾವರಿ ಯೋಜನೆಗಳಿಗಾಗಿ ಸುಮಾರು 185 ಕೋಟಿಯವರೆಗೆ ವೆಚ್ಚ ಮಾಡಿದ್ದಾರೆ. ಕೈಗಾರಿಕೆಗಳ ಮೇಲೆ ಸುಮಾರು 88 ಕೋಟಿಯವರೆಗೆ ಹಾಕಿದ್ದಾರೆ. ಇದೂ ಅಲ್ಲದೆ ಇನ್ನೂ ಕೆಲವು ಯೋಜನೆಗಳಿಗಾಗಿ 150 ಕೋಟಿಯವರೆಗೆ ಬಂಡವಾಳ ಹಾಕಿದ್ದಾರೆ. ವಿದ್ಯುಚ್ಛಕ್ತಿ, ಪಿ.ಡಬ್ಲ್ಯು.ಡಿ., ಇದರ ಜೊತೆಗೆ ರಸ್ತೆಗಳು ಹಾಗೂ ಬಿಲ್ಡಿಂಗುಗಳಿಗಾಗಿ ಬೇರೆ ಖರ್ಚು ಮಾಡಿದ್ದಾರೆ. ಇವೊತ್ತು ಇವೆಲ್ಲದರ ಲೆಕ್ಕವನ್ನೂ ತೆಗೆದುಕೊಂಡು ನೋಡುವುದಾದರೆ ಸುಮಾರು 711 ಕೋಟಿಯವರೆಗೆ ಬಂಡವಾಳ ವಿತರಣೆಯಾಗಿದೆ ಮತ್ತು ಇದಕ್ಕೆ ಸರಿಯಾದ ಪ್ಲಾನು ಹಾಕಿಕೊಂಡು ಯಾವ ರೀತಿ ವಿತರಣೆ ಮಾಡಬೇಕು ಅದನ್ನು ಮಾಡಿ ಸರಿಯಾಗಿ ಖರ್ಚು ಮಾಡಿದರೂ ಇದರಿಂದ ಎಷ್ಟು ಲಾಭ ಬರಬೇಕಾಗಿತ್ತೊ ಅಷ್ಟು ಲಾಭ ಬರಲಿಲ್ಲ. ಬರೀ ಬಡ್ಡಿಗಾಗಿಯೇ ಹಣ ಕೊಡುತ್ತಿದ್ದಾರೆ ಮತ್ತು ಸಾಲ ತೀರಿಸುವುದಕ್ಕಾಗಿ ಮತ್ತು ಬಡ್ಡಿಗಾಗಿ ಸುಮಾರು 76 ಕೋಟಿಯವರೆಗೆ ಆಗುತ್ತದೆ. ಇದರ ಮೇಲೆ ನಮ್ಮ ದೇಶದ ಜನರ ಮೇಲೆ ಹೊರಿಸಿರುವ ಹೊರೆ 1963-64 ರಿಂದ ಇಲ್ಲಿಯವರೆಗೆ ಡೈರೆಕ್ಟ್ ಹಾಗೂ ಇಂಡೈರೆಕ್ಟ್ ಟ್ಯಾಕ್ಸಸ್ ಎಂದರೆ ಪ್ರತ್ಯಕ್ಷ ಹಾಗೂ ಪರೋಕ್ಷ ತೆರಿಗೆಗಳು ಸುಮಾರು 50 ಕೋಟಿ ಇದ್ದುದು. 70-71 ಕೋಟಿಯವರೆಗೆ

ಆಯಿತು, ಅನಂತರ 114 ಕೋಟಿಯವರೆಗೆ ಈಗ ಬರುತ್ತಿದೆ. ಎಂದರೆ ಈಗ ಹಿಂದೆ ಬರುತ್ತಿದ್ದ ತೆರಿಗೆಗಳಿಗಿಂತ ಎರಡೂವರೆ ಪಟ್ಟಿನಷ್ಟು ಹೆಚ್ಚು ಬರುತ್ತಿದೆ. ಜನ ಇಷ್ಟೊಂದು ಹಣವನ್ನು ತೆರಿಗೆ ರೂಪದಲ್ಲಿ ಕೊಡುತ್ತಿದ್ದರೂ ನಮ್ಮ ದೇಶದಲ್ಲಿ ಇರತಕ್ಕ ಸಾಲದ ಹೊರೆಯಲ್ಲಿ ಮೂರನೇ ಒಂದು ಭಾಗವಷ್ಟನ್ನೂ ತೀರಿಸಲು ಅವಕಾಶವಾಗಲಿಲ್ಲ. ಬಡ್ಜೆಟ್ಟಿನೊಳಗೆ ಸಾಲ ತೀರಿಸುವುದಕ್ಕೆ ಸಾಕಷ್ಟು ಬಂಡವಾಳ ಹಾಕಿಲ್ಲ. ಇದಕ್ಕೆ ಜವಾಬುದಾರರು ಯಾರು ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಇದಕ್ಕೆ ಕಾರಣ ಹಿಂದಿನಿಂದ 1-2-3 ಪಂಚವಾರ್ಷಿಕ ಯೋಜನೆಗಳನ್ನು ಸರಿಯಾಗಿ ಕಾರ್ಯಗತ ಮಾಡದೇ ಇರುವುದರಿಂದಲೇ ಇಂದು ಇಂತಹ ಸ್ಥಿತಿ ಬಂದಿದೆ. ಸಾಕಷ್ಟು ಬಂಡವಾಳ ಹಾಕಿದರೂ ಅದರಿಂದ ಉತ್ಪತ್ತಿ ಸಾಕಷ್ಟು ಬರಲಿಲ್ಲ. ಇದರಿಂದ ತೊಂದರೆಯಾಗಿದೆ. ಇಂದು ದೇಶದ ಜನಕ್ಕೆ ಮುಖ್ಯವಾಗಿ ಬೇಕಾಗಿರುವುದು, ಹೊಟ್ಟೆಗೆ ಅನ್ನ, ಬಟ್ಟೆ, ಇರಲು ಮನೆ, ಇವುಗಳನ್ನು ಒದಗಿಸಲು ಸಾಧನೆ ಮಾಡಬೇಕು. ಇದರಲ್ಲಿ ಸರ್ಕಾರ ವಿಫಲವಾಗಿವೆ ಎಂದು ಒಪ್ಪಿಕೊಳ್ಳಬೇಕಾಗಿದೆ. ದೇಶಕ್ಕೆ ಕಷ್ಟಗಳು ಏನೇ ಇರಲಿ ಇದರ ನಿಜಾಂಶವನ್ನು ಒಪ್ಪಲೇಬೇಕು. ಇದರ ಬಗ್ಗೆ ಅನೇಕ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರು ವಿವರವಾಗಿ ಹೇಳಿದ್ದಾರೆ. ನಾವು ಮಾಡತಕ್ಕ ಯೋಜನೆಗಳು ಯಾವ ಒಂದು ದೃಷ್ಟಿಯಲ್ಲಿಯೂ ಜನಗಳಿಗೆ ಒಳ್ಳೆಯದನ್ನು ಮಾಡಲಿಲ್ಲ ಮತ್ತು ನಾವು ಮಾಡುತ್ತಿರುವ ಯೋಜನೆಗಳಲ್ಲಿ ನ್ಯೂನತೆ ಇರುವುದರಿಂದ ನಮ್ಮ ಯೋಜನೆಗಳೆಲ್ಲಾ ವಿಫಲವಾಗಿವೆ ಎಂದು ಎಲ್ಲರೂ ಒಪ್ಪಲೇಬೇಕು. ಇದರ ಬಗ್ಗೆ ಒಂದು ವಾದವನ್ನು ಮಾನ್ಯ ಮಂತ್ರಿಗಳು ಹೇಳಬಹುದು. ನಾವು ಹಾಕಿಕೊಂಡಿರುವ ಯೋಜನೆಗಳು ಎಲ್ಲವೂ ವಿಫಲವಾಗಲು ಅದಕ್ಕೆ ಸಾಕಷ್ಟು ಸಹಾಯ ಸಕಾಲದಲ್ಲಿ ಸಿಗಲಿಲ್ಲ ಮತ್ತು ನೀರಾವರಿ ಯೋಜನೆಗಳನ್ನು 1947ರಲ್ಲಿ ಆರಂಭ ಮಾಡಿದರೂ ಅದರಿಂದ ಸಾಕಷ್ಟು ಪ್ರತಿಫಲ ದೊರೆಯಲಿಲ್ಲ ಎಂದು ಹೇಳಬಹುದು. ಎಲ್ಲ ರಾಜ್ಯಕ್ಕಿಂತಲೂ ನಮ್ಮ ರಾಜ್ಯದಲ್ಲಿ ನೀರಾವರಿ ಶೇಕಡಾವಾರು ಬಹು ಕಡಿಮೆ ಇದೆ ಎಂದರೆ ಶೇಕಡಾ ಹತ್ತರಷ್ಟು ಮಾತ್ರ ನೀರಾವರಿ ಆಗಿದೆ. ಇದನ್ನು ಅಭಿವೃದ್ಧಿ ಮಾಡಲು ಸರಕಾರ ಏಕೆ ಪ್ರಯತ್ನ ಮಾಡಲಿಲ್ಲ ಎಂದು ನಾನು ಕೇಳುತ್ತೇನೆ. ಇದಕ್ಕೆ ಸುಮಾರು ಏಳೆಂಟು ಕೋಟಿ ರೂಪಾಯಿಗಳಷ್ಟು ಜಾಸ್ತಿ ಖರ್ಚು ಮಾಡಿದ್ದರೂ ಇದರಿಂದ ತಕ್ಕ ಪ್ರತಿಫಲ ಏಕೆ ದೊರಕಲಿಲ್ಲ? ಸರಕಾರ ಎಲ್ಲಿ ತನ್ನ ಕೆಲಸಗಳನ್ನು ಸರಿಯಾಗಿ ಮಾಡುವುದಿಲ್ಲವೋ ಅದನ್ನು ಸರಿಪಡಿಸಲು ಸರಕಾರದ ಗಮನಕ್ಕೆ ತರುವುದು ವಿರೋಧ ಪಕ್ಷದವರ ಕರ್ತವ್ಯ. ಸುಮಾರು ಇಪ್ಪತ್ತು ವರ್ಷಗಳಿಂದಲೂ ಆಡಳಿತದ ಹೊರೆಯನ್ನು ಹೊತ್ತಿರುವ ಕಾಂಗ್ರೆಸ್ಸು ಸರಕಾರ ಇದನ್ನು ಮಾಡಬೇಕಾಗಿತ್ತು. ಇದು ಅವರ ಕರ್ತವ್ಯ. ಇದರ ಬಗ್ಗೆ ಆಡಳಿತದ ಹೊಣೆ ಹೊತ್ತವರು ಸರಿಯಾಗಿ ವಿವರಗಳನ್ನು ಕೊಡಲೇಬೇಕು. ಸುಮಾರು 22 ವರ್ಷಗಳಿಂದಲೂ ಆಡಳಿತವನ್ನು ಕಾಂಗ್ರೆಸು ಪಕ್ಷದವರೇ ಇಟ್ಟುಕೊಂಡು ಒಂದು, ಎರಡು, ಮೂರು ಯೋಜನೆಗಳನ್ನು ಮಾಡಿದರೂ ಅದನ್ನು ಸರಿಯಾಗಿ ಕಾರ್ಯಗತ ಮಾಡಲು ಸಾಕಷ್ಟು ಪ್ರಯತ್ನ ಮಾಡಲಿಲ್ಲ. ಇದರಿಂದ ನಾವು ಇಷ್ಟು ಹಿಂದುಳಿದಿದ್ದೇವೆ. ನೀವು ಕೇಳಿದಷ್ಟು ಹಣವನ್ನು ನಿಮಗೆ ನಾವು ಒದಗಿಸಿಕೊಟ್ಟರೂ ನೀವೇಕೆ ಅದರಂತೆ ಕೆಲಸಗಳನ್ನು ಕಾರ್ಯಗತವಾಗುವಂತೆ ಮಾಡಲಿಲ್ಲ ಎಂದು ಇಲ್ಲಿ ಕೇಳಬೇಕಾಗಿದೆ. ನಿಮ್ಮ ಖಜಾನೆಗೆ ನಿಮಗೆ ಬೇಕಾಗುವ ಹಣವನ್ನು ಖರ್ಚು ಮಾಡಲು ಅವಕಾಶ ಕೊಡಲಾಗಿತ್ತು. ಆದರೆ ನೀವು ಮಾಡುವ ಕಾರ್ಯಕ್ರಮಗಳು ವಿಫಲವಾದವು. ಇದು ಕಾಂಗ್ರೆಸ್ ಸರಕಾರದ ಜವಾಬುದಾರಿ. ದೇಶದ ಅಭಿವೃದ್ಧಿ ಕಡೆಗೆ ಸಾಕಷ್ಟು ಪ್ರಯತ್ನ ಮಾಡಲಿಲ್ಲ. ನಮ್ಮ ದೇಶದಲ್ಲಿ ಅರ್ಥಸಚಿವರು ಇಂದು ಅವರ ಭಾಷಣವನ್ನು ಕನ್ನಡದಲ್ಲಿ ಮಾಡಿದರು. ಇದಕ್ಕೆ ಅವರು ಅಭಿನಂದನಾರ್ಹರು ಮತ್ತು ಇಂದು ದೇಶದ ಜನರಲ್ಲಿ ಕನ್ನಡವನ್ನು ಹೇಗೆ ಅಭಿವೃದ್ಧಿ ಮಾಡಬೇಕು ಎನ್ನುವುದಕ್ಕೆ ನಮ್ಮ ಸಾಹಿತ್ಯ ಪರಿಷತ್ತಿಗೆ ಸಹಾಯ ಮಾಡಿದ್ದಾರೆ. ಇದೂ ಅಲ್ಲದೆ ಇನ್ನೇನು ಕಾರ್ಯಗಳನ್ನು ಇದರ ಬಗ್ಗೆ ಮಾಡಬೇಕು ಎನ್ನುವುದನ್ನೂ ಇದರಲ್ಲಿ ಹೇಳಿದ್ದಾರೆ. ಅವರು ಹೇಳುವಂತೆ ನಮ್ಮ ಕನ್ನಡ ಸಾಹಿತ್ಯವನ್ನು ಇನ್ನೂ ಹೆಚ್ಚಾಗಿ ಬೆಳೆಸಬೇಕು. ಅವರೆ ಎಷ್ಟುಮಟ್ಟಿಗೆ ಸಹಾಯ ಮಾಡಬೇಕಾಗಿತ್ತೋ ಅಷ್ಟು ಮಟ್ಟಿಗೆ ಇದುವರೆಗೆ ಆಗಲಿಲ್ಲ. ಇದೂ ಅಲ್ಲದೆ ನಮ್ಮ ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಲೇ ಬರುತ್ತಿದೆ. ಇದನ್ನು ಬಗೆಹರಿಸಲು ಸರಿಯಾದ ಕಾರ್ಯಕ್ರಮವನ್ನು ಕೈಗೊಂಡಿಲ್ಲ ಎನ್ನುವ ಒಂದು ಕೂಗು ಏಕಪ್ರಕಾರವಾಗಿ ಬರುತ್ತಲೇ ಇದೆ.

ಸರ್ಕಾರೀ ಖಜಾನೆಯು ಹಣ ತುಂಬಿಸುವುದಕ್ಕಾಗಿ ತೆರಿಗೆಯನ್ನು ನಾನಾ ರೂಪದಲ್ಲಿ ಹೆಚ್ಚಿಸುತ್ತಿದ್ದೀರಿ, ತೆರಿಗೆ ರೀತಿಯನ್ನೇ ಬದಲಾಯಿಸಿ ಈಗ ಮತ್ತಷ್ಟು ಹೆಚ್ಚಿನ ತೆರಿಗೆಯನ್ನು ಹಾಕುವುದಕ್ಕೆ ಹೊರಟಿದ್ದೀರಿ. ಸರ್ಕಾರದ ತೆರಿಗೆ ನೀತಿಯಿಂದ ದೇಶದ ಜನ ಎಗ್ಗಿಲ್ಲದಂತರಾಗಿದ್ದಾರೆ. ಕೇಂದ್ರದ ತೆರಿಗೆ ನೀತಿ ಕೂಡ ಪ್ರಕಟವಾಗಿದೆ. ಕೇಂದ್ರಸರ್ಕಾರದವರು ಮತ್ತು ಈ ರಾಜ್ಯ ಸರ್ಕಾರದವರಿಬ್ಬರೂ ಸೇರಿಕೊಂಡು ಸಾಮಾನ್ಯ ಜನರ ಮೇಲೆ ತೆರಿಗೆಯ ಮಳೆಯನ್ನೇ ಸುರಿಸುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳ ತೆರಿಗೆಯ ಮಧ್ಯದಲ್ಲಿ ಬಡವರು ಸಿಕ್ಕಿಕೊಂಡು ಚಚ್ಚಿಯಾಗಿದ್ದಾರೆ. ತೆರಿಗೆ ಎನ್ನತಕ್ಕಂಥ ಸಮುದ್ರದಲ್ಲಿ ಬಡವರು ಮುಳುಗಿ ಹೋಗಿದ್ದಾರೆ, ರಾಜ್ಯ ಸರ್ಕಾರ ಯಾವ

(ಶ್ರೀ ಎಸ್. ಶಿವಪ್ಪ)

ಯಾವ ಬಾಬಿನ ಮೇಲೆ ತೆರಿಗೆಯನ್ನು ಎಷ್ಟೆಷ್ಟು ಹಾಕಬೇಕೆಂದಿದೆ ಎಂಬುದನ್ನು ಮಾನ್ಯ ಆರ್ಥಿಕ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ''ವಿಲಾಸ ಸಾಮಗ್ರಿ''ಗಳ ತೆರಿಗೆ ದರವನ್ನು ಶೇಕಡ 11 ರಿಂದ 12ಕ್ಕೆ ಏರಿಸಲಾಗುವುದು ಎಂದು ಹೇಳಿದ್ದಾರೆ. ವಿಲಾಸ ಸಾಮಗ್ರಿಗಳು ಯಾವುವು ಎಂಬುದನ್ನು ಹೇಳಿಲ್ಲ. ಸಕ್ಕರೆ, ಸೋಪು, ಸಿಗರೇಟ್, ಪೆಟ್ರೋಲ್ ಎಣ್ಣೆ ಮುಂತಾದ ಪದಾರ್ಥಗಳ ಮೇಲಿನ ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ. ಇವು ವಿಲಾಸ ಸಾಮಗ್ರಿಗಳೇ ಎಂದು ಕೇಳುತ್ತೇನೆ. ಚಾರ್‌ಮಿನಾರ್ ಸಿಗರೇಟ್ ಕೂಡ ವಿಲಾಸ ವಸ್ತುವೇ ಎಂದು ಕೇಳುತ್ತೇನೆ. ಮಂತ್ರಿಗಳು ಸೇದುವ ಸಿಗರೇಟ್ ವಿಲಾಸ ವಸ್ತು ಎಂದು ಹೇಳಬಹುದು.

ಶ್ರೀ ಆರ್. ದಯಾನಂದಸಾಗರ್.—ಎಲ್ಲ ವಿಧಿವಿಲಾಸ.

ಶ್ರೀ ಎಸ್. ಶಿವಪ್ಪ.—ಒಬ್ಬ ವಿದ್ಯಾರ್ಥಿ ಸ್ಕೂಟರ್ ಇಟ್ಟುಕೊಂಡಿದ್ದರೆ ಅದು ಕೂಡ ವಿಲಾಸ ವಸ್ತು ಎಂದು ಹೇಳಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಗಳು 'ಇಂಪಾಲ' ಕಾರನ್ನು ಉಪಯೋಗಿಸುತ್ತಿದ್ದಾರೆ. ಇಂತಹ ದೊಡ್ಡ ದೊಡ್ಡ ಕಾರುಗಳನ್ನು ಇಟ್ಟುಕೊಂಡಿರುವುದು ವಿಲಾಸ ವಸ್ತುವಾಗುತ್ತದೆ. ಇಂತಹ ದೊಡ್ಡ ದೊಡ್ಡ ಕಾರುಗಳನ್ನು ಇಟ್ಟುಕೊಂಡಿರುವವರಿಗೆ ಹೆಚ್ಚಿನ ತೆರಿಗೆಯನ್ನು ಹಾಕುವುದನ್ನು ಬಿಟ್ಟು ಬಡಪಾಯಿ ಒಬ್ಬ ವಿದ್ಯಾರ್ಥಿ ಸ್ಕೂಟರ್ ಇಟ್ಟುಕೊಂಡಿದ್ದರೆ ಅದರ ಮೇಲೆ ತೆರಿಗೆ ಹಾಕುವುದು ಸರಿಯಲ್ಲ. ವಿಲಾಸ ಸಾಮಗ್ರಿಗಳಲ್ಲಿ ಸ್ಯಾಂಡಲ್ ಸೋಪು ಕೂಡ ಸೇರುತ್ತದೆಯೇ ಎಂಬುದನ್ನು ತಿಳಿಸಬೇಕು. ವಿವರಗಳನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ವಿಲಾಸ ಸಾಮಗ್ರಿಗಳ ಮೇಲೆ ಕೇಂದ್ರಸರ್ಕಾರದವರು ಸಹ ತೆರಿಗೆ ಹಾಕುತ್ತೇವೆಂದು ಹೇಳಿದ್ದಾರೆ. ಆದರೆ ವಿಲಾಸ ಸಾಮಗ್ರಿಗಳ ಹೆಸರುಗಳನ್ನು ಹೇಳಿಲ್ಲ. ಒಬ್ಬ ಬಡವ ಹೆಂಡ ಕುಡಿಯುತ್ತಾನೆ. ಅದು ಅವನ ಆಹಾರವಾಗಿರುತ್ತದೆ. ಅದನ್ನು ವಿಲಾಸವಸ್ತು ಎಂದು ಹೇಗೆ ಹೇಳುವುದಕ್ಕಾಗುತ್ತದೆ? ಕಾಫಿ, ಟೀ ಮುಂತಾದ ವಸ್ತುಗಳ ಮೇಲೆ ತೆರಿಗೆ ಹಾಕುವುದು ಸರಿಯಲ್ಲ. ಇದನ್ನು ಸರ್ಕಾರದವರು ಮತ್ತೆ ವಿಚಾರ ಮಾಡಬೇಕು. ''ಬೀಜಗಳ ಮೇಲಣ ಖರೀದಿ ತೆರಿಗೆಯನ್ನು ಮೊದಲ ಖರೀದಿದಾರನಿಗೆ ವರ್ಗಾಯಿಸುವ ಮೂಲಕ ಎಣ್ಣೆ ಗಾಣಿಗರ ಮೇಲಣ ಕರಭಾರದಲ್ಲಿ ಮಾರ್ಪಾಡು'' ಎಂಬುದಾಗಿ ಹೇಳಿದ್ದಾರೆ. ಇದರಿಂದ ಮಾಲೀಕನಿಗೆ ಅನುಕೂಲವಾಗುತ್ತದೆ. ಬಂಡವಾಳದಾರ ಕೊಡುತ್ತಿದ್ದ ತೆರಿಗೆಯನ್ನು ತಪ್ಪಿಸಿ ಮೊದಲ ಖರೀದಿದಾರನ ಮೇಲೆ ಏತಕ್ಕೆ ವರ್ಗಾಯಿಸಲಾಯಿತು ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ''30 ಕ್ಕಿಂತಲೂ ಹೆಚ್ಚು ಸರಕುಗಳನ್ನು ಬಹುಮುಖ ತೆರಿಗೆಯಿಂದ ಏಕಮುಖ ತೆರಿಗೆಗೆ ವರ್ಗಾಯಿಸುವುದು'' ಎಂದು ಹೇಳಲಾಗಿದೆ. ಆ 30 ಸಾಮಾನುಗಳು ಯಾವುವು ಎಂಬುದನ್ನು ಇಲ್ಲಿ ಹೇಳಿಲ್ಲ. ಅದನ್ನು ಈ ಸಭೆಗೆ ತಿಳಿಸುವುದು ಒಳ್ಳೆಯದು. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿ ನೋಡಿದರೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿ ದರ ಕಡಿಮೆಯಾಗಿದೆ ಎಂಬ ಕಾರಣ ಕೊಟ್ಟು ವಿದ್ಯುಚ್ಛಕ್ತಿ ದರವನ್ನು ಜಾಸ್ತಿ ಮಾಡಿದ್ದಾರೆ. ಇಡೀ ದೇಶದಲ್ಲಿ ಮೈಸೂರು ರಾಜ್ಯವೇ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿರುವುದು. ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಲು ನಮ್ಮ ರಾಜ್ಯದಲ್ಲಿ ಪ್ರಕೃತಿ ಕೂಡ ಅನುಕೂಲವಾಗಿದೆ. ಬೇರೆ ರಾಜ್ಯಗಳಲ್ಲಿ ಥರ್ಮಲ್ ಯೂನಿಟ್ ಮೂಲಕ ವಿದ್ಯುಚ್ಛಕ್ತಿಯನ್ನು ತಯಾರು ಮಾಡುತ್ತಿರುವುದರಿಂದ ಅವರಿಗೆ ಹೆಚ್ಚು ಖರ್ಚು ಬರುತ್ತಿದೆ. ಆದಕಾರಣ ಅಲ್ಲಿ ವಿದ್ಯುಚ್ಛಕ್ತಿಯ ದರವೂ ಕೂಡ ಜಾಸ್ತಿ ಇದೆ. ಆದರೆ ನಮ್ಮ ರಾಜ್ಯದಲ್ಲಿ ಹೈಡ್ರೋ ಎಲಕ್ಟ್ರಿಕ್‌ನಿಂದ ವಿದ್ಯುತ್ ತಯಾರಾಗುತ್ತಿದೆ, ಬಹಳ ಕಡಿಮೆ ಖರ್ಚಿನಲ್ಲಿ ತಯಾರಾಗುತ್ತಿದೆ. ಶರಾವತಿ ಮತ್ತು ಕಾವೇರಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳು ಪ್ರಕೃತಿ ದತ್ತವಾದಂಥ ಯೋಜನೆಗಳು. ಬಹಳ ಕಡಿಮೆ ಖರ್ಚಿನಲ್ಲಿ ವಿದ್ಯುತ್ ತಯಾರಾಗುವುದರಿಂದ ಜನಸಾಮಾನ್ಯರಿಗೂ ಕೂಡ ಕಡಿಮೆ ಖರ್ಚಿನಲ್ಲಿ ವಿದ್ಯುತ್ತನ್ನು ಒದಗಿಸುವುದು ಸರ್ಕಾರದ ಕರ್ತವ್ಯ. ಅದು ಬಿಟ್ಟು ಜನತೆ ಹೆಚ್ಚು ಹಣ ಕೊಡಬೇಕೆಂಬುದು ಹೇಳುವುದು ಸರಿಯಲ್ಲ. ಕಟ್ಟಡಗಳ ಮೇಲೆ ಶೇಕಡ 50 ರಷ್ಟು ನಗರಾಭಿವೃದ್ಧಿ ಸರ್ಚಾರ್ಜ್ ವಿಧಿಸಬೇಕೆಂದಿದ್ದೀರಿ. ಇದು ಕೇವಲ ಬೆಂಗಳೂರಿಗೆ ಮಾತ್ರವಲ್ಲ, ಎಲ್ಲಾ ಮುನಿಸಿಪಾಲಿಟಿಗಳ ಸರಹದ್ದಿನಲ್ಲಿರತಕ್ಕಂಥ ಕಟ್ಟಡಗಳ ಮೇಲೂ ಸಹ ಈ ರೀತಿ ತೆರಿಗೆ ಹಾಕುವುದಕ್ಕೆ ಹೊರಟಿದ್ದೀರಿ. ಸಾಮೂಹಿಕವಾಗಿ ಎಲ್ಲಾ ಕಡೆಗಳಲ್ಲಿಯೂ ಕೂಡ ಈ ರೀತಿ ಕಟ್ಟಡಗಳ ಮೇಲೆ ತೆರಿಗೆಯನ್ನು ಹೆಚ್ಚು ಮಾಡುವುದು ಸರಿಯೇ ಎಂಬುದನ್ನು ಸರ್ಕಾರದವರು ಮತ್ತೊಮ್ಮೆ ಯೋಚನೆ ಮಾಡಬೇಕು. ಒಬ್ಬ ಬಡವ 5 ಅಥವಾ 10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಮನೆ ಕಟ್ಟಿಸಿಕೊಂಡಿರುತ್ತಾನೆ, ಮತ್ತೊಬ್ಬ ಸಾಹುಕಾರ ಸಾಲು ಸಾಲು ಮನೆಗಳನ್ನೇ ಕಟ್ಟಿಸಿರುತ್ತಾನೆ, ಇವರಿಬ್ಬರಿಗೂ ಕೂಡ ಒಂದೇ ರೀತಿ ತೆರಿಗೆಯನ್ನು ಹೆಚ್ಚು ಮಾಡುವುದು ಸರಿಯಲ್ಲ. ಸಾಹುಕಾರರ ಮೇಲೆ ಬೇಕಾದರೆ ತೆರಿಗೆಯನ್ನು

ಹೆಚ್ಚು ಹಾಕಲಿ. ಆದರೆ ಬಡವರ ಮೇಲೆ ಹಾಕುವುದು ಸರಿಯಲ್ಲ. ಕಟ್ಟಡಗಳ ಮೇಲೆ ತೆರಿಗೆ ಹಾಕುವ ವಿಚಾರದಲ್ಲಿ ಬಡವರಿಗೆ ಯಾವ ರೀತಿ ರಿಯಾಯಿತಿ ತೋರಿಸಲಾಗುತ್ತದೆ ಎಂಬುದನ್ನು ವಿಷದೀಕರಿಸಿದ್ದರೆ ಚೆನ್ನಾಗಿತ್ತು. ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ಸರ್ಕಾರದವರು ಸಾಧಿಸಿರುವ ಕೆಲಸಗಳ ಬಗ್ಗೆ ಹೇಳಿದ್ದಾರೆ. ಮತ್ತು ಈ ದಶಕದಲ್ಲಿ ಸಾಧಿಸಬೇಕೆಂದಿರುವ ವಿಚಾರಗಳನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಸಾಧಿಸಬೇಕೆಂದಿರುವ ಗುರಿಗಳಲ್ಲಿ 10 ಅಂಶಗಳನ್ನು ಪ್ರಸ್ತಾಪ ಮಾಡಿದ್ದಾರೆ. ಕಳೆದ ದಶಕದಲ್ಲಿ ಸಾಧಿಸಿರುವ ಬಗ್ಗೆ ಹೇಳುತ್ತಾ ಪ್ರತಿವರ್ಷ ತಲಾ ಆದಾಯ ಶೇಕಡಾ ಎರಡೂವರೆಯಷ್ಟು ಹೆಚ್ಚುತ್ತ ಬಂದಿದೆ ಎಂದು ಹೇಳಿದ್ದಾರೆ. ಪಂಪ್‌ಸೆಟ್ಟುಗಳ ಸಂಖ್ಯೆಯನ್ನು ಜಾಸ್ತಿ ಮಾಡಲಾಗಿದೆ ಎಂದು ಹೇಳಿದ್ದಾರೆ. ಸ್ಕೂಲ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಲಾಗಿದೆ, ರೋಡುಗಳ ಉದ್ದ ಜಾಸ್ತಿಯಾಗಿದೆ, ವಿದ್ಯುಚ್ಛಕ್ತಿಯ ಪ್ರೊಡಕ್ಷನ್ ಜಾಸ್ತಿಯಾಗಿದೆ ಇತ್ಯಾದಿ ಇತ್ಯಾದಿಯಾಗಿ ಹಲವು ಅಂಶಗಳನ್ನು ಹೇಳಿದ್ದಾರೆ. ಇದರ ಜೊತೆಗೆ ಜನಸಂಖ್ಯೆಯೂ ಕೂಡ ಪ್ರತಿವರ್ಷ 2.4 ರಷ್ಟು ಹೆಚ್ಚಾಗುತ್ತಾಬಂದಿದೆ ಎಂಬ ಮಾತನ್ನು ಸಹ ಹೇಳಿದ್ದಾರೆ. ತಲಾ ಆದಾಯ ಜಾಸ್ತಿಯಾದಂತೆ ಜನಸಂಖ್ಯೆಯೂ ಕೂಡ ಜಾಸ್ತಿಯಾಗಿದೆ. ಇದರಿಂದ ಹೆಚ್ಚಿನ ಪ್ರಗತಿ ಸಾಧಿಸುವುದಕ್ಕೆ ತೊಂದರೆಯಾಗಿದೆ ಎಂದು ಸರ್ಕಾರದವರು ಹೇಳಬಹುದು. ನಮ್ಮ ದೇಶದಲ್ಲಿ ನಿರುದ್ಯೋಗದ ಪ್ರಶ್ನೆಯೂ ಕೂಡ ಜಾಸ್ತಿಯಾಗುತ್ತಿದೆ. ರಾಜ್ಯದಲ್ಲಿನ ಉದ್ಯೋಗ ವಿನಿಮಯ ಕೇಂದ್ರಗಳ ದಾಖಲೆಗಳ ಪ್ರಕಾರ 1960ರಲ್ಲಿ 'ಜೀವಂತ' ರಿಜಿಸ್ಟರಿನಲ್ಲಿದ್ದ ಸಂಖ್ಯೆ 68,654 ಇದ್ದರೆ 1969ರ ಅಕ್ಟೋಬರ್ ಅಂತ್ಯದಲ್ಲಿ ಅದು 2,13,601ಕ್ಕೆ ಹೆಚ್ಚಿದೆ. ಇದರಲ್ಲಿ ವಿದ್ಯಾವಂತರು ಮತ್ತು ಅವಿದ್ಯಾವಂತರು ಎಲ್ಲರೂ ಇದ್ದಾರೆ. ಮೂರು ಯೋಜನೆಗಳು ಮುಗಿದಮೇಲೂ ಕೂಡ ಎರಡೂವರೆ ಲಕ್ಷದಷ್ಟು ಜನ ನಿರುದ್ಯೋಗಿಗಳು ಇದ್ದಾರೆಂಬುದು ಗೊತ್ತಾಗುತ್ತಿದೆ. ಇವತ್ತು ಪೇಟೆಯಲ್ಲಿರುವ ಜನರಿಗಿಂತ ಹಳ್ಳಿಯಲ್ಲಿರುವ ಜನರ ಸ್ಥಿತಿ ತುಂಬ ಶೋಚನೀಯವಾಗಿದೆ. ಹಳ್ಳಿಗಳಲ್ಲಿ ಎರಡು ದಿವಸಕ್ಕೆ ಒಂದು ಊಟ, ಮೂರು ದಿವಸಕ್ಕೆ ಒಮ್ಮೆ ಊಟ ಮಾಡುವ ಜನರು ಬಹಳ ಸಂಖ್ಯೆಯಲ್ಲಿ ಇದ್ದಾರೆ.

2–30 P.M.

ಬೆಂಗಳೂರು ಪಟ್ಟಣದಲ್ಲಿ ಎಷ್ಟು ಇದೆ, ಬೇರೆ ನಗರಗಳಲ್ಲಿ ಎಷ್ಟು ಜನ ಇದ್ದಾರೆ, ಅರಹೊಟ್ಟೆ ಊಟ ಕೂಡ ಇಲ್ಲದೆ ಇರುವವರು ಎಷ್ಟು ಜನ ಇದ್ದಾರೆ? ಮೈಮೇಲೆ ಬಟ್ಟೆಯಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ, ವಾಸಕ್ಕೆ ಮನೆಯಿಲ್ಲ, ಇಂಥವರು ಇವೊತ್ತು ದೇಶದಲ್ಲಿ ಎಷ್ಟೋಜನ ಇದ್ದಾರೆ. ಫುಟ್‌ಪಾತ್ ಮೇಲೆ ಮಲಗುವ ಜನ ಎಷ್ಟೋ ಇದ್ದಾರೆ, ಇವರುಗಳೆಲ್ಲರ ಸ್ಟ್ಯಾಟಿಸ್ಟಿಕ್ಸ್ ನಮ್ಮ ರಾಜ್ಯದಲ್ಲಿ ಇದೆಯೋ ಎಂದು ನಾನು ಕೇಳುತ್ತೇನೆ. ಸ್ವಲ್ಪಮಟ್ಟಿಗೆ ಸಾಧನೆಯಾಗಿರಬಹುದು. ಆದರೆ ಈ ಬಗ್ಗೆ ಎಷ್ಟರಮಟ್ಟಿಗೆ ಸಾಧನೆಯಾಗಬೇಕೆಂದು ನಾವು ನಿರೀಕ್ಷಣೆ ಮಾಡಿದ್ದೆವೋ ಅಷ್ಟು ಸಾಧನೆಯಾಗಿಲ್ಲ. ನಿರುದ್ಯೋಗವನ್ನು ಎಷ್ಟು ನಿವಾರಣೆ ಮಾಡಿದ್ದೀರಿ? ನಿರುದ್ಯೋಗಿಗಳ ಸಂಖ್ಯೆ ಕಡಿಮೆಯಾಗಿದೆಯೋ ಅಥವಾ ಬೆಳೆದಿದೆಯೋ ಹೇಗೆ, ಮತ್ತು ಅದಕ್ಕೆ ಕಾರಣವನ್ನು ಕೊಟ್ಟು ಅವರ ಅಂಕಿ ಸಂಖ್ಯೆಗಳನ್ನು ಈ ಸಭೆಯ ಮುಂದೆ ಇಟ್ಟಿದ್ದರೆ ನಾನು ನಿಮ್ಮನ್ನು ಬಹುವಾಗಿ ಮೆಚ್ಚುತ್ತಿದ್ದೆ. ಆ ಅಂಕಿ ಸಂಖ್ಯೆಗಳನ್ನು ಈ ಸಭೆಯ ಮುಂದೆ ಇಟ್ಟಿಲ್ಲ. ಕೇವಲ ಕೊನೆಯ ವರ್ಷದ ಸಂಖ್ಯೆಯನ್ನು ಇಟ್ಟಿದ್ದಾರೆ. ಇದೂ ಸರಿಯಾಗಿಲ್ಲ. ನಿಜವಾದ ಅಂಕಿ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ದೇಶದಲ್ಲಿ ಬಡತನ ಬೆಳೆದಿದೆ. ಈ ಬಗ್ಗೆ ಈ ಸಭೆಗಾದರೂ ತಿಳುವಳಿಕೆಯನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಕೆಳವರ್ಗದ ಜನ ಏನು ಇದ್ದಾರೆ ಅವರು ಎಲ್ಲಿದ್ದರು ಅಲ್ಲಿಯೇ ಇದ್ದಾರೆ. ಕೆಲವರು ಇನ್ನೂ ಹಿಂದಕ್ಕೆ ಹೋಗಿದ್ದಾರೆ. ದುರ್ಭಿಕ್ಷಕಾಲದಲ್ಲಿ ಅನೇಕಕಡೆ ಹಳ್ಳಿಗಳಲ್ಲಿ ಜನಗಳು ತಮ್ಮ ಮಕ್ಕಳನ್ನು ಮಾರಿದ್ದಾರೆ. ಹೆಂಡತಿಯ ತಾಳಿಯನ್ನು ಮಾರಿ ಜೀವನವನ್ನು ನಡೆಸಿದ್ದಾರೆ. ಇದು ದೇಶದಲ್ಲಿ ಆರ್ಥಿಕ ಪ್ರಗತಿಯೇ ಎಂದು ನಾನು ಕೇಳುತ್ತಿದ್ದೇನೆ. ಈ ಸರ್ಕಾರ ರಾಜ್ಯದಲ್ಲಿ ಹಣವನ್ನು ಖರ್ಚುಮಾಡಿ ಜನರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ್ದೇವೆ, ದೇಶದ ಆರ್ಥಿಕ ಪ್ರಗತಿಯನ್ನು ಸಾಧನೆ ಮಾಡಿದ್ದೇವೆ ಎಂದು ಹೇಳತಕ್ಕಂಥ ಶಕ್ತಿ ಇದೆಯೇ? ಆ ಶಕ್ತಿ ಇಲ್ಲದೆ ಇವರು ಸುಮ್ಮನೆ ಕಾಲಕಳೆಯುತ್ತಿದ್ದಾರೆ. ಬಜೆಟ್ಟಿನಲ್ಲಿ ಏನು ಹೇಳಿದ್ದಾರೆ, ಹಿಂದಿನ ಮತ್ತು ಮುಂದಿನ ಅಂಕಿ ಅಂಶಗಳನ್ನು ಇಲ್ಲಿ ಕಾಣಿಸಿವೆ ಎಲ್ಲವೂ ತೃಪ್ತಿಕರವಾಗಿದೆ ಎಂದು ಹೇಳಿದ್ದಾರೆ. ಇವರು ಮಾಡಿರತಕ್ಕ ಕೆಲವು ಇಲಾಖೆಗಳ ವಿಮರ್ಶೆಯನ್ನು ಮಾಡಿ, ಏನು ಮಾಡಿದ್ದಾರೆ ಮತ್ತು ಮುಂದೆ ಏನು ಮಾಡುತ್ತಾರೆ ಎಂಬುದನ್ನು ಹೇಳಿದ್ದಾರೆ. ಕೈಗಾರಿಕಾ ನೀತಿ, ನೀರಾವರಿ ಯೋಜನೆಯ ನೀತಿ ನಮ್ಮ ಕೈಯ್ಯಲ್ಲಿ ಇಲ್ಲ, ಕೇಂದ್ರದ ಕೈಯ್ಯಲ್ಲಿ ಇದೆ, ಕೇಂದ್ರ ಸರ್ಕಾರದ ಸಹಾಯದಿಂದ ಈ ದೇಶದ ಕೈಗಾರಿಕಾ ನೀತಿ ನಿಂತಿದೆ ಎಂದು ಹೇಳಿದ್ದಾರೆ. ದೊಡ್ಡ ದೊಡ್ಡ ಕೈಗಾರಿಕೆಗಳ ನೀತಿ

(ಶ್ರೀ ಎಸ್. ಶಿವಪ್ಪ)

ಕೇಂದ್ರ ಸರ್ಕಾರದ ಸಹಾಯದಿಂದ ಇದೆ ಅದನ್ನು ನಾನು ಒಪ್ಪುತ್ತೇನೆ. ಕೇಂದ್ರ ಸರ್ಕಾರ ಬೇರೆ ಅಲ್ಲ, ರಾಜ್ಯ ಸರ್ಕಾರ ಬೇರೆ ಅಲ್ಲ. 22 ವರ್ಷಗಳ ಕಾಲ ಒಂದೇ ಪಕ್ಷದವರು ಎಂದರೆ ಕಾಂಗ್ರೆಸ್ ಪಕ್ಷದವರು ಈ ದೇಶವನ್ನು ಆಳಿದ್ದಾರೆ. ಕೆಲವು ದಿವಸಗಳು, ಈಗ ಬೇರೆ ಸರ್ಕಾರ ಇರಬಹುದು. 22 ವರ್ಷಗಳ ಕಾಲ ನಿರಾತಂಕವಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಒಂದು ಪಕ್ಷದವರ ಕೈಯ್ಯಲ್ಲಿ ಇದ್ದು ಕೈಗಾರಿಕೆಯ ನೀತಿಯ ವಿಷಯದಲ್ಲಾಗಲೀ, ನೀರಾವರಿ ನೀತಿಯ ವಿಷಯದಲ್ಲಾಗಲೀ ರಾಜ್ಯಕ್ಕೆ ಇಷ್ಟೊಂದು ಅನ್ಯಾಯವಾಗಿದ್ದರೆ ಈಗ 22 ವರ್ಷಗಳಿಂದ ಅಧಿಕಾರದಲ್ಲಿರುವ ಸರ್ಕಾರದಿಂದ ಅಲ್ಲವೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಏತಕ್ಕೆ ಈ ಬಗ್ಗೆ ಸಾಧನೆಯಾಗಲಿಲ್ಲ? ಇಂದಿರಾಗಾಂಧಿಯವರ ಸರ್ಕಾರವಾಗಲೀ, ವೀರೇಂದ್ರ ಪಾಟೀಲರ ಸರ್ಕಾರವಾಗಲೀ, ಮುಖ್ಯವಲ್ಲ. ನಮಗೆ ಮುಖ್ಯವಾಗಿ ಬೇಕಾಗಿರುವುದು ರಾಜ್ಯದ ಪ್ರಗತಿ. ಕಾಂಗ್ರೆಸ್ ಸರ್ಕಾರ 22 ವರ್ಷಗಳಿಂದ ಮಾಡಿದಂತಹ ಅಪರಾಧ ನಿಮ್ಮ ನಿಮ್ಮ ವೈಷಮ್ಯಗಳಿಂದ ಹೊರಗೆ ಬರುತ್ತಿವೆ. ಈ ದೃಷ್ಟಿಯಿಂದ ಈಗ 22 ವರ್ಷಗಳಿಂದ ದೇಶದಲ್ಲಿ ಅಭಿವೃದ್ಧಿಯಾಗಿಲ್ಲ. ಶ್ರೀಮಾನ್ ಸಿದ್ಧವೀರಪ್ಪನವರು ಮಂತ್ರಿಗಳಾಗಿದ್ದರು. ಶ್ರೀಮಾನ್ ಚನ್ನಬಸಪ್ಪನವರು ಮಂತ್ರಿಗಳಾಗಿದ್ದರು. ಅವರ ಬಾಯಿಂದಲೇ ಸಂಗತಿಗಳು ಹೊರಗೆ ಬರುತ್ತಿವೆ. 22 ವರ್ಷಗಳ ಜವಾಬ್ದಾರಿ ಕಾಂಗ್ರೆಸ್ ಸರ್ಕಾರದ ಮೇಲೆ ಬಿದ್ದಿದೆ. ಇವರು ಕಾಂಗ್ರೆಸ್‌ನಿಂದ ಹೊರಗೆ ಬಂದಮೇಲೆ ಅವರಲ್ಲಿ ಒಬ್ಬರಿಗೊಬ್ಬರಿಗೆ ಇದ್ದಂತಹ ವೈಷಮ್ಯಗಳು ಹೊರಗಡೆ ಬರುತ್ತಿವೆ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮಾನ್ ನಿಜಲಿಂಗಪ್ಪನವರು ದೇಶದಲ್ಲಿ ಬಡತನ ಜಾಸ್ತಿಯಾಗಿದೆ, ಬಡವರ ಸಂಖ್ಯೆ ಜಾಸ್ತಿಯಾಗಿದೆ, ಅದಕ್ಕೆ ಶ್ರೀಮತಿ ಇಂದಿರಾಗಾಂಧಿಯವರು ಏನು ಮಾಡಿದ್ದಾರೆ ಎಂದು ಈಗ ಹೇಳುತ್ತಿದ್ದಾರೆ. ಈ ವಿಚಾರಗಳು ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿದ್ದಾಗ ಅವರಿಗೆ ಏತಕ್ಕೆ ಕಂಡುಬರಲಿಲ್ಲ ಎಂದು ನಾನು ಕೇಳುತ್ತೇನೆ. ಮದ್ರಾಸಿನಲ್ಲಿ ಹಿಂದೆ ಮುಖ್ಯಮಂತ್ರಿಗಳಾಗಿದ್ದಂತಹ ಕಾಮರಾಜ್ ನಾಡರೂ ಇದಕ್ಕೆ ಜವಾಬ್ದಾರರಿದ್ದಾರೆ. ಎಲ್ಲರೂ ತಮ್ಮ ಜವಾಬ್ದಾರಿಯನ್ನು ಅರಿತು ಕೆಲಸಮಾಡಿದ್ದರೆ ಇವೊತ್ತು ಏತಕ್ಕೆ ದೊಡ್ಡದಾಗಿ ಕೂಗು ಹಾಕಬೇಕಾಗಿತ್ತು? ಶ್ರೀಮಾನ್ ವೀರೇಂದ್ರ ಪಾಟೀಲರು, ಶ್ರೀ ನಿಜಲಿಂಗಪ್ಪನವರ ಅನುಯಾಯಿಗಳು ಎಲ್ಲರೂ ಇದಕ್ಕೆ ಕಾರಣರಾಗಿದ್ದಾರೆ. ಅವರೂ ಸಹ ತಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರೂ ಇದಕ್ಕೆ ಜವಾಬ್ದಾರರಾಗಿದ್ದಾರೆ ಎಂದು ನಾನು ಹೇಳುತ್ತೇನೆ.

ತಾಲ್ಲೂಕು ಮಟ್ಟದಲ್ಲಿ ಆ ಪ್ರದೇಶದ ರೈತರ ಅನೇಕ ಸಮಸ್ಯೆಗಳನ್ನು ಪರಿಹರಿಸಬಲ್ಲ 3 ಸಂಸ್ಥೆಗಳನ್ನು ಕಟ್ಟಲು ನಾವು ಯತ್ನಿಸುತ್ತಿದ್ದೇವೆ, ತಾಲ್ಲೂಕು ಅಭಿವೃದ್ಧಿ ಮಂಡಲಿ, ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಸಹಕಾರಿ ಮಾರ್ಕೆಟಿಂಗ್ ಸೊಸೈಟಿ—ಇವೆ ಆ ಮೂರು ಸಂಸ್ಥೆಗಳು, ಇವು ಪ್ರಧಾನ ಸಂಸ್ಥೆಗಳು ಎಂದು ಹೇಳಿದ್ದಾರೆ. ಈ ದೇಶದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸುವುದಕ್ಕೆ ಅನುಕೂಲ ಮಾಡಿದ್ದೇವೆ ಎಂದು ಹೇಳಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಆ ಪ್ರದೇಶದ ರೈತರ ಅನೇಕ ಸಮಸ್ಯೆಗಳನ್ನು ಈ ಮೂರು ಸಂಸ್ಥೆಗಳಿಂದ ಪರಿಹರಿಸಬಹುದು ಎಂದು ನಾವು ಯೋಚನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ತಾಲ್ಲೂಕು ಅಭಿವೃದ್ಧಿ ಮಂಡಲಿ, ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಸಹಕಾರಿ ಮಾರ್ಕೆಟಿಂಗ ಸೊಸೈಟಿ ಈ ಮೂರು ಸಂಸ್ಥೆಗಳೂ ರಾಜ್ಯದಲ್ಲಿ ಇದುವರೆಗೆ ಏನು ಮಾಡಿವೆ ಎಂಬುದನ್ನು ಯೋಚನೆ ಮಾಡಿದ್ದರೆ ಬಹಳ ಸಂತೋಷ. ಇವೊತ್ತು ಈ ರಾಜ್ಯದಲ್ಲಿ ಇಷ್ಟೊಂದು ಅಧ್ವಾನ, ಅನ್ಯಾಯಗಳು ಮತ್ತು ಲಂಚಗುಳಿತನ ಇವು ನಡೆಯುವುದಕ್ಕೆ ಈ ಮೂರು ಸಂಸ್ಥೆಗಳೇ ಕಾರಣ ಎಂದು ನಾನು ಹೇಳುತ್ತೇನೆ. ಇವೊತ್ತು ತಾಲ್ಲೂಕು ಮಟ್ಟದಲ್ಲಿ ಇರತಕ್ಕ ಭೂ ಅಭಿವೃದ್ಧಿ ಬ್ಯಾಂಕುಗಳು ಆಗಲೀ, ಮಾರ್ಕೆಟಿಂಗ್ ಸೊಸೈಟಿಯಾಗಲೀ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಾಗಲೀ ಏನು ಕೆಲಸ ಮಾಡುತ್ತವೆ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ, ಆ ಸಂಸ್ಥೆಗಳು ಮಾಡತಕ್ಕ ಕೆಲಸದಲ್ಲಿ ಯಾರಿಗೂ ನಂಬಿಕೆ ಇಲ್ಲ. ಈ ತಾಲ್ಲೂಕು ಮಟ್ಟದಲ್ಲಿರತಕ್ಕ ತಾಲ್ಲೂಕು ಅಭಿವೃದ್ಧಿ ಮಂಡಲಿ, ಭೂ ಅಭಿವೃದ್ಧಿ ಬ್ಯಾಂಕ್ ಮತ್ತು ಮಾರ್ಕೆಟಿಂಗ್ ಸೊಸೈಟಿ ಈ ಮೂರು ಸಂಸ್ಥೆಗಳು ಕಾಂಗ್ರೆಸ್ಸಿನವರ ಆಸ್ತಿಗಳಾಗಿವೆ, ಕಾಂಗ್ರೆಸ್ಸಿಗರ ಎಸ್ಟೇಟುಗಳಾಗಿವೆ ಎಂದು ನಾನು ಹೇಳುತ್ತೇನೆ. ಇವು ಕಾಂಗ್ರೆಸ್ಸಿನವರಿಗೆ ಅನುಕೂಲವಾಗಿವೆ ಎಂದು ಹೇಳಬೇಕಾಗಿದೆ. ಯಾವುದಾದರೂ ಒಂದು ಎಸ್ಟೇಟ್, ಒಂದು ಸೊಸೈಟಿ ಬಂದರೆ ಅದಕ್ಕೆ ಅಧ್ಯಕ್ಷರೋ, ಸೆಕ್ರಟರಿಯೋ ಅವರೇ ಸಾಹುಕಾರರಾಗುತ್ತಾರೆ. ಇಂಥಾ ಎಸ್ಟೇಟುಗಳನ್ನು ತಾಲ್ಲೂಕು ಮಟ್ಟದಲ್ಲಿ ಇಟ್ಟು ಅಭಿವೃದ್ಧಿ ಯೋಜನೆಗಳನ್ನು ನಡೆಸುವುದಕ್ಕೆ ಇಟ್ಟಿದ್ದೇವೆ ಎಂದು ಹೇಳಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ರೈತರ ಅನೇಕ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕು ಅಭಿವೃದ್ಧಿ ಮಂಡಲಿ, ತಾಲ್ಲೂಕು ಭೂ ಅಭಿವೃದ್ಧಿ ಬ್ಯಾಂಕ್ ಮತ್ತು

ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿ ಇವುಗಳನ್ನು ಇಟ್ಟರೆ ಕುರಿ ಕಾಯುವುದಕ್ಕೆ ತೋಳನನ್ನು ಇಟ್ಟ ಹಾಗೆ ಆಗುತ್ತದೆ. ಇವುಗಳನ್ನು ತಾಲ್ಲೂಕು ಮಟ್ಟದಲ್ಲಿ ಕೊಟ್ಟು ಅವುಗಳಲ್ಲಿ ಚೇರ್ಮನ್ ಆಗಿ, ಸೆಕ್ರೆಟರಿಯಾಗಿ ಆ ಸಂಸ್ಥೆಗಳಲ್ಲಿ ಕೆಲಸ ಮಾಡುವಾಗ ಆ ಎಸ್ಟೇಟುಗಳ ವ್ಯವಹಾರಗಳೆಲ್ಲಾ ಚೆನ್ನಾಗಿ ನಡೆಯುತ್ತಿದೆಯೆ ಹೇಗೆ ಎನ್ನುವುದನ್ನು ಪರೀಕ್ಷೆ ಮಾಡತಕ್ಕವರು ಯಾರು ? ಕೊಶ್ಚನ್ ಮಾಡತಕ್ಕವರು ಯಾರು ? ಆ ಸಂಸ್ಥೆಗಳಲ್ಲಿ ಯಾರಾದರೂ ಕೈಹಾಕಿದರೆ ಹಾಕಬೇಡಿ ಎಂದು ಹೇಳುತ್ತೀರಾ ? ಯಾರಾದರೂ ಅಧಿಕಾರಿಗಳು ಒಂದುವೇಳೆ ಕೇಳಿದರೆ ಅವರನ್ನು ನೀವು ಆ ಸ್ಥಾನದಲ್ಲಿ 24 ಗಂಟೆಯಲ್ಲಿ ಇರುವಹಾಗಿಲ್ಲ, ಮಂತ್ರಿಗಳಿಗೆ ಹೇಳುತ್ತೇನೆ ಎಂದು ಹೆದರಿಸುತ್ತಾರೆ. ಅವುಗಳ ಮೇಲ್ವಿಚಾರಣೆ ನಡೆಸತಕ್ಕ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರನ್ನೆ ಹೆದರಿಸುತ್ತಾರೆ. ಈ ರೀತಿ ಅಧಿಕಾರವನ್ನು ದುರುಪಯೋಗ ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಹಾಳುಮಾಡತಕ್ಕವು ಈ ಮೂರು ಸಂಸ್ಥೆಗಳು. ಇಂಥಾ ಮೂರು ಮಹಾ ಸಂಸ್ಥೆಗಳನ್ನು ತಾಲ್ಲೂಕು ಮಟ್ಟದಲ್ಲಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಸಿಸ್ಟೆಂಟ್ ರಿಜಿಸ್ಟ್ರಾರರು ಸತ್ಯವಂತರಾಗಿ ಕೆಲಸ ಮಾಡಿದರೆ ಅವರು ಅಲ್ಲಿ ಇರುವಹಾಗಿಲ್ಲ. ಹಾಸನದಲ್ಲಿ ಒಬ್ಬರು ಅಸಿಸ್ಟೆಂಟ್ ರಿಜಿಸ್ಟ್ರಾರರು ಸತ್ಯದಿಂದ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದರೂ ಅವರಿಗೂ ಕಾಟ. ನನ್ನ ಮೇಲೆ ಕೈ ಹಾಕಿದ್ದಾರೆ, ಕಾಂಗ್ರೆಸ್ ರಾಜಕೀಯಕ್ಕೆ ಬೆಂಬಲ ನೀಡಲಿಲ್ಲವೆಂದೂ ಅವರು ಅಲ್ಲಿರುವುದಕ್ಕೆ ಸಾಧ್ಯವಿಲ್ಲವೆಂದೂ ಅವರನ್ನು ಬೇರೆಕಡೆಗೆ ವರ್ಗ ಮಾಡಿದ್ದಾರೆ. ಇವೊತ್ತು ನನಗೆ ಹಾಸನದಿಂದ ಟೆಲಿಗ್ರಾಂ ಬಂದಿದೆ. ಸತ್ಯವಂತರಾಗಿ ಕೆಲಸ ಮಾಡುವವರು ಎಲ್ಲೋ ಒಬ್ಬರು ಇದ್ದರೆ ಅವರನ್ನು ವರ್ಗ ಮಾಡಿದರೆ ಸೊಸೈಟಿಗಳ ಸಮಾಧಿಯಾಗುತ್ತದೆ. ಅವರು, "ಇಲ್ಲ ಶಿವಪ್ಪನವರೇ, ಅವರು ಏನೋ ಒಂದು ರಾಜಕೀಯಕ್ಕೆ ಕೈಹಾಕಿದ್ದಾರೆಂದು ಕಾಣುತ್ತದೆ, ಅದಕ್ಕಾಗಿ ಟ್ರಾನ್ಸ್‌ಫರ್ ಮಾಡಿದರೆಂದು" ಹೇಳಿದರು. ಹೀಗೆ ಅವರನ್ನು ಟ್ರಾನ್ಸ್‌ಫರ್ ಮಾಡಿಯೇಬಿಟ್ಟರು. ಇಂಥ ಕೆಲಸಗಳನ್ನು ಮಾಡುವುದಾದರೆ, ಈ ಸಂಸ್ಥೆಗಳಿಂದ ಏನು ನಿರೀಕ್ಷಣೆ ನಾವು ಮಾಡುತ್ತಿದ್ದೇವೋ, ಏನು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಸಾಧನೆ ಮಾಡುತ್ತಿದ್ದೇವೋ, ಅವುಗಳು ಆಗದೆ, ಅಲ್ಲಿ ಅನ್ಯಾಯಗಳು, ಅಧ್ವಾನಗಳು ಉಂಟಾಗಿ ಹಾನಿಯಾಗುತ್ತದೆ. ಇವತ್ತು ಎಷ್ಟು ಹಣವನ್ನು ಈ ಸಂಸ್ಥೆಗಳಿಗೆ ಕೊಟ್ಟಿದ್ದೀರಿ ? ಈ ಬಂಡವಾಳದಿಂದ ನಿಮಗೆ ಏನು ಆದಾಯ ಬಂದಿದೆ ?

ಶ್ರೀ ಎಚ್. ಬಿ. ಜ್ವಾಲನಯ್ಯ.—ಆರ್ಥಿಕ ಮಂತ್ರಿಯವರೇ ಹೇಳಿದ್ದಾರಲ್ಲ—ಇವುಗಳೆಲ್ಲಾ ಸರ್ಕಾರೀ ಕೃಪಾಪೋಷಿತ ನಾಟಕ ಮಂಡಲಿಗಳಾಗಿವೆ, ಎಂದು.

ಶ್ರೀ ಎಸ್. ಶಿವಪ್ಪ.—ನಮ್ಮ ತಾಲ್ಲೂಕಿನಲ್ಲಿಯೂ ಒಂದು ನಾಟಕವಾಯ್ತು. ಅದರ ಒಂದು ಮುಖ್ಯ ಪ್ರಚಾರವೇನೆಂದರೆ, ಹೆಂಗಸರ ಪಾರ್ಟ್ ಹೆಂಗಸರೇ ಮಾಡುತ್ತಾರೆ, ಗಂಡಸರ ಪಾರ್ಟ್ ಗಂಡಸರೇ ಮಾಡುತ್ತಾರೆಂದು. ಇದರಿಂದ, ಅಲ್ಲಿ ಒಂದು ದೊಡ್ಡ ಗಲಾಟೆಯೇ ಆಯ್ತು. ಈ ರೀತಿಯಲ್ಲಿ ಕಾಂಗ್ರೆಸ್ಸಿನವರು ಮಾಡುತ್ತಿದ್ದಾರೆ. ಈ ಕೋಆಪರೇಟಿವ್ ಸೊಸೈಟಿಗಳ ಅಧಃಪತನದಿಂದ, ದೇಶದಲ್ಲಿ ಇವುಗಳಿಂದ ಏನೊಂದು ಸಾಧನೆ ಮಾಡಬೇಕೆಂದು ನಿರೀಕ್ಷಣೆ ಮಾಡುತ್ತೇವೆಯೋ, ಅದು ಆಗದೆ ಹೋಗಿದೆ. ಅದನ್ನು ಮಾನ್ಯ ಹಣಕಾಸಿನ ಸಚಿವರು ಸರಿಪಡಿಸುವುದಕ್ಕೆ ಏನು ಮಾಡಬೇಕೆಂದು ಭಾಷಣವನ್ನು ಮಾಡಿದ್ದಾರೆಯೋ, ಅದರಂತೆ ಆದರೂ ಕಟ್ಟುನಿಟ್ಟಾಗಿ ಈ ಸೊಸೈಟಿಗಳ ಹಿಡಿತವನ್ನು ಇಟ್ಟುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಇವತ್ತು ಈ ಸೊಸೈಟಿಗಳ ಆಡಿಟ್ ಮಾಡತಕ್ಕ ಜವಾಬ್ದಾರಿಯನ್ನು ಸ್ಟೇಟ್ ಅಕೌಂಟ್ಸ್ ಇಲಾಖೆ, ಅಥವಾ ಅಕೌಂಟೆಂಟ್ ಜನರಲ್ ರವರಿಗೆ ವಹಿಸಿಕೊಟ್ಟರೆ, ಬಹುಶಃ ಸ್ವಲ್ಪ ಉತ್ತಮವಾಗಬಹುದೆಂದು ಕಾಣುತ್ತದೆ. ಇವತ್ತು ಸೊಸೈಟಿಯವರ ಆಡಳಿತದಲ್ಲಿರತಕ್ಕ ಆಡಿಟರುಗಳೇ ಈ ಸೊಸೈಟಿಗಳ ಲೆಕ್ಕವನ್ನು ಆಡಿಟ್ ಮಾಡುವುದೆಂದರೆ, ಇದರಿಂದ ಎಷ್ಟುಮಟ್ಟಿಗೆ ನ್ಯಾಯ ಸಿಗುತ್ತದೆಂಬುದನ್ನು ಯೋಚನೆ ಮಾಡಿ. ಆದ್ದರಿಂದ ಕಟ್ಟುನಿಟ್ಟಾಗಿ ಆಡಿಟ್ ಮಾಡುವ ಜವಾಬ್ದಾರಿಯನ್ನು ಅಕೌಂಟೆಂಟ್ ಜನರಲ್‌ರವರಿಗೆ ವಹಿಸಿಕೊಟ್ಟರೆ, ಬಹುಶಃ ಸ್ವಲ್ಪಮಟ್ಟಿಗೆ ಉತ್ತಮವಾಗಬಹುದೆಂದು ಸಲಹೆ ಮಾಡುತ್ತೇನೆ.

ಇನ್ನು ಇರಿಗೇಶನ್ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಇವತ್ತಿನ ದಿವಸ ನಮಗೆ ಇರಿಗೇಶನ್ ಶೇಕಡಾ 10ರಷ್ಟು ಮಾತ್ರ ಇದೆ. ರಾಜ್ಯದಲ್ಲಿ ಕಾವೇರಿ ನದಿಯ ಮತ್ತು ಕೃಷ್ಣಾ ನದಿಯ ಪಾತ್ರ ಬಹಳ ಮುಖ್ಯವಾದುದು. ಇವುಗಳಿಗೆ ನಾವು ಯೋಜನೆಗಳನ್ನು ಕಾರ್ಯಗತಮಾಡಿ, ಅಣೆಕಟ್ಟುಗಳನ್ನು ಕಟ್ಟಿದರೆ ಶೇಕಡ 25ರಷ್ಟು ನಮ್ಮ ನೀರಾವರಿಯಾಗಬಹುದೆಂದು ಕಾಣುತ್ತದೆ. ಇವೊತ್ತಿನ ದಿವಸ ಈ ಯೋಜನೆಗಳನ್ನು ಮಾಡತಕ್ಕ ಕಾರ್ಯದಲ್ಲಿ ಈ ಕಾಂಗ್ರೆಸ್ ಸರ್ಕಾರವು ವಿಫಲವಾಗಿವೆ. ಇವರು, ಬರೇ ಮಾತಿನಿಂದ ದುಡ್ಡು ಕೊಡುತ್ತೇವೆ, ಕೊಡುತ್ತೇವೆಂದು ಹೇಳುತ್ತಾರೆಯೇ ಹೊರತು ಕಾರ್ಯದಲ್ಲಿ ಮಾಡುವುದಿಲ್ಲ. ಇವರು ಇವತ್ತಿನ ಮಾತಿನ ಮಲ್ಲರಾಗಿದ್ದಾರೆಯೇ ಹೊರತು ಯಾವ ಒಂದು ಪ್ರೊಜೆಕ್ಟುಗಳನ್ನು ಕಟ್ಟಿ ಯೋಜನೆಯನ್ನು

(ಶ್ರೀ ಎಸ್. ಶಿವಪ್ಪ)

ಕಾರ್ಯಗತ ಮಾಡಿಲ್ಲ. ನಾನು ಇವತ್ತು ಸರ್ಕಾರದವರನ್ನು ಕೇಳುತ್ತೇನೆ ನೀವು ಯಾವ ಯೋಜನೆಯನ್ನು ಕಟ್ಟಿ ಪೂರ್ತಿಮಾಡಿದ್ದೀರಿ ? ಮತ್ತು ಇದರಿಂದ ದೇಶಕ್ಕೆ ಎಷ್ಟು ನೀರನ್ನು ಕೊಟ್ಟಿದ್ದೀರಿ ? ಇಂಥ ಒಂದು ಯೋಜನೆಯನ್ನಾದರೂ ಹೇಳಿ. ಇವತ್ತು ಇದ್ದ ಯೋಜನೆಗಳನ್ನು ನೋಡಿದರೆ, ತುಂಗಭದ್ರಾ ಇವರು ಕಟ್ಟಿದ್ದಲ್ಲ, ಕೃಷ್ಣರಾಜಸಾಗರ ನೋಡಿದರೆ, ಅದು ದಿವಾನರ ಕಾಲದಲ್ಲಿ ಕಟ್ಟಿದ್ದು, ಮತ್ತು ಭದ್ರಾ ಇದಕ್ಕಿಂತ ಮೊದಲೇ ಕಟ್ಟಿದ್ದು. ನೀವು ಕಟ್ಟಿದ ಅಣೆಕಟ್ಟು ಎಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ ? 1924ರ ಅಗ್ರಿಮೆಂಟ್ 1974ರಲ್ಲಿ ಮುಗಿಯುತ್ತದೆ. ಇನ್ನು ಕೇವಲ ನಾಲ್ಕು ವರ್ಷಗಳಿವೆ. ಅದನ್ನು ಈವಾಗ ಕಟ್ಟುತ್ತೇವೆಂದು ಹೇಳುತ್ತಿದ್ದಾರೆ. 22 ವರ್ಷಗಳಲ್ಲಿ ಕಾವೇರಿ ನದಿಯ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ನಮ್ಮ ಸರ್ಕಾರದವರು ಏಕೆ ಪ್ರಯತ್ನ ಮಾಡಿಲ್ಲ ? ಈ ಅಪವಾದವನ್ನು ನಾನು ಸರ್ಕಾರದವರ ಮೇಲೆ ಹೊರಿಸುತ್ತೇನೆ, ಇದು ಒಂದು ದೊಡ್ಡ ತಪ್ಪಾಗಿದೆ. ನಮ್ಮ ಮೈಸೂರು ರಾಜ್ಯದ ಜನರು ಅದರ ನೀರನ್ನು ಉಪಯೋಗಿಸಿಕೊಳ್ಳತಕ್ಕದ್ದನ್ನು ಕಳೆದುಕೊಳ್ಳುವಂತೆ ಈ ಸರ್ಕಾರದವರು ಮಾಡಿದ್ದಾರೆ. ಈಗಾಗಲೇ ಈ ನೀರಿನ ವಿವಾದದಲ್ಲಿ ಮದ್ರಾಸ್ ಮೈಸೂರು, ಮೈಸೂರು ಕೇರಳ, ಮೈಸೂರು ಆಂಧ್ರದೊಳಗೆ ಜಗಳವನ್ನು ಕೇಂದ್ರದವರು ತಂದಿದ್ದಾರೆ. ಮದ್ರಾಸಿನ ಮುಖ್ಯಮಂತ್ರಿಯವರು ಈಗಾಗಲೇ ಹೇಳಿದ್ದಾರೆ. ಅವರು ದೆಹಲಿಗೆ ಹೋಗಿ ಪ್ರಧಾನ ಮಂತ್ರಿಯವರೊಡನೆ ಮಾತನಾಡಿ, ಹೇಮಾವತಿಯನ್ನು ಕಟ್ಟುವುದಕ್ಕೆ ಏಕೆ ಅಡ್ಡಿಮಾಡಬಾರದು ಎಂದು ಯೋಚನೆ ಮಾಡುತ್ತಿದ್ದಾರೆ. ಆಂಧ್ರದವರು ಕೃಷ್ಣಾ ನದಿ ನೀರಿನ ಹಂಚಿಕೆಯ ಬಗ್ಗೆ ನ್ಯಾಯಾಲಯಕ್ಕೆ ಒಪಿಸಿದ್ದೇವೆಂದು ಹೇಳುತ್ತಿದ್ದಾರೆ. ಹೀಗಿದ್ದರೆ ನಮ್ಮನ್ನು ಹೇಳುವವರೂ, ಕೇಳುವವರೂ ಯಾರೂ ಇಲ್ಲವೇ ? ಅದೇ ರೀತಿ ನಮಗೆ ಕೈಗಾರಿಕೆಯಲ್ಲಿ, ಯಾವುದರಲ್ಲೂ ಕೇಂದ್ರದ ನೆರವು ಇಲ್ಲದೆ ತಬ್ಬಲಿಗಳಾಗಿದ್ದೇವೆ. ಹೀಗೆ ತಬ್ಬಲಿಗಳಾಗುವುದಕ್ಕೆ ಯಾರು ಕಾರಣರು ? ಇದನ್ನು ನಾವು ವಿಚಾರ ಮಾಡುವುದಾದರೆ, ಈ 22 ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರವು ತನ್ನ ಸ್ವಂತ ಶಕ್ತಿಯನ್ನು, ತನ್ನ ನಾಯಕತ್ವವನ್ನು ತನ್ನ ಪ್ರಭಾವವನ್ನು ಹೊಂದಿಲ್ಲ. ನಮ್ಮ ದೇಶದ ನಾಯಕರಲ್ಲಿ ನಿಮ್ಮ ಪ್ರಭಾವನ್ನು ಬೀರಲು ನಿಮಗೆ ಶಕ್ತಿ ಇಲ್ಲವಾಗಿದೆ ಎಂಬುದನ್ನು ಇಲ್ಲಿ ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಇನ್ನೊಂದು ಹೇಳಿದ್ದಾರೆ. ಕಳೆದ ದಶಕದಲ್ಲಿ ದುರ್ಭಿಕ್ಷವಾಗಿ ನಮಗೆ ಕಷ್ಟವಾಯಿತು ಎಂದು. ಇವರು ದುರ್ಭಿಕ್ಷಕ್ಕೆ ತುತ್ತಾದ ಪ್ರದೇಶಕ್ಕೆ ಏನೇನು ರಿಯಾಯಿತಿ ಕೊಟ್ಟಿದ್ದಾರೆ? 1965-6 ನೇ ಇಸವಿಯಿಂದ ನಾಲ್ಕು ವರ್ಷಗಳಲ್ಲಿ ಮಳೆ ಇಲ್ಲದೆ ಬೆಳೆ ಇಲ್ಲದೆ, ಬೆಂದು ಬೇಸತ್ತ ಜನರಿಗೆ ಇವರು ಏನು ಮಾಡಿದ್ದಾರೆ? ಕೊನೆಯ ಪಕ್ಷ ಕಂದಾಯವನ್ನಾದರೂ ರಿಯಾಯಿತಿ ಮಾಡಿ ಎಂದು ಹೇಳಿದ್ದೇವೆ. ಸರ್ಕಾರದವರು ಮಾಡುತ್ತೇವೆ, ಮಾಡುತ್ತೇವೆಂದು ಹೇಳಿ ಏನು ಮಾಡಿದ್ದಾರೆ? ಇನ್ನೂ ಯೋಚನೆ ಮಾಡುತ್ತಿದ್ದಾರೆ. ಮಾನ್ಯ ಹಣಕಾಸಿನ ಮಂತ್ರಿಯವರಿಗೆ ಹೇಳುತ್ತೇನೆ ಈ ಕೆಲಸವನ್ನು ಮಾಡುತ್ತೇವೆಂದು ಹೇಳಿ. ನಾಲ್ಕು ವರ್ಷದಿಂದ ಕಂದಾಯವನ್ನು ಮಾಫಿ ಮಾಡಬೇಕು, ನೀರಿನ ತೆರಿಗೆ ಮಾಫಿ ಮಾಡಬೇಕು. ಇದರ ಜೊತೆಗೆ ಶಾಸ್ತ್ರರಹಿತವಾಗಿ ಒಂದು ಕಾನೂನನ್ನು ಮಾಡಿ ನೀರಿನ ತೆರಿಗೆ ಮತ್ತು ಬೆಟ್ಟರ್‌ಮೆಂಟ್ ಲೆವಿಯನ್ನು ಹಾಕಿದ್ದಾರೆ. ನಾಲ್ಕು ವರ್ಷದ ಕಂದಾಯವನ್ನು ಕೊಡಬೇಕೆಂದು ಹೇಳಿ ಭೂಮಿಯನ್ನು ಹರಾಜು ಮಾಡುತ್ತಿದ್ದಾರೆ, ಮನೆಗಳನ್ನು ಹರಾಜು ಮಾಡುತ್ತಿದ್ದಾರೆ. ಇದರಿಂದ ಸಣ್ಣ ರೈತ ಎಲ್ಲಿಗೆ ಹೋಗಬೇಕು ? ಅಲ್ಲಿ ಕೆರೆ ಬಾವಿಗಳಲ್ಲಿ ನೀರೂ ಇಲ್ಲ ಮಳೆಯೂ ಇಲ್ಲ. ಅಂಥ ಕಡೆಯೂ ಕೂಡ ತೆರಿಗೆಯನ್ನು ವಸೂಲಿ ಮಾಡಿ, ಕಂದಾಯವನ್ನು ವಸೂಲು ಮಾಡಿ ಎಂದು ನಿಮ್ಮ ಸರ್ಕಾರ ಆಜ್ಞೆ ಕೊಟ್ಟಿದೆ. ನಾನು ಇವತ್ತು ಸರ್ಕಾರವನ್ನು ಎಚ್ಚರಿಸುತ್ತಿದ್ದೇನೆ. ಇಂಥ ಅನ್ಯಾಯವನ್ನು ಸರಿಪಡಿಸದಿದ್ದರೆ ನಾವು ಒಂದು ದೊಡ್ಡ ಚಳುವಳಿಯನ್ನೇ ಮಾಡಬೇಕಾಗುತ್ತದೆ. ನೀರಿನ ತೆರಿಗೆಯನ್ನು ಕೈಬಿಡಬೇಕೆಂದು ಹೇಳತಕ್ಕ ಒಂದು ಚಳುವಳಿಯನ್ನು ಎಬ್ಬಿಸಿ, ರೈತರ ಪರವಾಗಿ ಒಂದು ಹೋರಾಟವನ್ನು ಮಾಡುತ್ತೇವೆ. ಅಷ್ಟರೊಳಗೆ ಈ ಕಂದಾಯ ಮತ್ತು ತೆರಿಗೆಯನ್ನು ರದ್ದು ಮಾಡದೆ ಹೋದರೆ ರಾಜ್ಯಾದ್ಯಂತ ಒಂದು ಚಳುವಳಿಯು ಬೆಳೆಯುತ್ತದೆ ಎಂಬುದನ್ನು ಮಾನ್ಯ ಹಣಕಾಸಿನ ಸಚಿವರಿಗೆ ಹೇಳುತ್ತೇನೆ.

ಇವತ್ತು ನಾನು ಬೇರೆ ಇಲಾಖೆಗಳನ್ನು ವಿಮರ್ಶೆ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಹರಿಜನ ವಿಚಾರವಾಗಿ ಬಹಳ ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ತಾವು ಹರಿಜನರೇನು ?

ಶ್ರೀ ಎಸ್. ಶಿವಪ್ಪ.—ಇವತ್ತು ನಾವು ಇಡೀ ಪ್ರಪಂಚದಲ್ಲಿ ಗರೀಬ ಜನರಾಗಿದ್ದೇವೆ. ಮೊನ್ನೆ ಕಾಮನ್‌ವೆಲ್ತ್ ಡಿಲಿಗೇಶನ್‌ನಲ್ಲಿ ಹೋದಾಗ ನಮ್ಮನ್ನು ಪರದೇಶಗಳ ಜನರು ಅನ್‌ಟಚೇಬಲ್ಸ್‌ಗಳೆಂದು ಪರಿಗಣಿಸುತ್ತಿದ್ದರು. ನಾವು ಆ ಸ್ಥಿತಿಗೆ ಬಂದಿದ್ದೇವೆ. ನಮ್ಮ ಜನರು ಬಡತನದಿಂದ

ಭಿಕ್ಷೆ ಬೇಡುವ ರಾಷ್ಟ್ರದ ಜನರೆಂದು ಅವರು ತಿಳಿದುಕೊಂಡಿದ್ದಾರೆ. ಈ ಕಾಂಗ್ರೆಸ್ ರಾಜ್ಯದಲ್ಲಿ ನಮ್ಮನ್ನು ಅವರು ಅಸ್ಪೃಶ್ಯರನ್ನಾಗಿ ಬಡತನದ ಗರೀಬರನ್ನಾಗಿ ಮಾಡಿದ್ದಾರೆ. ಈಗ ಷೆಡ್ಯೂಲ್ಡ್ ಕಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರವಾಗಿ ರಿಪೋರ್ಟ್ ಬರುತ್ತಾ ಇದೆ. ಕೇಂದ್ರ ಸರ್ಕಾರದವರು ಒಂದು ಕಮಿಷನನ್ನು ಮಾಡಿದ್ದಾರೆ. ವರ್ಷೇ ವರ್ಷೇ ಒಂದು ವರದಿ ಬರುತ್ತಾ ಇದೆ. ಆ ರಿಪೋರ್ಟ್‌ನ್ನು ನಮಗೆ ಕೊಡುತ್ತಿದ್ದಾರೆ. ಯಾವ ವರ್ಷವೇ ಆಗಲಿ ಆ ರಿಪೋರ್ಟ್‌ನ್ನು ಚರ್ಚೆಮಾಡಿ ಆ ರಿಪೋರ್ಟ್‌ನಲ್ಲಿ ನಮೂದು ಮಾಡಿರುವ ಹಾಗೆ ಏನಾದರೂ ಕೆಲಸಗಳನ್ನು ಮಾಡಿ ಅವನ್ನು ಕಾರ್ಯಗತಮಾಡಿದ್ದಾರೆಂದರೆ ಅದೇನೂ ಇಲ್ಲ ಇವತ್ತು ಅಸ್ಪೃಶ್ಯತೆ ನಿವಾರಣೆಯಾಗಬೇಕೆಂದು ಹೇಳುತ್ತಿದ್ದಾರೆ. ಇದನ್ನು ಹಳ್ಳಿಗಳಲ್ಲಿ ಕೆಲವರು ಅವರವರೇ ಮಾಡುತ್ತಿದ್ದಾರೆ. ನನ್ನ ಊರಿನಲ್ಲಿನ ಉದಾಹರಣೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ. ಸುಮಾರು 25 ವರ್ಷಗಳ ಹಿಂದೆ ನನ್ನ ಮನೆಯಲ್ಲಿ ಒಂದು ಸೇದುವ ಬಾವಿ ಇತ್ತು. ಅದು ನಮ್ಮ ಸ್ವಂತದ್ದು ಆಗಲೇ ನಮ್ಮ ತಂದೆಯವರು ಆ ಊರಿನ ಹರಿಜನ ಗಿರಿಜನರೆಲ್ಲರೂ ಆ ಬಾವಿಯಲ್ಲಿ ನೀರು ಸೇದಿಕೊಳ್ಳಬಹುದು ಎಂದು ಏರ್ಪಾಡು ಮಾಡಿದ್ದರು. ನಮ್ಮ ತಂದೆಯವರು ತೀರಿ ಹೋದರೂ ಈಗಲೂ ಅದೇ ಪ್ರಕಾರವಾಗಿ ಅಲ್ಲಿ ನಡೆಯುತ್ತಿದೆ. ಆದ್ದರಿಂದ ಸಮಾಜದಲ್ಲಿ ಮಾಡುವ ಕೆಲಸ ಅಪಾರವಾಗಿದ್ದರೂ, ಈ ಸರ್ಕಾರ ಈ ವಿಚಾರದಲ್ಲಿ ಏಕೆ ಹಿಂದೆ ಬಿದ್ದಿದೆ ಎಂಬುದಾಗಿ ನಾನು ಕೇಳುತ್ತೇನೆ. ಇವತ್ತು ಹರಿಜನರ ಅಭಿವೃದ್ಧಿಯಾಗಬೇಕು. ಸಮಾಜದಲ್ಲಿ ಮಾನವ ಮಾನವನಿಗೆ ವ್ಯತ್ಯಾಸವಿರುವುದು ಸರಿಯಲ್ಲ. ಒಂದು ಜನಾಂಗ ಅಸ್ಪೃಶ್ಯ ಇನ್ನೊಂದು ಜನಾಂಗ ಉತ್ತಮ ಎಂದು ಹೇಳುವ ಧೋರಣೆ ಕೂಡಲೇ ಮಾಯವಾಗಬೇಕು. ಎಷ್ಟು ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚುಮಾಡಿದರೂ ಇದರ ಬಗ್ಗೆ ಎಲ್ಲರ ಮನಸ್ಸು ಪರಿವರ್ತನೆಯಾಗದ ಹೊರತು ಅದು ಯಶಸ್ವಿಯಾಗುವುದಿಲ್ಲ. ಅವನು ಯಾವ ಜಾತಿಯವನೇ ಆಗಲೀ, ಬ್ರಾಹ್ಮಣನಾಗಲೀ, ಹರಿಜನನಾಗಲಿ: ಇಂತಹ ವಿಷಯಗಳಲ್ಲಿ ಅವರಿಗೆ ಮನಸ್ಸು ಪರಿವರ್ತನೆ ಯಾಗಬೇಕು, ಇಲ್ಲದಿದ್ದರೆ ಬರೀ ಘೋಷಣೆಗಳಿಂದ ಈ ಕೆಲಸ ಖಂಡಿತವಾಗಿ ಸಾಧ್ಯವಿಲ್ಲವೆಂಬ ಮಾತನ್ನು ಹೇಳುತ್ತೇನೆ. ಆದ್ದರಿಂದ ಈಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡೂಲ್ಡ್ ಟ್ರೈಬ್ಸ್ ಬಗ್ಗೆ ವರದಿ ಏನಿದೆಯೋ ಅದನ್ನು ಚರ್ಚೆಮಾಡಿ ಅದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಸೂಚನೆಮಾಡುತ್ತೇನೆ. ಅದೇ ರೀತಿಯಲ್ಲಿ ಈಗ ಮೈನಾರಿಟಿ ಕಮಿಷನ್ ಮತ್ತು ಮೈನಾರಿಟಿ ಪ್ರೊಟೆಕ್ಷನ್ ಏನಿದೆಯೋ ಅದು ಬಹಳ ಅಗತ್ಯವಾಗಿದೆ. ಅದು ಎಲ್ಲಾ ರಾಜ್ಯಗಳಲ್ಲಿಯೂ ಆಗಬೇಕು. ಇವತ್ತು ಭಾಷಾವಾರು ಪ್ರಾಂತ ರಚನೆ ಮಾಡಿದರೂ ಕೂಡ ಈ ರಾಜ್ಯದಲ್ಲಿ ಕೆಲವು ಜನರು ಅಲ್ಪ ಸಂಖ್ಯಾತರು, ಬೇರೆ ಭಾಷೆ ಮಾತನಾಡುವವರು ಇರುವುದು ಅನಿವಾರ್ಯವಾಗಿದೆ.

Sri M. MALLIKARJUNASWAMY.—I want to know from the Leader of the Opposition, what is the programme of his party for the eradication of untouchability in the State.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಲ್ಲಿಕಾರ್ಜುನಸ್ವಾಮಿಯವರು ಪಿ.ಎಸ್.ಪಿ. ಪಾರ್ಟಿಯವರ ಕಾರ್ಯಕ್ರಮ ಅಸ್ಪೃಶ್ಯತೆ ನಿವಾರಣೆ ಬಗ್ಗೆ ಏನೆಂದು ಕೇಳಿದ್ದಾರೆ. ಈ ದೇಶದಲ್ಲಿ ಸಮಾಜವಾದದಲ್ಲಿ ಅಪಾರವಾದ ನಂಬಿಕೆ ಇರುವುದರಿಂದ ವರ್ಗರಹಿತವಾದ ಸಮಾಜರಚನೆಯನ್ನು ಮಾಡಬೇಕು ಎಂಬುದು ನಮ್ಮ ವಾದ. ದೇಶದಲ್ಲಿ ಅಸ್ಪೃಶ್ಯತೆ ಇರುವಾಗ ಜಾತಿರಹಿತ ಸಮಾಜವನ್ನು ನಿರ್ಮಾಣಮಾಡುವುದಕ್ಕೆ ಸಾಧ್ಯವಿಲ್ಲ. ಸಮಾಜ ವಾದದಲ್ಲಿ ನಂಬಿಕೆ ಇದೆಯೆಂದು ಹೇಳುವವರು ಜಾತೀಯ ವಾದವನ್ನು ಮರೆಯಬೇಕು. ಏಕೆಂದರೆ, ನಮಗೆ ಸಮಾಜವಾದ ನಿರ್ಮಾಣಮಾಡುವುದರಲ್ಲಿ ಪೂರ್ಣ ಅಭಿಮಾನ ಇದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಹರಿಜನರ ವಿಷಯವಾಗಿ ಮಾತನಾಡುತ್ತಾ ಇರುವುದರಿಂದ, ಅವರು ಅವರ ಪಾರ್ಟಿಯ ಕಾರ್ಯಕ್ರಮ ಅದರ ಬಗ್ಗೆ ಏನೇನಿದೆ ಎಂಬುದನ್ನು ಈ ಸಭೆ ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತದೆ. ಅದನ್ನು ನಾನು ಕೇಳಿದ್ದೇನೆ.

ಶ್ರೀ ಎಸ್. ಶಿವಪ್ಪ.—ಇವತ್ತು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ಇವತ್ತು ಸಹ ಭೋಜನವನ್ನು ಯಾವ ವಿಧವಾದ ಭಿನ್ನಾಭಿಪ್ರಾಯವಿಲ್ಲದೆ, ಭೇದಭಾವವಿಲ್ಲದೆ ಮಿಳಿತವಾಗಿ ಮಾಡಬೇಕು. ಒಂದೇ ಕಡೆ ಅವರು ಎಲ್ಲರೊಡನೆ ಬೆರೆತು ನೀರು ಕುಡಿಯುವುದಕ್ಕೆ ಪ್ರಯತ್ನ ಮಾಡಬೇಕು. ಇತರಕ್ಕ ಬಾವಿಗಳಲ್ಲಿ ಅವರೂ ಸಹ ನೀರು ಸೇದಿಕೊಳ್ಳುವ ಹಾಗೆ ವ್ಯವಸ್ಥೆ ಮಾಡಬೇಕು. ಯಾವಾಗಲೂ ಅವನು ಕೀಳು, ನಾನು ಮೇಲು ಎಂಬ ಭಾವನೆಯನ್ನು ಮೊದಲು ತೆಗೆಯಬೇಕು. ಅದಕ್ಕೆ ನಿವಾರಣೆ ಮಾಡುವ ಕ್ರಮವೇನಿದೆಯೋ ಅದನ್ನು ನಾವು ಮಾಡುವುದಕೆ

(ಶ್ರೀ ಎಸ್. ಶಿವಪ್ಪ)

ಸಿದ್ಧರಾಗಿದ್ದೇವೆ. ಈಗ ಸರ್ಕಾರ ಇರುವುದು ನಿಮ್ಮದು, ಅದಕ್ಕೆ ನಾನು ಏನು ಮಾಡಲಿ? ನಮ್ಮ ಕೈಗೆ ಈ ಸರ್ಕಾರದ ಆಡಳಿತ ಬಂದಾಗ ಬೇಕಾದರೆ, ನೀವು ಏನು ಶಿವಪ್ಪನವರೇ ಈ ರೀತಿ ಮಾಡಿದಿರಿ ಎಂಬುದಾಗಿ ಕೇಳಬಹುದು. ಸರ್ಕಾರ ನನ್ನ ಕೈಲಿ ಕೊಟ್ಟಿದ್ದರೆ ಏನೇನು ಮಾಡಬಲ್ಲೆ ಎಂಬುದನ್ನು ನಾನು ತೋರಿಸಿಕೊಡುತ್ತಿದ್ದೆ. ಆಗ ನನ್ನನ್ನು ಏನು ಬೇಕಾದರೂ ಕೇಳಬಹುದು.

ಮತ್ತೊಂದು ವಿಚಾರ. ಇವತ್ತು ನಮ್ಮ ಇಡೀ ದೇಶದಲ್ಲಿ ಉಕ್ಕಿನ ಕೈಗಾರಿಕೆಯ ವಿಚಾರವಾಗಿ ಹೇಳುವುದಾದರೆ, ಅತಿ ಹೆಚ್ಚಿನ ಪರ್ಸೆಂಟೇಜ್‌ನಲ್ಲಿ ಕಬ್ಬಿಣದ ಅದುರು ಇರತಕ್ಕ ರಾಜ್ಯವೆಂದರೆ ಮೈಸೂರು ರಾಜ್ಯ. ಇಂತಹ ರಾಜ್ಯದಲ್ಲಿ 5ನೇ ಉಕ್ಕಿನ ಕಾರ್ಖಾನೆಯನ್ನು ಎಲ್ಲಿ ತೆಗೆಯಬೇಕೆಂಬ ವಿಚಾರವನ್ನು ಸರ್ಕಾರದವರು ಇನ್ನೂ ಯೋಚನೆ ಮಾಡುತ್ತಿದ್ದಾರೆ. ಹಿಂದೆ ಭದ್ರಾವತಿಯಲ್ಲಿ ಉಕ್ಕನ್ನು ತಯಾರುಮಾಡುತ್ತಿದ್ದರು. ಈಗ ಅದನ್ನು ಪರಿವರ್ತನೆ ಮಾಡಿ ಸ್ಪೆಷಲ್ ಸ್ಟೀಲನ್ನು ತಯಾರು ಮಾಡುವ ಕಾರ್ಖಾನೆಯನ್ನಾಗಿ ಮಾಡಿದ್ದಾರೆ, ರೈತರ ಉಪಕರಣಗಳಿಗಾಗಿ ಮತ್ತು ಪ್ರತಿನಿತ್ಯವೂ ಕಟ್ಟಡಗಳಿಗೆ ಬೇಕಾದ ಉಕ್ಕು ಏನಿದೆಯೋ ಅದು ಇತ್ತೀಚೆಗೆ ಮೈಸೂರಿನ ಜನರಿಗೆ ಮಾಯವಾಗಿದೆ. ಇವತ್ತು ಪಂಜಾಬಿನಲ್ಲಿ 20 ಸ್ಟೀಲ್ ರೋಲಿಂಗ್ ಮಿಲ್ಸ್ ಇವೆ. ಬಂಗಾಳದಲ್ಲಿ 30 ಇವೆ, ಅಸ್ಸಾಂನಲ್ಲಿ 10-15 ಇವೆ, ಬೊಂಬಾಯಿನಲ್ಲಿ 20-30 ಇವೆ. ಮೈಸೂರು ರಾಜ್ಯದಲ್ಲಿ ಕೇವಲ ಒಂದೆರಡು ಸ್ಟೀಲ್ ರೋಲಿಂಗ್ ಮಿಲ್ಸ್ ಇವೆ. ಅದು ಕಡಿಮೆ ಆದ್ದರಿಂದ ಈ ರಾಜ್ಯದಲ್ಲಿಯೂ ಕೂಡ 10-15 ಸ್ಟೀಲ್ ರೋಲಿಂಗ್ಸ್ ಮಿಲ್ಸ್ ಆದರೆ ನಮ್ಮ ರೈತರಿಗೆ ಬೇಕಾದ ಪ್ರತಿನಿತ್ಯ ಉಪಯೋಗಿಸುವ ವಸ್ತುಗಳಿಗೆ ಸ್ಟೀಲ್ ಸಿಗುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರ 10-15 ಸ್ಟೀಲ್ ರೋಲಿಂಗ್ ಮಿಲ್ಸ್‌ಗಳನ್ನು ಇಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ ಉಕ್ಕಿನ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಬೊಂಬಾಯಿ ಅಧಿವೇಶನವಾದಮೇಲೆ ಬಿತ್ತನೆಗೆ ಇವತ್ತು ಸಾಕಷ್ಟು ಗೊಬ್ಬರವಿಲ್ಲ. ಗೊಬ್ಬರ ಕಾರ್ಖಾನೆಗಳು ಆಗಿಲ್ಲ. ಪಬ್ಲಿಕ್ ಸೆಕ್ಟರ್‌ನಲ್ಲಿ ಇವೆಲ್ಲವೂ ಆಗಬೇಕೆಂದು ಬಾಯಿ ಮಾತಿನಲ್ಲಿ ಹೇಳುತ್ತಿದ್ದಾರೆ. ಆದರೆ ಇವತ್ತಿನವರೆಗೂ ಆ ಕಾರ್ಖಾನೆಗಳು ಆಗಿಲ್ಲ. ಗೋವಾದಲ್ಲಿ ಗೊಬ್ಬರ ಕಾರ್ಖಾನೆ ತಯಾರು ಮಾಡುವುದನ್ನು ಇಂಡಿಯಾ ದೇಶದಲ್ಲಿರುವ ದೊಡ್ಡ ಸಾಹುಕಾರರಿಗೆ ಕೊಟ್ಟಿದ್ದಾರೆ. ಈ ದೇಶದಲ್ಲಿ ಕೈಗಾರಿಕೆಗಳು ಹೆಚ್ಚಿಗೆ ಪಬ್ಲಿಕ್‌ಸೆಕ್ಟರ್‌ನಲ್ಲಿ ಬೇಕು. ಸಮಾಜವಾದದ ಹೆಸರನ್ನು ಹೇಳತಕ್ಕ ಯಾವುದೇ ಸರ್ಕಾರವಾಗಲೀ ಅವರ ಪ್ರಥಮ ನೀತಿ ಏನಾಗಿರಬೇಕೆಂದರೆ, ಇಂತಹ ಮೂಲ ಉತ್ಪಾದನೆಗಳ ಕೈಗಾರಿಕೆಗಳನ್ನು ಕೇವಲ ಖಾಸಗೀಯವರಿಗೆ ಅಥವಾ ದೊಡ್ಡ ದೊಡ್ಡ ಶ್ರೀಮಂತರಿಗೆ ಕೊಡಬಾರದು. ಈಗ ಗೊಬ್ಬರ ಕಾರ್ಖಾನೆ, ಉಕ್ಕಿನ ಕಾರ್ಖಾನೆ, ಅಲ್ಯೂಮಿನಿಯಂ ಕಾರ್ಖಾನೆ ಪಬ್ಲಿಕ್ ಸೆಕ್ಟರ್‌ನಲ್ಲಿ ಮಾಡತಕ್ಕದ್ದು ಸಮಾಜವಾದದ ಪ್ರಥಮ ನೀತಿಯಾಗಿರಬೇಕು. ಅಂದಮೇಲೆ ದೊಡ್ಡ ದೊಡ್ಡ ಸಾಹುಕಾರರ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡು ಬೊಂಬಾಯಿ ಕಲ್ಕತ್ತಾಗಳಿಂದ ಇಲ್ಲಿಗೆ ಬನ್ನಿ, ನಿಮಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳುವ ನೀತಿಗೂ ಮತ್ತು ಸಮಾಜವಾದಕ್ಕೂ ಬಹಳ ಅಂತರವಿದೆ. ಈ ದಿಸೆಯಲ್ಲಿ ಈ ಸರ್ಕಾರ ಹೋಗಬಾರದು ಎಂಬುದಾಗಿ ನಾನು ಕೇಳಿಕೊಳ್ಳುತ್ತೇನೆ.

ಸ್ವಾಮಿ, ಇವತ್ತು ಎಲ್ಲಾ ಕಾರ್ಯಗಳನ್ನು ಸಮಾಜವಾದದ ತತ್ವಗಳ ಅನುಸಾರವಾಗಿ ಕಾರ್ಯಗತಮಾಡಬೇಕೆಂದು ಎಲ್ಲರ ಬಾಯಿಯಿಂದಲೂ ಕೇಳಿಬರುತ್ತಿದೆ. ಅವನ್ನು ಜಾಗ್ರತೆಯಾಗಿ ಕಾರ್ಯಗತಮಾಡುವುದನ್ನು ಇವತ್ತು ಎಲ್ಲರ ಬಾಯಿಯಿಂದಲೂ ಕೇಳಿಬರುತ್ತಿದೆ. ಅದನ್ನು ಜಾಗ್ರತೆಯಾಗಿ ಕಾರ್ಯಗತಮಾಡುವುದನ್ನು ಇವತ್ತು ಎಲ್ಲರೂ ಯೋಚನೆ ಮಾಡಬೇಕು. ಇದು ಸಾಧ್ಯವಾಗಬೇಕಾದರೆ, ಬಲಿಷ್ಠವಾದ ಹಾಗೂ ಸಂಪ್ರದಾಯವಾದ ತಳಹದಿಯಮೇಲೆ ನಿಂತಿರುವ ಸರ್ಕಾರ ಬೇಕು. ನಿಷ್ಠೆ ಇರುವ ಜನಗಳು ನಿಮ್ಮಲ್ಲಿ ಇದ್ದರೆ ಅದು ತಮಗೆ ಸಾಧ್ಯ. ಈ ಮನೆಯಲ್ಲಿ ನಿಮ್ಮನ್ನು ತಿದ್ದಿ ತಿದ್ದಿ ನಮಗೆ ಸಾಕಾಗಿ ಹೋಗಿದೆ. ಈ ಸಮಾಜವಾದವೆಂಬುದು ಏನಾಗಿದೆಯೆಂದರೆ ಅದು ಕೇವಲ ಜೀವನದ ಹೋರಾಟವಾಗಿದೆ. ಇವತ್ತು ಈ ರಾಷ್ಟ್ರದಲ್ಲಿ ಸಮಾಜವಾದ ಕಾರ್ಯಸಾಧನೆಯಾಗಬೇಕಾದರೆ, ಭದ್ರವಾದ ಸರ್ಕಾರ ಇಲ್ಲವೆಂಬ ಪ್ರಶ್ನೆ ಎದ್ದಿದೆ. ಇವತ್ತು ಮೈಸೂರು ರಾಜ್ಯದಲ್ಲಿಯೇ ಆಗಲೀ ಅಥವಾ ಪ್ರಾಂತೀಯ ಸರ್ಕಾರದಲ್ಲಾಗಲೀ ಒಂದು ಭದ್ರವಾದ ಸರ್ಕಾರ ಬೇಕು ಏಕೆಂದರೆ, ಇವತ್ತು ಶ್ರೀಮತಿ ಇಂದಿರಾ ಗಾಂಧಿಯವರ ಸರ್ಕಾರದವರು ಅನೇಕ ಬೃಹದಾಕಾರ ಯೋಜನೆಗಳನ್ನು ಮಾಡಬೇಕೆಂದು ಹೊರಟಿದ್ದಾರೆ. ಆ ಯೋಜನೆಗಳನ್ನು ಕಾರ್ಯಗತಮಾಡುವುದಕ್ಕೇನೋ ಆಗಲಿಲ್ಲ ಏಕೆಂದರೆ, ತನ್ನ ಕಡೆ ಇರತಕ್ಕ ಪಾರ್ಲಿಮೆಂಟ್ ಸದಸ್ಯರುಗಳು ಇತ್ತಕಡೆಯಿಂದ ಅತ್ತಕಡೆಗೆ ಎಲ್ಲಿ ಜಾರುತ್ತಾರೋ ಎಂದು ಕಾಯುವುದೇ ಆಗಿದೆ. ರಾಷ್ಟ್ರದ ಜವಾಬ್ದಾರಿ

ಹೊತ್ತಿರತಕ್ಕ ಪ್ರಧಾನಿಯವರೇ ಆಗಲೀ ಅಥವಾ ಬೇರೆ ಬೇರೆ ರಾಜ್ಯಗಳ ಮುಖ್ಯ ಮಂತ್ರಿಗಳೇ ಆಗಲೀ ಅವರು ಈಗ 'ಆಯಾ ರಾಮ್ ಗಯಾ ರಾಮ್' ಎಂಬುದಾಗಿ ಹೇಳಿ ಅತ್ತಕಡೆಯಿಂದ ಎಷ್ಟು ಜನ ಬರುತ್ತಾರೆ, ಇತ್ತ ಕಡೆಯಿಂದ ಎಷ್ಟು ಜನ ಅತ್ತಕಡೆಗೆ ಹೋಗುತ್ತಾರೆ ಎನ್ನುವುದನ್ನು ನೋಡುವುದೇ ಆಗಿದೆ. ಈಗ ಇರುವ ರಾಜಕೀಯ ಚಿತ್ರದಿಂದ ಯಾವ್ಯಾವ ಪಕ್ಷಗಳ ಬಲಾಬಲ ಎಷ್ಟೆಷ್ಟು ಇದೆಯೆಂಬುದನ್ನು ಪರೀಕ್ಷೆ ಮಾಡುವುದಕ್ಕಾಗುವುದಿಲ್ಲ.

3-00 P.M.

ರಾಜಕೀಯ ತತ್ವದಮೇಲೆ ಹೋರಾಟ ಮಾಡಿ ಚುನಾವಣೆಯಲ್ಲಿ ಗೆದ್ದು ಬಂದಮೇಲೆ ಪಕ್ಷಗಳನ್ನು ಬದಲಾಯಿಸುವುದನ್ನು ನೋಡಿದರೆ ಭಾರತ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಕೊಲೆ ಮಾಡತಕ್ಕ ರೀತಿಯಲ್ಲಿ ಮತ್ತು ಭದ್ರವಾದ ಸರಕಾರ ರಚನೆಮಾಡುವುದಕ್ಕೆ ಕಷ್ಟವಾಗತಕ್ಕ ರೀತಿಯಲ್ಲಿ ದೇಶ ಹೋಗುತ್ತಾ ಇದೆ ಎನ್ನುವುದು ನಮಗೆ ಗೊತ್ತಾಗುತ್ತದೆ. ಈ ಪಕ್ಷಾಂತರ ಪಿಶಾಚಿ ಏನಿದೆ ಅದು ಬಿಟ್ಟು ಹೋದ ಹೊರತು ನಮ್ಮ ದೇಶದ ಪ್ರಜಾಪ್ರಭುತ್ವ ಬಹಳ ಭದ್ರವಾದ ತಳಹದಿಯಲ್ಲಿ ಇದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಯಾವ ಪಕ್ಷಗಳಿಂದಲೇ ಗೆದ್ದು ಬರಲಿ ಆ ಪಕ್ಷದಲ್ಲೇ ಮುಂದುವರೆಯಬೇಕಾದ್ದು ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬನ ಕರ್ತವ್ಯ. ಪ್ರಪಂಚದ ಯಾವ ರಾಷ್ಟ್ರಕ್ಕೆ ಹೋಗಲಿ ಪ್ರಜಾಪ್ರಭುತ್ವ ರಾಷ್ಟ್ರ ಎಂದು ಏನು ಕೇಳಿದ್ದೇವೋ ಅಂತಹ ರಾಷ್ಟ್ರದಲ್ಲಿ ಪಕ್ಷಾಂತರ ಪಿಡುಗು ಎಲ್ಲಿಯೂ ಇಲ್ಲ. ಪಕ್ಷಗಳಿಂದ ಪಕ್ಷಕ್ಕೆ ಯಾವ ದೇಶದಲ್ಲಿಯೂ ಜನರು ಪಕ್ಷಾಂತರ ಮಾಡುತ್ತಾ ಇಲ್ಲ. ಚುನಾವಣೆ ಆದಮೇಲೆ, ಚುನಾವಣೆ ಕಾಲದಲ್ಲಿ ಏನು ಆಶ್ವಾಸನೆಗಳನ್ನು ಕೊಟ್ಟಿರುತ್ತಿರೋ ಅದನ್ನು ಈಡೇರಿಸುವುದು ಪ್ರತಿಯೊಬ್ಬ ಪ್ರತಿನಿಧಿಯ ಕರ್ತವ್ಯ. ಅವನೇ ಇಂತಹ ಆಶ್ವಾಸನೆಯನ್ನು ಮುರಿದರೆ ದೇಶದ ಗತಿ ಏನು. ಇದು ಕಾಯಿದೆ ಅಲ್ಲ. ನೀತಿಗೆ ಸಂಬಂಧಪಟ್ಟದ್ದು. ಈ ರೀತಿ ನಡೆಯುತ್ತಾ ಇರುವುದರಿಂದ ಯಾವ ರಾಜ್ಯದಲ್ಲಿ ಯಾವ ಗಳಿಗೆಯಲ್ಲಿ ಎಂತಹ ಸರಕಾರ ಬರುತ್ತದೆ ಎಂದು ನಿರೀಕ್ಷಣೆ ಮಾಡುವುದು ಕಷ್ಟ. ಇಲ್ಲಿಯೂ ಕೂಡ ಕಾಂಗ್ರೆಸ್ ಎರಡು ಹೋಳು ಆದಮೇಲೆ ದೇಶಕ್ಕೆ ಒಂದು ರೀತಿಯಲ್ಲಿ ಒಳ್ಳೆಯದಾಗಿದೆ ಮತ್ತು ಇದರಿಂದ ಕೆಲವು ದುಷ್ಪರಿಣಾಮಗಳೂ ಆಗಿರಬಹುದು. ದುಷ್ಪರಿಣಾಮಗಳಾದರೆ ಸಂತೋಷವಿಲ್ಲ. ಒಳ್ಳೆಯ ಪರಿಣಾಮಗಳಾದರೆ ಸ್ವಾಗತಿಸುತ್ತೇನೆ. ಕಾಂಗ್ರೆಸ್ ಸರಕಾರ ಎರಡು ಹೋಳು ಆದಮೇಲೆ ಕೇಂದ್ರ ಸರ್ಕಾರ ಇವೊತ್ತು, ಸಮಾಜವಾದ ಸಾಧನೆ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತಾ ಇದೆ ಎಂದು ಹೇಳುತ್ತೇನೆ. ಈ ದಿಸೆಯಲ್ಲಿ ಹೋದರೆ ಅವರಿಗಿಂತಲೂ ಹೆಚ್ಚಿಗೆ ನನಗೆ ಅಪರಿಮಿತ ಸಂತೋಷ. ಅದು ಆಗಬೇಕಾಗಿದೆ. ದೇಶದ ಪರಿಸ್ಥಿತಿ ನಿಂತಲ್ಲಿಯೇ ನಿಂತಿದೆ. ಈ ಕಾಂಗ್ರೆಸ್ ಒಡಕಿನಿಂದ ಆದರೂ ಕೂಡ ಡೈನಾಮಿಕ್ ಫೋರ್ಸ್ ಉಂಟಾಗಿ ಸಮಾಜವಾದದ ತಳಹದಿ ಮೇಲೆ ದೇಶ ಮುಂದಕ್ಕೆ ಹೋಗುವುದಾದರೆ ಅದರಿಂದ ಅಪರಿಮಿತ ಸಂತೋಷ ನನಗಾಗುತ್ತದೆ. ಅವರು ಮಾಡತಕ್ಕ ಯಾವುದೇ ಕಾರ್ಯ ಇರಲಿ ಅದಕ್ಕೆ ಭದ್ರವಾದ ಸರ್ಕಾರ ಅಗತ್ಯ. ಅದು ಇಲ್ಲದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ಯಾವ ಮುಖ್ಯ ಮಂತ್ರಿಯಾಗಲಿ, ಪ್ರಧಾನಿಯೇ ಆಗಲಿ ಜನರು ಇತ್ತಕಡೆಯಿಂದ ಅತ್ತಕಡೆಗೆ, ಅತ್ತಕಡೆಯಿಂದ ಇತ್ತಕಡೆಗೆ ಬರುವುದನ್ನೇ ಕಾಯುತ್ತಾ ಇರುವುದಾದರೆ ಅವರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಪ್ರತಿಯೊಬ್ಬರ ಆಶೆಯನ್ನು ನೆರವೇರಿಸುವುದರಲ್ಲಿಯೂ ಅವರ ಜೀವಮಾನ ಕಳೆದು ಹೋಗುತ್ತದೆ. Socialism has taken an offernsive attitude today. ಸಮಾಜವಾದದ ಎದುರಿಗೆ ಯಾರಿಗೂ ನಿಲ್ಲತಕ್ಕ ಧೈರ್ಯವಿಲ್ಲ. ಅದರಿಂದಲೇ ಮೇಲುಗೈಯಾಗಿದೆ. ಸಮಾಜವಾದವನ್ನು ಹಿಂಬಾಲಿಸಿ ಪ್ರತಿಯೊಂದು ಪಕ್ಷವೂ ಸಮಾಜವಾದ ಇದೆ ಎಂದು ಹೇಳುತ್ತಾ ಇದೆ. ಎಲ್ಲರೂ ಕೂಡ ಸಮಾಜವಾದದ ಹಿಂದೆ ಹೋಗತಕ್ಕ ಹೊಸ ನಿಲುವನ್ನು ನಾವು ನೋಡುತ್ತಾ ಇದ್ದೇವೆ. That is the new dimension of politics in 1970. ರಾಮಕೃಷ್ಣ ಹೆಗಡೆಯವರು 1970ನೇ ದಶಕದಲ್ಲಿ ಹೊಸ ವಾತಾವರಣ ನೋಡುತ್ತಿದ್ದಾರೆ ಎಂದು ಹೇಳುತ್ತೇನೆ. ಆ ಹೊಸ ವಾತಾವರಣವೇ ಸಮಾಜವಾದದ ಮೇಲುಗೈ. ಅದನ್ನೇ ಹಿಂಬಾಲಿಸತಕ್ಕ ಗುಂಪುಗಳು ನಾನು ಮುಂದೆ ತಾನು ಮುಂದೆ ಎಂದು ಹೋಗುತ್ತಾ ಇವೆ. ದೇಶದಲ್ಲಿ ಅದರ ಶಕ್ತಿ ಬೆಳೆದು ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಅಡಿಯಲ್ಲಿ ಭವ್ಯ ಭವಿಷ್ಯ ನಿರ್ಮಾಣ ಆಗಲಿ ಎಂದು ಆಶಿಸುತ್ತಿದ್ದೇನೆ. ಇದಕ್ಕೆ ಎದುರಾಗಿ ನಿಂತವರು ಎಲ್ಲರನ್ನೂ ತಳ್ಳಿಕೊಂಡು ಹೋಗತಕ್ಕ ಕಾಲ ಸಮೀಪದಲ್ಲಿ ಇದೆ ಎಂದು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಬರೀ ಮಾತಿನಿಂದ ಭೂಹೀನರಿಗೆ ಭೂಮಿಯನ್ನು ಹಂಚುತ್ತೇವೆ, ಭೂಸುಧಾರಣೆ ತರುತ್ತೇವೆ ಎಂದು ಹೇಳುತ್ತಾ ಕಪಟ ನಾಟಕ ಆಡುವುದರಿಂದ ದೇಶದ ಜನ ಮೋಸ ಹೋಗುವ ಕಾಲ ಮಿಂಚಿ ಹೋಗಿದೆ. ನಾವು ಏನು ಕಾರ್ಯಕ್ರಮಗಳನ್ನು

(ಶ್ರೀ ಎಸ್. ಶಿವಪ್ಪ)

ಹಾಕಿಕೊಳ್ಳುತ್ತೇವೆ ಎನ್ನುವುದನ್ನು ಜನ ಕಾದು ನೋಡುತ್ತಾ ಇದೆ. ನಮ್ಮ ಹೇಳಿಕೆ ಏನೇ ಇರಲಿ, ಧೋರಣೆ ಏನೇ ಇರಲಿ ಅವೆಲ್ಲವೂ ನಾವು ಮಾಡುವ ಕಾರ್ಯಕ್ರಮದಮೇಲೆ ನಿಂತಿದೆ. ಆದುದರಿಂದ ಬರೀ ಕಪಟ ನಾಟಕ ಆಡಿದರೆ ನಮ್ಮ ಸರಕಾರಕ್ಕೆ ಏಳಿಗೆ ಇಲ್ಲ. ದಿವಸಗಳನ್ನು ಎಣಿಸುತ್ತಿದ್ದೇವೆ. ಆದುದರಿಂದ ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತೇನೆ. ಸಮಾಜವಾದದ ನೆಪದಲ್ಲಿ ಆಳತಕ್ಕ ಸರಕಾರ ಯಾವುದೇ ಇರಲಿ ಅದು ಕಟ್ಟುನಿಟ್ಟಾಗಿ ಯೋಜನೆಯನ್ನು ಕಾರ್ಯ ರೂಪದಲ್ಲಿ ತರುವ ರೀತಿಯಲ್ಲಿ ಕೆಲಸ ಮಾಡಬೇಕು. ಆ ರೀತಿ ಮಾಡಿದರೆ ಸರಕಾರ ಉಳಿಯುತ್ತದೆ. ಸಮಾಜವಾದದ ಕಾರ್ಯಕ್ರಮಗಳನ್ನು ಜಾರಿ ಮಾಡುವುದರಲ್ಲಿ ಸರಕಾರ ಅಸಮರ್ಥವಾದರೆ ಅಂತಹ ಸರಕಾರ ವನ್ನು ಉರುಳಿಸುವುದರಲ್ಲಿ ನಾವು ಮೊದಲನೆಯವರು ಆಗುತ್ತೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri H. SIDDAVEERAPPA (Harihar).—Mr. Deputy Speaker Sir, I rise to offer a few remarks on the Speech of the Hon. Finance Minister. Sir, his Budget speech is running to about 50 pages and comparatively the Governor's Address was of about 60 pages. After reading with great care and attentions, we have to concede that the Finance Minister of this State is a cleaver person. The Finance Minister had succeeded in presenting the Budget which had camouflage real position. He is presenting the Budget which is going to take so many further strides in the economic advancement and betterment of this State. If you see a little retrospectively about the position of this State, you can under stand what it is. My hon. friend Sri Shivappa has stated that very little has been done during the last 22 years, in this country. Let us confine ourselves to this State. I can tell him that it will be wrong to say that nothing has been done during the period of 22 years. Bhadra Project was constructed and completed in the first Five Year Plan in our State. Likewise the Sharavathi Project was also taken up during this period and completed later on. These are two big projects that have been constructed. To say that nothing has been done during the period of 22 years is not correct. He may be nearer truth if he says that something more could have been achieved during these 22 years if all the resources were properly husbanded and judiciously spent, rather than saying that nothing has been achieved during all these years. Sir, we have seen the budget presented at the Centre by the Prime Minister as the Finance Minister. For the first time in the history of this country that budget, although it has an ambition of taxing to the tune of nearly Rs. 175 crores both direct and indirect, by and large has been welcomed by this country.

This country has nearly 90 per cent of the population containing have-nots and little-haves. It has been said that the rich have been soaked with a view to help the poor. I must say that the Finance Minister of the State also should take inspiration from the Budget at the Centre, and try to formulate his policies to such an extent that the common man in the State gets benefited. As we have seen, in our State 40 per cent of our population consists of children below 15 years of age. Our first and primary concern in the State, should be how to feed them to develop their mental capacities and build good physique. So many

steps will have to be taken, because they say that if you take care of the child, the adult will take care of himself. In this country, we have been seeing poor children quarrelling with dogs whenever some eaten leaves are thrown for scrhping something. Any man that comes from outside may take a picture and show it in his country. My friend Sri Shivappa said he was treated as an untouchable in another country because those people treat that we are poor. That kind of a thing should not be allowed to develop in this State. If we take the rural population of our State, which is about 70 to 80 per cent—nearly one-third—according to the statistical data, they are in absolute poverty. 34 per cent of them eke out an existence of sub-human level with a *per capita* expenditure of Rs. 15 per month, and below poverty—severe destitution—with men whose *per capita* expenditure is hardly Rs. 10 per month. I would like to ask the Finance Minister as to when are they going to build the State if they go at this rate and try to increase level of their living and try to increase and put the financial power into their hands so that they may get even on meal a day ? I have already said earlier, I have seen with my own eyes people hardly living with one anna and two anna's tea a day and try to have some cloth around their belly so that they could move withoutmuch difficulty.

My friend Sri Shivappa said : "What have you done in these three Five Year Plans ? The Fourth Plan—Fourth Plan is yet to come and we do not know whether it is ever going to see the light of day. In the First Five Year Plan, in Mysore State we spent Rs. 40.5 crores, and when we spent only Rs. 40.50 crores we completed the Bhadra Project. Not only that, we also laid the foundation for the Sharavathi Valley Project. In the Second Five Year Plan, we spent Rs. 142.27 crores, in the Third Plan we spent Rs. 247.58 crores, in 1966-67 we spent Rs. 59 52 crores, in 1967-68 we spent Rs. 60.25 crores and after this, probably another Rs. 100 crores more will be spent. All that will come to about Rs. 650 crores, cut of which in the First Five Year Plan, with which I was associated, we had spent only Rs. 40 crores. That means during your regime you have spent nothing less than Rs. 600 crores for the alleged development of this State. I am saying this to show how far and to what extent the benefit of this has gone to the common man, how far and to what extent it has gone to the man for whom it was intended and for whose benefit you assume you are spending the money.

I would now like to refer to the debt position. The total debt as on 1st April 1960 was Rs. 121.56 crores and on 1st April 1969 it is Rs. 392.6 crores. I do not have figures about the total dues from the agriculturists. I have figures about the agricultural indebtedness—on 1st April 1960 it was Rs. 25.87 crores on 1st April 1969 it is Rs. 159.11 crores. On 1st April 1960 we had a share capital in co-operative societies of Rs. 3.14 crores and on 1st April 1969 it swelled to Rs. 25.55 crores. On 1st April 1960 our interest charges were hardly Rs. 5.72 crores, but on 1st April 1969 it was Rs. 29.05 crores. It is now Rs. 23 crores or so. On 1st April 1960 we had 1,53,000 Government employees and today we

(SRI H. SIDDAVEERAPPA)

have got 2,50,000 Government employees. The salaries we paid in 1960-61 was Rs. 19 crores, in 1969-70 it is Rs. 67 crores and after the pay revision it will come to Rs. 77 crores. We had in 1960-61, 80 Heads of Departments, and in 1969-70 we have 139 or even more. The incidence of taxation is equally important. In 1960-61 our *per capita* incidence was Rs. 10.50 but today it is Rs. 29.65. The excise revenue then was nothing. Today you are getting Rs. 18 to Rs. 20 crores annually as excise revenue. Over and above all this, as it has come very often in our Resources Committee, Rs. 194 crores are needed to complete the irrigation works—what we call spill-over, not to speak of the new works. This clearly shows to what enormous depths we have gone down with regard to the debts. The Mysore Government have stood guarantee for debts to various corporations like the Electricity Board, the New Government Electric Factory, the Finance Corporation and to various other private individuals to whom they have given unsecured debts. The debts were given, they say, with a view to wriggle out some of the textile mills; they have given 2 to 3 crores of rupees to some mills. If my hon. friends want to see what are our debts, I invite their reference to Annexure 5. Looking to the total amount of debts that this Government has incurred, I should say no prudent man could ever have managed things in this manner. I have been dinning into the ears of the Finance Minister all along, but he is turning a deaf ear. I told him long ago, under article 293 of the Constitution of India a limit has been fixed for yourselves, do not try to go on incurring these debts, until one day Reserve Bank says you will no longer deserve overdrafts. That stage has already come in some cases. That is not the way the finances of the State should be husbanded and managed.

I was very happy when I read the statement of the Finance Minister when he went to a co-operative society. He said, "what kind of co-operative society is this?" It has a share capital of two crores in which Government itself has invested about 1 crore and odd of rupees! As a gentleman in charge of the finances of the State he should have known about this long long ago. Sir, if at all anybody has looted the Mysore State treasury it is this Co-operative Department. I have been saying it. Now a time has come when the Governor of the State has to get it examined—Governor is not a puppet of the Government, the Government is run in his name—He has got to call for all the files, examine them and find out how the resources of the State are; how the poor man is burdened? My own pity is that we are not going to pay these debts. They will be paid by our children and grand-children unless some wise man in charge of that Finance portfolio says that they are not the people who took these debts but those who took these debts are no more. Therefore I say that the Governor has to intervene under article 167 and sub-clause (b) states that the Government is bound to furnish the necessary information to the Governor. I venture to say this because we have been telling at all times, but nothing has been

done. Merely because of their majority strength they are doing their own things. The money they have taken by way of borrowings has all been mortgaged and eaten away by some of the contractors and co-operative societies. In the co-operative societies they have the Janata Bazars, the Land Mortgage Banks and various other institutions which have not invested any share capital of their own but have looted the State's money. Everywhere they have the strangle-hold on the masses where they put the monoply into the hands of these people. This is the way they have managed the affairs of the State. The Central Government which pins its faith on these co-operatives must now try to assess them properly. They cannot say it is the responsibility of the State Government and keep quiet. The fertilizer deal itself is sufficient to condemn them. I have heard some co-operative men saying that the Central Government has dumped it on their heads. They could instead have refused it. Further, as long as they gathered huge stocks of fertilizers they did not allow any private dealer to purchase them. Only after a huge stock piled up and they could not dispose it of did they allow the private dealers to purchase it, just as in the Transport Department where transport was first nationalised and then the private people were allowed to carry on their trade. That is why, Sir, in the industries we are languishing. They say they have given so many incentives. But who cared to take these incentives? They have been saying that the have taken up so many irrigation works, etc. But they have not been able to do anything. Now that the banks are nationalised I suggest that the Government use their good offices and take up various community development schemes. There are banks like the Mysore Bank the Syndicate Bank, the Canara Bank, etc., which are really doing good work. There are a number of rivers which you can harness for producing energy and they can take up community development projects there. To start with, do not take anything from the ryots. Give them water facilities and I can dare say your invested amount will be received back in full. Kannambadi gave us about 1 lakh acres and Bhadra about 1 lakh acres of irrigated land. If we take up these community development schemes we may have another 2 lakh acres of land under irrigation. Our State is the poorest in irrigation percentage. We have only 9 per cent irrigation. You will not be able to achieve anything either in the Krishna basin or in the Godavari basin because you are incapable of doing things and also because the method by which you are proceeding does not bring any result. Therefore I say you do not have the generating power to see what is in your mind is translated into action. I know the Finance Minister is a man of ideas provided he is given a free hand. He will be doing a distinct service to the State if he were to follow my suggestion and take it up seriously and see that the services of these nationalised banks are utilised.

Then Sir, much has been said about major irrigation projects. As far as I know there was the only one project that was taken up during our period. But unfortunately what has happened is to repair one small pipe which would have probably cost about Rs. 50 the Government has

(SRI H. SIDDAVEERAPPA)

taken years to do it. The Pressmen have taken much pains to go into the fields and see with their own eyes and publish it in the papers. I am grateful to them because I come from that area where this thing has happened. They have published this under the heading "Harihara ryotara dushstitbi." It has happened because out of the 13 channel work that were taken up there 8 works were entrusted to the Karnataka Traders, which has brought all this ruination for our State. They were the people who constructed these channels. Fortunately the dam was constructed before the Ministry under Nijalingappa came into existence. These contractors took 93 lakhs of rupees from our State and still the Government has not got courage to blacklist them. There is another project called 'Devarabelkere' which cost about Rs. 1.5 crores. They have deliberately given a small figure and everyday I was amused to hear that they have implemented the entire project. They have only implemented the sub-contracts. Sir, this is the only company that has been doing like this. In fact the Government has encouraged various other companies. As Sri Rajagopalachari said once that the Public Works Department is enemy number one, I say, you are the super enemy. That is why in Bhadra Project there are three breaches within a period of one month with the result that we have not received any water at all. Added to this, the Revenue Department people have asked the raiyats to pay water and other charges. From where are they to pay ? Every raiyat has incurred a debt of Rs. 500 per acre for agricultural purpose. Are we to weep ? Are we to simply keep quiet ? People are really awakened. Therefore, I suggest, please send your officers to every survey number, especially in the tail-end lands in Harihar and Davanagere Taluk to find out what their position is. All this has happened because it can hold water only up to 10 feet. They are filled with sand-bags. They are afraid of allowing more water to the full capacity. Let these officers go to each survey number and find out to what height it has received water, what are the debts that the agriculturist has incurred. We have got ample provisions under the Mysore Irrigation Act. We have to issue notices to you and take legal remedies. I know you are Government which should have the good of the raiyat in your heart. I request you to get it examined and see that such things do not happen.

3-30 P.M.

I am always saying, why do you want to wander like this ? You simply run up here and there for no purpose. Here is what SAMYUKTA KARNATAKA of 17th February 1970 says :

" ಮಹಾ ನಗರದಲ್ಲಿ ಸಚಿವ ಸಪ್ತ.

ಮೈಸೂರು ರಾಜ್ಯದ ಏಳು ಜನ ಸಚಿವರು ಇಂದು ಹುಬ್ಬಳ್ಳಿ — ಧಾರವಾಡ ಮಹಾನಗರಕ್ಕೆ ಸಂದರ್ಶನವಿತ್ತರು. ಇಷ್ಟೊಂದು ಜನ ಸಚಿವರು ಒಂದೇ ದಿನ ಇಲ್ಲಿಗೆ ಬಂದುದು ಬಹಳ ಅಪರೂಪ ಘಟನೆ.

ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಇಂದು ರಾತ್ರಿ ಬೆಂಗಳೂರಿಗೆ ಮರಳಿ ಪ್ರಯಾಣ ಮಾಡುವ ಮುನ್ನ ಎರಡೂ ಊರುಗಳ ಹಲವು ಸಮಾರಂಭಗಳಲ್ಲಿ ಭಾಗ ವಹಿಸಿದರು.

ಕಂದಾಯ ಮಂತ್ರಿ ಶ್ರೀ ಎಚ್. ವಿ. ಕೌಜಲಗಿ, ಉದ್ದಿಮೆ ಸಚಿವ ಶ್ರೀ ರಾಜಶೇಖರ ಮೂರ್ತಿ ಹೈನೋದ್ಯಮ—ಪಶುಸಂಗೋಪನ ಶಾಖೆಯ ಸಹಾಯಕ ಸಚಿವ ಶ್ರೀ ಜಿ. ಬಿ ಶಂಕರರಾವ್, ಅರಣ್ಯ ಶಾಖೆಯ ಸಚಿವ ಶ್ರೀ ಆಲೂರು ಹನುಮಂತಪ್ಪ ;....."

ಹೀಗೆ ಇವರ ಹೆಸರನ್ನೆಲ್ಲಾ ಹಾಕಿದ್ದಾರೆ."

Why I am saying it is, if you have conscience, you must tell me, did you not go there just to attend Belgaum session? Was it not your main purpose to go there? Because Hubli was on the way, you broke your journey there. I want to know whether you have claimed TA and DA for this journey? It will not be right because you had gone there for your party purposes. When such is the case, how can you think of making money by way of TA and DA from the Government?

Then Sir, my friend the Hon. Chief Minister asked me where have I shown any communal preference? I have got enough material. If you want concrete instances, I have got 30 instances. You appoint a committee and I will show where you stand, and if I do not prove what I say, I am prepared to take any punishment. Now, I can give you one instance. In Davanagere, you have a registered co-operative sugar mill. How many non-officials are there and to which party they belong? That is the only place where we have a non-official as Chairman and the Deputy Commissioner as an ordinary member. When such is the position, they want to teach us morals. Take the instance of the KCT mills, Hubli. This is a big chapter. Sir, I cannot do justice if I tackle it now for the moment. I can say that the KCT Mill is another instance to show how money has been squandered. I have always been saying—this is an obstinate, greedy and profligate Government which does not look to the interests of the State. This one particular instance is sufficient, leave alone Gulbarga. This KCT Mill was originally a private Mill. The Government took it and converted into a co-operative Mill and squandered a lot of money and then they thought of giving it on lease basis to a favourite of their own. The report was given by the Directors. I want the Hon. Minister to get a copy of that report and see whether any steps are taken in this co-operative Department? You put money into their hands. Have you no obligation to see that the money that is put into their hands is properly spent? Have you examined whether they are doing it properly? My complaint is, you are perhaps guilty in not keeping the keys fast with you so that they may not take money from you and squander it away. Again about this co-operative department: I want you to clear up figures and tell us which are all the co-operative departmental organisations in Mysore State that have taken loans and how much money they have utilised? You will be doing us a great service if you can do that. There may be one or two, but a majority of them have not utilised the money taken from you. I therefore feel that the money that is given has been wasted.

(SRI H. SIDDAVEERAPPA)

Sir, before I close, I would like to say one word which I read in papers. I cannot resist the temptation of quoting it. I wish the Chief Minister many happy returns of his birth day. He is reported to have said in his Birthday Message to the people—we have heard of messages given by POPE and others. Here is his Birthday Message :

> "Be patriotic, love your soil, be absolutely honest. Casteism, petty-mindedness, regionalism, parochialism, separatism and communalism have no place here now. We are Indians first and Kannadigas next. I appeal to the people think of Mahatma Gandhi's guidance and promote moral values at all times."

I should only say that this is something like devil quoting the scripture ; I can only say 'Physician heal thyself.' You first set your Government in order before you can give advice to others. People are good. Do not think that they are bad. People are exceedingly good. The only thing is, generally, when you have got power in your hands, by some methods, you are trying to tamper with public morals in this country. I am not referring to all instances. Mr. Chenniah was my colleague in the Cabinet. Sri D. M. Siddiah is a valued friend of mine. You have tried to create these posts for them. I would be very very happy. if you wanted the services of these people, you make them Ministers straightaway. I shall be very happy. I know that Mr. D. M. Siddiah is much better than any person and is fit to adorn the treasury benches. You have got so many under your sleeves. You offer so many temptations. Please do not do it. I have been always saying this : please do not try to contaminate the public life in this State. "If you want to be straightforward, make them Cabinet Ministers." In our villages we know what they do. If we yoke our bullocks, we do not tie them only on one side because they get some sore there. Therefore we change our bullocks once in two years and we try to put in new bullocks in place of the old bullocks who cannot carry load. Therefore, remove them and put in these new bulls so that they can do you good service.

With these few words, I close my remarks.

[Mr. CHAIRMAN (SRI D. M. SIDDAIAH) in the Chair].

† ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇಬಿಹಾಳ).— ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮಂಡಿಸಿದ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ಒಂದೆರಡು ಮಾತು ಹೇಳುತ್ತೇನೆ. ಇದುವರೆಗೆ ಭಾಷಣ ಮಾಡಿದಂಥ ಮಾನ್ಯ ಸದಸ್ಯರು ಅರ್ಥ ಮಂತ್ರಿಗಳು ಪ್ರಗತಿಪರರಾಗಿಲ್ಲ ಎಂದು ಹೇಳಿದರು. ಮೈಸೂರು ರಾಜ್ಯದಲ್ಲಿ ಪ್ರಜೆಯ ವರಮಾನ ಹೆಚ್ಚಾಗಿ ರಾಜ್ಯದ ವರಮಾನ ಎರಡು ಪಟ್ಟು ಹೆಚ್ಚಾಗಿರುವುದರಲ್ಲಿ ಯಾವ ಸಂದೇಹ ಇಲ್ಲ. ಇಷ್ಟು ಪ್ರಗತಿ ಸಾಧಿಸಿದ್ದರೂ ಕೂಡ ಪ್ರಗತಿಪರರಾಗಲ್ಲ ಎಂದು ಹೇಳುವುದು ಸರಿಯಲ್ಲ. ನಮ್ಮ ರಾಜ್ಯದ ಆರ್ಥಿಕ ಪ್ರಗತಿ ಹದಗೆಟ್ಟಿದೆ ಎಂದು ಹೇಳುವುದು ಸಮಂಜಸವಲ್ಲ. ನಾವು ಇವತ್ತು ಅಭಿವೃದ್ಧಿ ಹೊಂದುವ ಗಡಿಯಲ್ಲಿ ಇದ್ದೇವೆ. ಅಭಿವೃದ್ಧಿಯಾಗುವಾಗ ಸಾಲ ಮಾಡುವುದು ಸಹಜ. ಬಂಡವಾಳಕ್ಕೆ ತಕ್ಕ ಪ್ರತಿಫಲ

ಕೂಡಲೇ ದೊರೆಯುವುದಿಲ್ಲ. ಅದಕ್ಕೆ ಅವಕಾಶ ಬೇಕು. ಒಂದು ದಶಕದ ಇತಿಹಾಸ ತೆಗೆದುಕೊಂಡರೆ ಪ್ರಗತಿ ಸಾಧಿಸಿದೆಯೋ ಇಲ್ಲವೋ ನೋಡಬಹುದು. ದೊಡ್ಡ ದೊಡ್ಡ ಪ್ರಾಜೆಕ್ಟ್ ಕಾರ್ಯಗತವಾಗಲು ಎಷ್ಟೋ ಸಮಯ ಬೇಕಾಗುತ್ತದೆ. ಆದುದರಿಂದ ದೃಷ್ಟಿಯನ್ನು ಬೇರೆ ಕಡೆ ಹೊರಳಿಸಿ ಪ್ರಗತಿ ಸಾಧಿಸಿದ್ದನ್ನು ತೆರೆದ ಮನಸ್ಸಿನಿಂದ ನೋಡಬೇಕು. ರಾಷ್ಟ್ರದ ಇತಿಹಾಸದಲ್ಲಿ ಐದು ಹತ್ತು ವರ್ಷ ಹೆಚ್ಚಲ್ಲ. ಪ್ರಗತಿ ಸಾಧಿಸಲು ಸರಕಾರದವರೇ ಜವಾಬ್ದಾರರು ಎಂದು ಅನೇಕರು ತಿಳಿದುಕೊಂಡಿದ್ದಾರೆ. ಆದರೆ ಅದು ಪ್ರತಿಯೊಬ್ಬ ಪ್ರಜೆಯ, ಪ್ರತಿಯೊಂದು ಪಾರ್ಟಿ ಪಂಗಡದ ಕರ್ತವ್ಯವಾಗಿದೆ. ಆರ್ಥಿಕವಾಗಿ ನಾವು ಹಿಂದುಳಿದಿದ್ದೇವೆ, ಇದು ನಿಜ. ಆದರೂ ಪ್ರಗತಿ ಸಾಧಿಸಿದ್ದೇವೆ. ಕೃಷಿ ಕ್ಷೇತ್ರದಲ್ಲಿ ಪ್ರಗತಿಯಾಗಿದೆ, ಉದ್ಯೋಗ ರಂಗದಲ್ಲಿ ಪ್ರಗತಿ ಸಾಧಿಸಿದ್ದೇವೆ. ಇನ್ನು ಟ್ಯಾಕ್ಸ್ ವಿಷಯ ತೆಗೆದುಕೊಂಡರೆ ಕೇಂದ್ರ ಸರಕಾರದವರು ರಾಜ್ಯ ಸರಕಾರಗಳ ಅಧಿಕಾರವನ್ನು ಮೊಟಕುಮಾಡಿದ್ದಾರೆ ಎಂದು ಅನಿಸುತ್ತದೆ. ರಾಜ್ಯ ಸರಕಾರದ ಸಂಪನ್ಮೂಲದಲ್ಲಿ ಕೇಂದ್ರ ಇಂದು ಕೈ ಹಾಕಿದೆ. ಇದರಿಂದ ಟ್ಯಾಕ್ಸ್ ಹಾಕಲಿಕ್ಕೆ, ಸಂಪನ್ಮೂಲ ಹೆಚ್ಚಿಸಲಿಕ್ಕೆ ಯಾವ ಅವಕಾಶ ರಾಜ್ಯ ಸರಕಾರಕ್ಕೆ ಉಳಿದಿಲ್ಲ. ಸಂಪನ್ಮೂಲ ಹೇಗೆ ಹೆಚ್ಚಿಸಬೇಕು ಎನ್ನುವುದನ್ನು ಸ್ಪಷ್ಟವಾಗಿ ಬಿಚ್ಚು ಮನಸ್ಸಿನಿಂದ ಅರ್ಥ ಮಂತ್ರಿಗಳು ಹೇಳಿದ್ದಾರೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಎಲ್ಲಾ ರಂಗದಲ್ಲೂ ಕೂಡ ಸ್ಯಾಂಡವಿಚ್ ಆಗುತ್ತಿದೆ. ಆದುದರಿಂದ ಇದನ್ನು ಬೇರೆ ದೃಷ್ಟಿಯಿಂದ ವಿಚಾರ ಮಾಡಬೇಕು. ಪ್ರಗತಿ ಪಥದಲ್ಲಿ ಸಂಪನ್ಮೂಲ ಹೆಚ್ಚಿಸಿಕೊಳ್ಳಬೇಕಾಗುತ್ತದೆ. ಬೆಟರ್‌ಮೆಂಟ್ ಲೆವಿ ಹಾಕಿದ್ದೀರಿ, ಇರಿಗೇಷನ್ ಟ್ಯಾಕ್ಸ್ ಹಾಕಿದ್ದೀರಿ, ಇದನ್ನು ವಸೂಲ್ಮಾಡುವುದು ಸರಕಾರದ ಜವಾಬ್ದಾರಿ. ಆದರೆ ಈ ಟ್ಯಾಕ್ಸ್‌ಗಳನ್ನು ಕೊಡಬೇಡಿ ಎಂದು ಚಳುವಳಿ ಮಾಡುತ್ತಿದ್ದಾರೆ. ಬೆಟರ್‌ಮೆಂಟ್ ಲೆವಿ ಮತ್ತು ಇರಿಗೇಷನ್ ಟ್ಯಾಕ್ಸ್ ತೆಗೆದುಹಾಕುವ ಬಗ್ಗೆ ಚಳವಳಿ ಮಾಡುತ್ತೇವೆಂದು ಶ್ರೀ ಶಿವಪ್ಪನವರು ಹೇಳಿದರು. ಈ ರೀತಿ ಮಾಡಿದರೆ ರಾಜ್ಯದ ಸಂಪನ್ಮೂಲ ಹೆಚ್ಚಿಸಿಕೊಂಡು ಪ್ರಗತಿ ಸಾಧಿಸುವುದು ಹೇಗೆ? ಅಲ್ಲದೆ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಮೇಲೆ ಹಣ ಖರ್ಚು ಮಾಡಿರುವುದು ಡೆಡ್ ಅಮೌಂಟ್ ಏನು? ಅದು ರಾಜ್ಯದ ಆಸ್ತಿ ಅಲ್ಲವೇ? ನೀರಾವರಿಯಲ್ಲಿ ತೊಡಗಿಸಿದ ಹಣ ಪ್ರತ್ಯಕ್ಷವಾಗಿ ನಮಗೆ ಬರಲಾರದು. ನೀರಾವರಿಯಲ್ಲಿ ಕೇವಲ ಹತ್ತು ಪರ್ಸೆಂಟ್ ಸಾಧಿಸಿದ್ದರೂ ಕೂಡ ಅದರ ಪ್ರತಿಫಲ ಸರಕಾರಕ್ಕೆ ನೇರವಾಗಿ ಬಾರದೇ ಇರುವುದರಿಂದ ಕಟ್ಟುನಿಟ್ಟಾಗಿ ಬೆಟರ್‌ಮೆಂಟ್ ಟ್ಯಾಕ್ಸ್ ವಸೂಲು ಮಾಡದೇ ಇರುವುದು ಒಂದು ಕಾರಣ. ಗ್ರಾಮಾಂತರ ಪ್ರದೇಶದಲ್ಲಿ ನೂರಕ್ಕೆ ನಾಲ್ಕರಷ್ಟು ಸಂಪತ್ತು ನಮಗೆ ಅಲ್ಲಿಂದ ಬರುತ್ತದೆ. ಅದಕ್ಕೆ ಅನುಗುಣವಾಗಿ ಆ ಭಾಗದಲ್ಲಿ ಅಭಿವೃದ್ಧಿ ಕಾರ್ಯ ಕೈಕೊಳ್ಳಲು ಆಗುತ್ತದೆಯೇ? ಇದನ್ನು ವಿಚಾರ ಮಾಡಬೇಕು. ಅರ್ಥ ಮಂತ್ರಿಗಳು ಹೇಳಿದ ಹಾಗೆ ಪಟ್ಟಣಗಳಲ್ಲಿ ಸ್ಲಮ್ಸ್ ಕ್ಲಿಯರನ್ಸ್ ಮಾಡಿ ಮನೆ ಕಟ್ಟಲು ಆಸ್ಪದ ಮಾಡಿ ಕೊಡಬೇಕಾಗುತ್ತದೆ. ಈ ರೀತಿ ಪ್ರಗತಿ ಸಾಧನೆ ಯೋಜನೆ ಹಾಕಿಕೊಂಡಿದ್ದಾರೆ, ಇದು ಸಾಧುವಾದ ಕೆಲಸ. ಇದಲ್ಲದೆ ಗ್ರಾಮಾಂತರ ಪ್ರದೇಶದ ಜನರ ಕಡೆಗೆ ಸಹ ಮನಸ್ಸು ಕೊಡಬೇಕಾಗುತ್ತದೆ. ಪ್ರತಿಯೊಬ್ಬರ ಆದಾಯ ಹೆಚ್ಚಿದರೂ ರಾಜ್ಯದ ಆದಾಯ ಹೆಚ್ಚಿದರೂ ಕೂಡ ಗ್ರಾಮಾಂತರ ಪ್ರದೇಶದಲ್ಲಿ ಆಗಲಿ ಪಟ್ಟಣದಲ್ಲಿಯೇ ಆಗಲಿ ಕೆಲವು ಜನ ಹೊಟ್ಟೆಗಿಲ್ಲದೆ ಅಲೆದಾಡುತ್ತಾರೆ. ಇದು ದುಃಖದ ಸಂಗತಿ. ಪ್ರಗತಿಪರ ರಾಷ್ಟ್ರದಲ್ಲಿ ಇದನ್ನು ನೋಡಲಿಕ್ಕೆ ಆಗದು. ಎಷ್ಟೋ ಜನ ರೋಗ ರುಜಿನದಿಂದ ರಸ್ತೆಯಲ್ಲಿ ಅಲೆದಾಡುವುದು ತಪ್ಪಿಲ್ಲ. ಇಂಥಾದ್ದು ಹೋಗಬೇಕಾದರೆ ಪ್ರಗತಿಪರ ಹೆಜ್ಜೆ ಇಡಲಿಕ್ಕೆ ಬೇಕು. ಪ್ರಗತಿ ಸಾಧಿಸಿದ್ದರೂ ಕೂಡ ಇಂಥ ಸ್ಥಿತಿಯಲ್ಲಿ ಇರುವುದು ನಾಚಿಕೆಗೇಡು ಎಂದು ಹೇಳಬಯಸುತ್ತೇನೆ. ಸಮಾಜದ ಮನಸ್ಸು ಶರೀರ ಸರಿಯಾಗಿದ್ದರೆ ಅವಯವಗಳಿಗೆ ಖಂಡಿತ ಕಳೆ ಬರುತ್ತದೆ. ವೈದ್ಯಕೀಯ ಸೌಲಭ್ಯವಿಲ್ಲದೆ ರಸ್ತೆಯಲ್ಲಿ ಅಲೆದಾಡುವ ಜನರಿಂದ ಸಮಾಜಕ್ಕೆ ರಾಜ್ಯಕ್ಕೆ ಕೆಟ್ಟ ಹೆಸರು ತರುವಂಥ ಸ್ಥಿತಿ ಇದೆ. ಶ್ರೀ ಶಿವಪ್ಪನವರು, ಶ್ರೀ ಸಿದ್ದವೀರಪ್ಪನವರು ಹೇಳಿದ ಹಾಗೆ ಇದರ ಬಗ್ಗೆ ಸರ್ವೆ ಮಾಡಲು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇದರಂತೆ ರಾಜ್ಯದಲ್ಲಿ ಎಲ್ಲ ಪ್ರಗತಿಗಳನ್ನೂ ಸಾಧಿಸುವುದು ಹೇಗೆಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ರಾಜ್ಯದಲ್ಲಿರತಕ್ಕ ಎಲ್ಲ ಸಂಪನ್ಮೂಲಗಳನ್ನೂ ಕ್ರೋಢೀಕರಿಸಿ ನಾವು ರಾಜ್ಯದ ಪ್ರಗತಿಯನ್ನು ಸಾಧಿಸಬೇಕು. ನಮ್ಮ ರಾಜ್ಯದ ನೀರಾವರಿ ಪ್ರಗತಿಯನ್ನು ತೆಗೆದುಕೊಂಡರೆ ನಮಗಿಂತಲೂ ಹೆಚ್ಚಿಗೆ ನಮ್ಮ ನೆರೆ ಹೊರೆಯ ಪ್ರಾಂತಗಳು ಈ ಬಾಬಿನಲ್ಲಿ ಮುಂದುವರಿದಿವೆ. ನಮ್ಮಲ್ಲಿ ಕೇವಲ ನೂರಕ್ಕೆ ಹತ್ತರಷ್ಟು ಮಾತ್ರ ನೀರಾವರಿಯಾಗಿದೆ. ಇದಕ್ಕೆ ಕಾರಣ ನಾವು ನಮ್ಮಲ್ಲಿರತಕ್ಕ ಸಂಪನ್ಮೂಲಗಳನ್ನು ಕ್ರೋಢೀಕರಿಸದಿರುವುದೇ ಒಂದು ದೊಡ್ಡ ಕೊರತೆ ಆಗಿದೆ ಎನ್ನಬಹುದು. ಅಷ್ಟೇ ಅಲ್ಲದೆ ರಾಜ್ಯ ಸರ್ಕಾರಕ್ಕೆ ಎಲ್ಲಾ ದೊಡ್ಡ ಹಾಗೂ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕಾಗುವುದಿಲ್ಲ. ದೊಡ್ಡ ದೊಡ್ಡ ನೀರಾವರಿ ಕೆಲಸಗಳನ್ನು ಕೇಂದ್ರದವರೇ ವಹಿಸಿಕೊಂಡು ಮಾಡಿದರೆ ಕೆಲಸ ಬೇಗ ಆಗುವುದಕ್ಕೆ ಸಾಧ್ಯವಾಗುತ್ತದೆ. ಈ ದಿವಸ

(ಶ್ರೀ ಎಸ್. ಎಂ. ಗುರೆಡ್ಡಿ)

ಈ ಕಾರ್ಯವನ್ನು ರಾಜ್ಯಕ್ಕೇ ವಹಿಸಿರುವುದರಿಂದ ನಮ್ಮ ಕಾಲವೆಲ್ಲಾ ಬರಿ ವ್ಯಾಜ್ಯದಲ್ಲಿ ಮುಗಿಯುತ್ತದೆಯೇ ವಿನಾ ಕಾರ್ಯಮಾತ್ರ ಮುಂದುವರಿಯುವಂತಿಲ್ಲ. ಹೀಗಾಗಿ ಕಾವೇರಿ ಮತ್ತು ಕೃಷ್ಣ ಅಣೆಕಟ್ಟುಗಳ ಕೆಲಸ ನಿಧಾನವಾಗುವುದಕ್ಕೆ ಅವಕಾಶವಾಗಿದೆ. ಇಂಥ ಕಲಹಗಳಿಂದ ನಮ್ಮ ರಾಜ್ಯದ ಅಭಿವೃದ್ಧಿ ಹಾಳಾಗುತ್ತದೆ. ಆದುದರಿಂದ ಈ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಕೆಲಸವನ್ನು ಸಂಪೂರ್ಣವಾಗಿ ಕೇಂದ್ರ ಸರ್ಕಾರದವರೇ ವಹಿಸಿಕೊಂಡರೆ ಈ ಪ್ರಾಜೆಕ್ಟುಗಳಲ್ಲಿ ಯಾವುದು ಫೀಜಿಬಲ್ ಯಾವುದು ಫೀಜಿಬಲ್ ಅಲ್ಲ ಎಂಬುದನ್ನು ಸುಲಭವಾಗಿ ನಿರ್ಧರಿಸಿ ಅವುಗಳನ್ನು ಬೇಗ ಕಾರ್ಯಗತಮಾಡುವುದಕ್ಕೂ ಅವರಿಗೆ ಅನುಕೂಲವಾಗುತ್ತದೆ. ಇದೇ ರೀತಿ ನಮ್ಮಲ್ಲಿ ಅಗಬೇಕಾಗಿರತಕ್ಕ ಉಕ್ಕಿನ ಕಾರ್ಖಾನೆ—ಹೊಸಪೇಟೆಯಲ್ಲಿ, ಇನ್ನೂ ಸ್ಥಾಪನೆಯಾಗಿಲ್ಲ. ಇದಕ್ಕೆ ಕೇಂದ್ರದವರ ನೆರವು ಅತ್ಯಗತ್ಯ. ಆದ್ದರಿಂದ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳ ಹಾಗೂ ದೊಡ್ಡ ದೊಡ್ಡ ಕೈಗಾರಿಕೆಗಳ ನಿರ್ಮಾಣದ ಕಾರ್ಯದಲ್ಲಿ ನಮಗೆ ಕೇಂದ್ರದವರು ಹೆಚ್ಚಿನ ನೆರವನ್ನು ನೀಡಬೇಕಾದ್ದು ಅವಶ್ಯಕ.

Sri B. P. GANGADHAR.—Why is it that when a State like Andhra Pradesh is progressing by leaps and bounds and they can impound all the water that is possible, in Mysore State it has become impossible to do so? Is it not due to the lethargy or the incapacity of the present Government here, which is not in a position to bring adequate pressure and, if necessary threat, on the Central Government and see that this State is treated on a par with other States in these matters?

ಶ್ರೀ ಎಸ್. ಎಂ. ಗುರ್ರೆಡ್ಡಿ.—ನಾನು ಕೇಂದ್ರ ಸರ್ಕಾರದವರು ನಮ್ಮ ಸಹಾಯಕ್ಕೆ ಬರಬೇಕಾದ್ದು ಅಗತ್ಯ ಎಂಬುದನ್ನು ಹೇಳುತ್ತಿದ್ದೆ. ನಮ್ಮಲ್ಲಿ ಲೀಡರ್ ಕೊರತೆ ಇಲ್ಲ. ಸಂಪನ್ಮೂಲಗಳ ಕೊರತೆಯೂ ಇಲ್ಲ. ಆದರೆ ಕೆಲವು ಭಾರಿ ಉದ್ಯಮಗಳನ್ನು ಮತ್ತು ನೀರಾವರಿ ಕಾಮಗಾರಿಗಳನ್ನು ಕಾರ್ಯಗತಗೊಳಿಸತಕ್ಕ ಕಾರ್ಯದಲ್ಲಿ ಕೇಂದ್ರದವರ ನೆರವು ತೀರಾ ಅಗತ್ಯ ಎಂಬುದನ್ನು ಒತ್ತಿ ಹೇಳಬೇಕಾಗಿದೆ. ರಾಜ್ಯದ ಪ್ರಗತಿ ಸಾಧನೆಯ ವಿಷಯದಲ್ಲಿ ಈ ಸಭೆಯ ಉಭಯ ಪಕ್ಷಗಳವರೂ ಪ್ರಯತ್ನ ಮಾಡಬೇಕಾಗಿದೆ. ನಮ್ಮ ರಾಜ್ಯದ ಬೇಡಿಕೆಗಳೇನೆಂಬುದನ್ನು ಸಮರ್ಥನೆ ಮಾಡಿಕೊಳ್ಳತಕ್ಕ ವಿಚಾರದಲ್ಲಿ ನಾವೆಲ್ಲರೂ ಒಗ್ಗಟ್ಟಾಗಿ ನಡೆಯಬೇಕಾಗಿದೆ; ದೇಶದ ಹಿತದೃಷ್ಟಿಯಿಂದ ಇದು ನಮ್ಮೆಲ್ಲರ ಕರ್ತವ್ಯ. ಪರಿಸ್ಥಿತಿ ಹೀಗಿದ್ದರೂ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸತಕ್ಕ ಕಾಲದಲ್ಲಿ ಅದನ್ನು ಕೆಲವು ಸದಸ್ಯರು ಇಲ್ಲಿ ವಿರೋಧಮಾಡುವುದು ಒಳ್ಳೆಯದಲ್ಲ. ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವ ವಿಷಯದಲ್ಲಿ ಸರ್ಕಾರದವರು ಸ್ವಲ್ಪ ಹೆಚ್ಚಿನ ತೆರಿಗೆಯನ್ನು ಹಾಕಿದರೂ ಅದಕ್ಕೆ ಸಭೆಯ ಎಲ್ಲಾ ಸದಸ್ಯರೂ ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಷ್ಟ್ರದ ಸಮಗ್ರ ಅಭಿವೃದ್ಧಿಯ ಬಗ್ಗೆ ರಾಜ್ಯದ ಅಭಿವೃದ್ಧಿ ಹೊಂದಿಕೊಂಡಿರುವುದರಿಂದ ಅಭಿವೃದ್ಧಿಯ ಕಾರ್ಯಗಳಲ್ಲಿ ಕೇವಲ ರಾಜ್ಯ ಸರ್ಕಾರದವರ ಮೇಲೆ ಅಲ್ಲದೆ ಕೇಂದ್ರದವರ ಮೇಲೂ ಆ ಜವಾಬ್ದಾರಿ ಇದೆಯೆಂಬುದನ್ನು ನಾನೀಗ ಹೇಳುತ್ತಿದ್ದೇನೆ. ಇದೇ ಸಂದರ್ಭದಲ್ಲಿ ನಾವು ಇತಿಹಾಸವನ್ನು ತಿರುವಿ ಹಾಕುವುದಾದರೆ ಇತ್ತೀಚೆಗೆ ಆ ಕೇಂದ್ರದವರು ಕೂಡ ನಮ್ಮ ರಾಜ್ಯಕ್ಕೆ ಹಿಂದಿನಿಂದ ಕೊಡುತ್ತಿದ್ದ ಸಹಾಯಕ್ಕಿಂತ ವರ್ಷೆ ವರ್ಷೆ ಅದನ್ನು ಕಡಮೆ ಮಾಡುತ್ತಾ ಬರುತ್ತಿದ್ದಾರೆ. ಕಳೆದ ವರ್ಷದಲ್ಲಿ ನಮಗೆ ಬರಬೇಕಾಗಿದ್ದ ಸಹಾಯ ಧನದಲ್ಲಿ 18 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದಾರೆಂದು ಆರ್ಥಿಕ ಸಚಿವರು ಅಪ್ಪಣೆ ಕೊಡಿಸಿದ್ದಾರೆ. ಹೀಗಾಗಿ ನಮ್ಮ ರಾಜ್ಯ ಹೆಚ್ಚು ಹೆಚ್ಚು ಸಾಲ ಮಾಡತಕ್ಕ ಪ್ರಸಂಗ ಬೇರೆ ಉಂಟಾಗಿದೆ. ಮುಂದಿನ ನಮ್ಮ ಪೀಳಿಗೆ ಇಂದಿನವರ ಋಣಭಾರದ ಹೊಡೆತಕ್ಕೆ ಸಿಕ್ಕುವಂತಾಗಿದೆ. ಅವರ ಮೇಲೆ ಭಾರ ಜಾಸ್ತಿ ಬೀಳುತ್ತದೆ. ಆದರೆ ಅದಕ್ಕೇನೂ ನಾವು ವ್ಯಥೆಪಡಬೇಕಾಗಿಲ್ಲ. ಸಾಲಕ್ಕೆ ತಕ್ಕಷ್ಟು ಆಸ್ತಿಯೂ ಕೂಡ ಇದೆ. ನಮ್ಮ ರಾಜ್ಯದಲ್ಲಿ ಅಷ್ಟು ಬೇರೆ ರಾಜ್ಯಗಳಂತೆ ಓವರ್‌ಡ್ರಾಫ್ಟ್ ಜಾಸ್ತಿಯಾಗಿರುವುದಿಲ್ಲ. ನಮ್ಮ ರಾಜ್ಯಕ್ಕೆ ಐದನೇ ಫೈನಾನ್ಸ್ ಕಮಿಷನ್ ಅಲಾಟ್ ಮಾಡತಕ್ಕ ಸಹಾಯ ಧನದಲ್ಲಿ 18 ಕೋಟಿ ರೂಪಾಯಿಗಳನ್ನು ಕಡಮೆ ಮಾಡಿದ್ದರಿಂದ ನಾವೇನೂ ನಮ್ಮ ಕೇಂದ್ರಕ್ಕೆ ಪಾವತಿ ಮಾಡತಕ್ಕ ಸಾಲದ ಕಂತುಗಳನ್ನೇನೂ ಕಡಮೆ ಮಾಡಿಲ್ಲ. ಪ್ರತಿವರ್ಷವೂ ಕಂತುಗಳನ್ನು ನಾವು ಕ್ರಮವಾಗಿ ಕೊಡುತ್ತಲೇ ಬಂದಿದ್ದೇವೆ. ಆದರೆ ಕೇಂದ್ರದವರು ನಮಗೆ ಕೊಡತಕ್ಕ ಹಣ ನಾವು ಅವರ ಸಾಲದ ಬಗ್ಗೆ ಮರುಪಾವತಿ ಮಾಡುವಷ್ಟೇ ಇದ್ದರೆ ಅದರಿಂದ ನಮಗೇನೂ ಅಷ್ಟು ಪ್ರಯೋಜನವಾಗುವುದಿಲ್ಲ. ಒಂದು ಕೈಲಿ ಕೊಟ್ಟಿದ್ದನ್ನು ಇನ್ನೊಂದು ಕೈಲಿ ತೆಗೆದುಕೊಂಡ ಹಾಗಾಯಿತು.

ಆದ್ದರಿಂದ ನಮಗೆ ಕೇಂದ್ರದಿಂದ ಹೆಚ್ಚು ಹಣ ಬರುವಂತೆ ಪ್ರಯತ್ನ ಮಾಡಬೇಕು. ಆ ಕೇಂದ್ರದವರು ಈ ಸಾಲಿನ ಬಡ್ಜೆಟ್ಟನ್ನು ನೋಡಿದರೆ ಅವರು ಅನೇಕ ಟ್ಯಾಕ್ಸ್‌ಗಳನ್ನು ಜಾಸ್ತಿ ಮಾಡಿರುವುದು ಕಂಡುಬರುತ್ತದೆ. ಅದರಿಂದಲೂ ನಮ್ಮ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಪಾಲು ಸಿಕ್ಕಬೇಕಾಗಿದೆ. ಆದರೆ ನಮಗೆ ಕೇಂದ್ರ ಸರ್ಕಾರ ನ್ಯಾಯವಾಗಿ ಎಷ್ಟು ಹಣವನ್ನು ಕೊಡಬೇಕೋ ಅಷ್ಟನ್ನೂ ಕೊಡದಿದ್ದಾಗ ಮತ್ತು ಅಷ್ಟನ್ನು ಕೊಟ್ಟರೂ ಪ್ರಯೋಜನವಾಗದಿರುವಾಗ ಅದನ್ನೂ ಕಡಿಮೆ ಆದರೆ ಮತ್ತು ಅಷ್ಟನ್ನು ಕೊಟ್ಟರೂ ಪ್ರಯೋಜನವಾಗದಿರುವಾಗ ಅದನ್ನಿನ್ನೂ ಕಡಿಮೆ ಮಾಡಿದರೆ ಇಲ್ಲಿ ಅಭಿವೃದ್ಧಿ ಕಾರ್ಯಗಳು ಹೇಗೆ ನಡೆಯಬೇಕು ? ಆದ್ದರಿಂದ ನಮಗೆ ಕೇಂದ್ರದವರ ಸಹಾಯ ಸಹಕಾರಗಳು ಹೆಚ್ಚಿಗೆ ದೊರೆಯಬೇಕಾದ್ದು ಬಹಳ ಅಗತ್ಯ. ಹಾಗೆ ಹೆಚ್ಚು ಸಹಾಯ ದೊರೆತರೆ ನಮ್ಮ ಆರ್ಥಿಕ ಮಂತ್ರಿಗಳು ಮುಂದಿನ ದಶಕದಲ್ಲಿ ತಮ್ಮ ಯೋಜನೆಯ ಪ್ರಕಾರ ಸಮಾಜವಾದ ಸಮತಾವಾದ ಸಮಾಜವನ್ನು ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ನಾವೆಲ್ಲರೂ ಬೆಂಬಲ ನೀಡಬೇಕಾದ್ದು ಅಗತ್ಯ. ನಮ್ಮ ಆರ್ಥಿಕ ಸಚಿವರು ಈ ವಿಚಾರವಾಗಿ 10 ಪಾಯಿಂಟುಗಳ ಒಂದು ಪ್ರೋಗ್ರಾಮನ್ನು ಹಾಕಿಕೊಂಡಿದ್ದಾರೆ. ಅದರ ಪ್ರಕಾರ ರಾಜ್ಯದಲ್ಲಿರತಕ್ಕ ಪ್ರತಿ ವ್ಯಕ್ತಿಯ ತಲಾ ಆದಾಯ ಹೆಚ್ಚಬೇಕಾಗಿದ್ದರೆ ಪ್ರತಿಯೊಬ್ಬರೂ ಅದಕ್ಕೆ ತಕ್ಕ ಬಂಡವಾಳವನ್ನು ಹಾಕಲೇಬೇಕು. ಈ ದಿವಸ ಖಾಸಗೀ ಉದ್ಯಮಗಳಲ್ಲಿ ಸಾಧಿಸಲ್ಪಟ್ಟ ಪ್ರಗತಿ ಸರ್ಕಾರಿ ಉದ್ಯಮಗಳಲ್ಲಿ ಸಾಧಿಸಲಾಗದೆ ಇರುವುದಕ್ಕೆ ಸಾಕಷ್ಟು ಕೇಂದ್ರದಿಂದ ನಮಗೆ ನೆರವು ಸಿಕ್ಕುತ್ತಿಲ್ಲ ಎನ್ನುವುದೂ ಒಂದು ಕಾರಣ. ಕೇಂದ್ರದವರು ತಾಳಿರತಕ್ಕ ಈ ಧೋರಣೆಯಿಂದ ನಮ್ಮಲ್ಲಿ ಔದ್ಯೋಗಿಕ ಬೆಳವಣಿಗೆ ಸಾಕಷ್ಟು ಮುಂದುವರಿದಿಲ್ಲ. ಇದರಿಂದ ಜನರಲ್ಲಿ ನಮ್ಮ ಬಗ್ಗೆ ಸಂಶಯ ಮೂಡಲಿಕ್ಕೆ ಕಾರಣವಾಗಿದೆ.

4-00 P.M.

ನಾವು ಎಷ್ಟೇ ಪ್ರಯತ್ನಪಟ್ಟರೂ ಕೂಡ ಉದ್ದಿಮೆದಾರರು ಉದ್ದಿಮೆಗಳನ್ನು ಸ್ಥಾಪಿಸಲು ಮುಂದೆ ಬರುತ್ತಾ ಇಲ್ಲ ಎಂದು ನಮ್ಮ ರಾಜ್ಯ ಸರ್ಕಾರದವರು ಹೇಳುತ್ತಿದ್ದಾರೆ. ಕಡಿಮೆ ದರದಲ್ಲಿ ವಿದ್ಯುಚ್ಛಕ್ತಿ ಕೊಡುತ್ತೇವೆ, ಸೈಟುಗಳನ್ನು ಕೊಡುತ್ತೇವೆ ಎಂದು ಹೇಳಿದರೂ ಮುಂದೆ ಬರುತ್ತಾ ಇಲ್ಲ ಎಂದು ಹೇಳುತ್ತಾರೆ. ಇದಕ್ಕೆ ಮುಖ್ಯ ಕಾರಣ ಕೇಂದ್ರ ಸರ್ಕಾರದ ಒಂದು ನೀತಿಯ ಫಲವಾಗಿ ಬಂಡವಾಳಶಾಹಿ ಜನ ಹಣ ಇದ್ದಂಥಾವರು ತಮ್ಮ ಉದ್ದಿಮೆಗಳನ್ನು ಸ್ಥಾಪನೆ ಮಾಡುವುವಕ್ಕೆ ಹಿಂಜರಿಯುತ್ತಿದ್ದಾರೆ. ನಾನು ಹೇಳುವುದು ಇಷ್ಟೆ: ಕೇಂದ್ರ ಸರ್ಕಾರದ ಬಡ್ಜೆಟ್ ನೋಡಿದಂಥ ಪ್ರತಿಯೊಬ್ಬ ಉದ್ದಿಮೆದಾರನಿಗೂ ಅನಿಸುತ್ತದೆ, ನಾವು ಏತಕ್ಕೆ ಹೆಚ್ಚು ಉದ್ದಿಮೆಗಳನ್ನು ಸ್ಥಾಪನೆ ಮಾಡಿ ಕೈಕಚ್ಚಿಕೊಳ್ಳಬೇಕು ಎನ್ನುವ ಉದ್ದೇಶದಿಂದ ಖಾಸಗಿಯವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬರುತ್ತಾ ಇಲ್ಲ ಎನ್ನುವ ಸಂಶಯ ಬರುತ್ತದೆ. ಖಾಸಗೀ ಜನರಿಂದ ನಾವು ಏನು ಆಸೆ ಮಾಡಿದೆವು ಅದು ನಿರಾಸೆಯಾಗಿದೆ ಎಂದು ನನಗೆ ತೋರುತ್ತದೆ. ಆರ್ಥಿಕ ಮಂತ್ರಿಗಳು ಹೇಳಿದ್ದಾರೆ ಯಾವ ಮನುಷ್ಯನು ಉದ್ಯೋಗ ಬೇಕು ಎಂದು ಬರುತ್ತಾನೆ, ಸಧೃಡವಾಗಿ ಇರುತ್ತಾನೆ ಅಂತಹವರಿಗೆ ಪ್ರತಿಯೊಬ್ಬರಿಗೂ ಉದ್ಯೋಗವನ್ನು ಕಲ್ಪಿಸಿಕೊಡುವುದಕ್ಕೆ ಅದನ್ನು ಸುಧಾರಿಸಲಿಕ್ಕೆ ಹೆಚ್ಚಿನ ಪ್ರಯತ್ನ ಮಾಡುತ್ತೇವೆ ಎಂದು. ಇದು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರುತ್ತದೆಯೋ ಎನ್ನುವುದು ಸಂಶಯವಾಗಿದೆ. ಈ ನಿರುದ್ಯೋಗ ಸಮಸ್ಯೆಯನ್ನು ನೋಡಿದರೆ ಡಾಕ್ಟರ್ ಆಗಲಿ, ಇಂಜಿನೀಯರ್ ಆಗಲಿ, ಎಂ.ಎ. ಮತ್ತು ಡಿಗ್ರಿ ಪಡೆದಂಥವರಾಗಲಿ ಇಂದು ಅವರ ಪರಿಸ್ಥಿತಿ ನೋಡಿದರೆ ಇದು ಇನ್ನೂ ಹೆಚ್ಚಾಗಿರುವ ಸಂದರ್ಭ ಇದೆ. ಏತಕ್ಕೆಂದರೆ ಕೇವಲ ಸರ್ಕಾರಿ ವಲಯ ಒಂದರಲ್ಲೇ ಉದ್ದಿಮೆಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯಇಲ್ಲ. ಈವುತ್ತು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಈ ಎರಡು ಸರ್ಕಾರಗಳೂ ಸೇರಿ ನಡೆಸುವ ಉದ್ದಿಮೆಗಳನ್ನು ತೆಗೆದುಕೊಂಡರೂ ಲಾಸ್ ಆಗುತ್ತಾ ಇದೆ. ಅಂದಮೇಲೆ ಖಾಸಗೀ ಕ್ಷೇತ್ರದವರನ್ನು ಬಿಟ್ಟು ಸರ್ಕಾರಿ ವಲಯದಲ್ಲಿ ಸ್ಥಾಪಿಸಿರುವ ಉದ್ದಿಮೆಗಳನ್ನು ತೆಗೆದುಕೊಂಡರೆ ಅವುಗಳ ಪರಿಸ್ಥಿತಿ ಹೇಗಿದೆ ಎಂದು ಕೆಲವು ಜನ ಹೇಳುತ್ತಾರೆ. ಕೋಆಪರೇಟೀವ್ ಸಂಸ್ಥೆಗಳನ್ನು ತೆಗೆದು ಹಾಕಿರಿ ಎನ್ನುವ ಮಟ್ಟಕ್ಕೆ ಬಂದಿದ್ದಾರೆ. ಅದನ್ನು ಅವರು ವಿಚಾರ ಮಾಡಬೇಕು

ಈ ಹೊತ್ತಿನ ದಿವಸ ಕೋಆಪರೇಟೀವ್ ಸಂಸ್ಥೆ ನೋಡಿದರೆ ಸಹಕಾರಿ ಕ್ಷೇತ್ರದಲ್ಲಿ ಏನಾಗಿದೆ ಎಂದರೆ ಅದು ಕೆಟ್ಟದ್ದೇ ಇರಬಹುದು ಆದರೆ ಆ ಸಂಸ್ಥೆ ಕೆಟ್ಟದ್ದಲ್ಲ. ಈವೊತ್ತು ಆ ಸಂಸ್ಥೆಯ ಮುಖಂಡರು ಜನತೆಯ ಪ್ರಗತಿಯ ಕಡೆಗೆ ಮನಸ್ಸು ಮಾಡಬೇಕಾಗಿದೆಯೇ ವಿನಃ ಇಂಡಿವಿಜ್ಯೂಯಲ್ ಆಗಿ ಒಬ್ಬ ಮನುಷ್ಯ ಕೆಟ್ಟ ಮನುಷ್ಯ ಇದ್ದಾಕ್ಷಣಕ್ಕೆ ಎಲ್ಲೋ ಒಂದು ಕಡೆ ಆ ರೀತಿ ಆಗಿದ್ದರೆ ಈ

(ಶ್ರೀ ಎಸ್. ಎಂ. ಗುರೆಡ್ಡಿ)

ಕೋಆಪರೇಟೀವ್ ಸಿಸ್ಟಂನ್ನೇ ತೆಗೆದು ಹಾಕಬೇಕು ಎಂದು ಹೇಳುವುದಕ್ಕೆ ಹೋಗುವುದು ಸರಿಯಿಲ್ಲ. ಇದರಿಂದಾಗಿ ಖಾಸಗೀ ಜನರಿಗೆ ಆಸ್ಪದ ಕೊಡುವುದು ತಪ್ಪುತ್ತದೆ. ಒಂದು ಕಡೆ ಕೋಆಪರೇಟೀವ್ ಸಂಸ್ಥೆ ಚೆನ್ನಾಗಿ ನಡೆಯದೆ ಹಣದ ದುರ್ವಿನಿಯೋಗವಾಗುವುದರಿಂದ ಅದನ್ನು ಮುಚ್ಚಿರಿ ಎಂದು ಮಾತನಾಡುವುದು ಸರಿಯಿಲ್ಲ. ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೆ ದೂಷಿಸುವುದು ಸರಿಯಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದು ಯಾರೇ ಆಗಲಿ ಖಾಸಗಿಯವರೇ ಆಗಲಿ, ಸರ್ಕಾರಿ ಉದ್ದಿಮೆಗಳಲ್ಲೇ ಆಗಲಿ ಬಂಡವಾಳ ಏನು ಹಾಕಿದ್ದಾರೋ ಅದಕ್ಕೆ ತಕ್ಕ ಪ್ರತಿಫಲ ಬರಬೇಕಾಗಿದೆ. ಆದುದರಿಂದ ಸರ್ಕಾರಿ ಕ್ಷೇತ್ರದಲ್ಲಿ ನಡೆಸತಕ್ಕಂಥ ಉದ್ದಿಮೆಗಳಲ್ಲಿ ಯಾವುದರಲ್ಲಿ ಪ್ರತಿಫಲ ಬರುತ್ತದೋ ಅದನ್ನು ಇಟ್ಟುಕೊಳ್ಳುವುದು ಉಚಿತ ಎಂದು ನನಗೆ ಕಾಣುತ್ತದೆ. ಈವೊತ್ತು ನಮ್ಮ ರಾಜ್ಯದ ಇತಿಹಾಸವನ್ನು ತೆಗೆದುಕೊಂಡರೆ, ಗುಲ್ಬರ್ಗದಲ್ಲಿ ಎಂ. ಎಸ್. ಕೆ. ಮಿಲ್ಸ್‌ಗೆ ಹಾಕಿದ ಹಣ, ಸ್ಪಿನ್ನಿಂಗ್ ಮಿಲ್ಸ್‌ಗೆ ಹಾಕಿದ ಹಣ. ರೆವೊಕ್ಕ ಇವುಗಳನ್ನು ನೋಡಿದರೆ ಸರ್ಕಾರಿ ರಂಗದಲ್ಲಿ ನಡೆದಿರುವ ಉದ್ದಿಮೆಗಳ ಪ್ರಗತಿಯಷ್ಟು ನಡೆದಿಲ್ಲ. ಇದಕ್ಕೆ ಏನೋ ಒಂದು ಕಾರಣ ಇರಬೇಕು ಇದನ್ನು ಸರಿಪಡಿಸಬೇಕು, ಆದುದರಿಂದ ಈ ಉದ್ದಿಮೆಗಳಲ್ಲಿ ಆಗುವಂಥ ಅನ್ಯಾಯವನ್ನು ತಡೆಗಟ್ಟಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ತಾವು ಸರ್ಕಾರದ ಪಕ್ಷವಾಗಿ, ಸರ್ಕಾರದವರು ನಡೆಸುತ್ತಾ ಇರತಕ್ಕ ಉದ್ದಿಮೆಗಳಲ್ಲಿ ನಷ್ಟವಾಗುವುದನ್ನು ಸರಿಪಡಿಸಬೇಕು ಎಂದು ಹೇಳುವುದನ್ನು ನೋಡಿದರೆ ಈ 22 ವರ್ಷದಿಂದಲೂ ಸರ್ಕಾರದವರು ಏನೂ ಮಾಡಲಿಲ್ಲ ಎನ್ನುವ ಅರ್ಥವೇ ?

ಶ್ರೀ ಎಸ್. ಎಂ. ಗುರೆಡ್ಡಿ.—ನಾನು ಹೇಳುವುದು ಇಷ್ಟೆ. ಸರ್ಕಾರಿ ಕ್ಷೇತ್ರದಲ್ಲಿ ನಡೆಯತಕ್ಕಂಥ ಉದ್ದಿಮೆಗಳು ಯಾವುದು ಲಾಭದಾಯಕವಾಗಿ ನಡೆಯುತ್ತಾ ಇಲ್ಲ ಅದನ್ನು ಸರಿಪಡಿಸಬೇಕೆಂದು ಹೇಳಿದೆ. ಕ್ಷೇತ್ರದಲ್ಲಿ ನಡೆಯುವುದನ್ನು ಅಭಿವೃದ್ಧಿಪಡಿಸಬೇಕೆಂದು ಹೇಳಿದೆ. ನಾವು ಎಷ್ಟು ಬಂಡವಾಳವನ್ನು ತೊಡಗಿಸಿದರೂ ಕೂಡ ಅವು ಹಾನಿಯಲ್ಲೇ ನಡೆಯುತ್ತಾ ಇವೆ. ಅದಕ್ಕೋಸ್ಕರ ಚಿಕ್ಕ ಇಂಡಸ್ಟ್ರೀಗಳನ್ನು ಮುಚ್ಚುವುದು ಉಚಿತ ಎಂದು ಹೇಳಿದೆ. ಹೆಚ್ಚು ಹಣವನ್ನು ತೊಡಗಿಸಿ ಹಾನಿ ಮಾಡಿಕೊಳ್ಳುವುದಕ್ಕಿಂತ ಅವುಗಳನ್ನು ಮುಚ್ಚಿ ಯಾರಾದರೂ ಖಾಸಗಿ ಜನರು ಮುಂದೆ ಬಂದರೆ ಅವರಿಗೆ ಕೊಡುವುದು ಒಳ್ಳೆಯದು ಎಂಬುದು ನನ್ನ ಅಭಿಪ್ರಾಯ.

ಇನ್ನು ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ ಎನ್ನುವುದನ್ನು ಬೇರೆ ಹೇಳಬೇಕಾಗಿಲ್ಲ. ಈವೊತ್ತು ಹಣದ ಪರಿಸ್ಥಿತಿ ದುರ್ಬಲವಾಗಿದೆ. ಆದರೂ ಕೂಡ ನಾವು ಎರಡನೇ ರಾಜ್ಯಕ್ಕೆ ಕಳುಹಿಸುವ ಶಕ್ತಿಯನ್ನು ಪಡೆದಿದ್ದೇವೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ ನಮ್ಮ ರೈತರಿಗೆ ಕೊಟ್ಟಿದ್ದಂಥ ಸವಲುತ್ತುಗಳೇ ಮುಖ್ಯ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಈವೊತ್ತಿನ ದಿವಸ ಇದೇ ರೀತಿ ಮುಂದುವರಿಯುವುದಾದರೆ ನಮ್ಮ ರಾಜ್ಯದ ಸಂಪತ್ತು ಪ್ರಗತಿ ಪಥದಲ್ಲಿ ನಡೆಯುತ್ತದೆ ಎಂಬುದು ನನ್ನ ಅಭಿಪ್ರಾಯ.

ಇನ್ನು ನಮ್ಮ ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿ ನಾನಾ ರೀತಿಯ ಯೋಜನೆಯನ್ನು ಹಾಕಿಕೊಂಡು ನಾವು ಕಾರ್ಯಗತ ಮಾಡಬೇಕಾಗಿದೆ. ಅದರಲ್ಲಿ ಮುಖ್ಯವಾಗಿ ಪ್ರತಿಯೊಂದು ಹಳ್ಳಿಗೂ, ಪ್ರತಿಯೊಂದು ಗ್ರಾಮೀಣ ಪ್ರದೇಶಕ್ಕೂ ರಸ್ತೆಗಳನ್ನು ಕೊಡಬೇಕು. ಕುಡಿಯುವ ನೀರಿನ ಬಾವಿ ಆಗಲೇ ಬೇಕು. ಮತ್ತು ಹೆಚ್ಚು ಜನಸಂಖ್ಯೆ ಇರುವಂಥ ಹಳ್ಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು ಎನ್ನುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಈ ಯೋಜನೆ ಕಾರ್ಯಗತವಾಗಬೇಕಾದರೆ ಸರ್ಕಾರದವರು ಹೆಚ್ಚು ಲಕ್ಷ್ಯ ವಹಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಈ ಪ್ರಗತಿ ಎಷ್ಟು ವೇಗವಾಗಿ ಆಗಬೇಕಾಗಿತ್ತೋ ಅಷ್ಟು ವೇಗವಾಗಿ ನಡೆಯುತ್ತಾ ಇಲ್ಲ.

ಇನ್ನು ಎಷ್ಟೋ ಗ್ರಾಮಗಳು ಸಾರಿಗೆ ಸಂಪರ್ಕ ಹೊಂದಿಲ್ಲ. ಮತ್ತು ಕುಡಿಯುವ ನೀರಿನ ಬಾವಿಯನ್ನು ಹೊಂದಿಲ್ಲ. ನಾನು ಮೊದಲೇ ಹೇಳಿದ ಹಾಗೆ ಗ್ರಾಮೀಣ ಪ್ರದೇಶಗಳಿಂದ ಹೆಚ್ಚು ಜನ ಪಟ್ಟಣಗಳಿಗೆ ಬರುತ್ತಿದ್ದಾರೆ. ಅದಕ್ಕೆ ಮುಖ್ಯ ಕಾರಣ ಏನೆಂದರೆ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಅವಕಾಶಗಳು ಬಹಳ ಕಡಿಮೆಯಾಗಿದೆ. ಆದುದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಲಿಕ್ಕೆ ಹೆಚ್ಚು ಆಸ್ಪದವನ್ನು ಮಾಡಿಕೊಡಬೇಕು. ಈವೊತ್ತು ಕೂಡ ನಾವು ಮಾತನಾಡುತ್ತಾ ಇರುವುದು ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಬೆಂಗಳೂರು, ಹುಬ್ಬಳ್ಳಿ ಇಂಥ ದೊಡ್ಡ ಪಟ್ಟಣಗಳಲ್ಲಿ ಸ್ಥಾಪನೆ ಮಾಡಬೇಕು ಎನ್ನುವ ಭಾವನೆ ನಮ್ಮಲ್ಲಿದೆ ಮತ್ತು

ಹಾಗೆ ಹೇಳುವುದಕ್ಕೆ ಹೊರಟಿದ್ದೇವೆ. ಆದಕಾರಣ ನಾನು ಹೇಳುವುದು ಇಷ್ಟೆ. ಯಾವ ಉದ್ದಿಮೆಗಳನ್ನು ಸ್ಥಾಪನೆ ಮಾಡಬೇಕು ಎಂದು ನಮ್ಮ ಮನಸ್ಸಿನಲ್ಲಿದೆಯೋ ಅದನ್ನು ಬೆಂಗಳೂರು, ಹುಬ್ಬಳ್ಳಿ ಪಟ್ಟಣಗಳಲ್ಲಿ ಮಾಡದೆ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲೂ ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಏನೇನು ಕಚ್ಚಾಮಾಲುಗಳು ದೊರೆಯುತ್ತದೋ ಅದಕ್ಕೆ ಸಂಬಂಧಪಟ್ಟಂಥ ಜಿಲ್ಲೆಯಲ್ಲಿ ಸ್ಥಾಪನೆ ಮಾಡಬೇಕು ಅದಕ್ಕೆ ಪ್ರಯತ್ನ ಮಾಡಬೇಕು, ಎಂದು ಈ ಸಂದರ್ಭದಲ್ಲಿ ಕೇಳಿಕೊಂಡು ನನಗೆ ನಾಲ್ಕು ಮಾತುಗಳನ್ನು ಹೇಳಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. CHAIRMAN.—Sri K. P. Nadgouda to speak.

ಶ್ರೀ ಕೆ. ಪಿ. ನಾಡಗೌಡ.—ನಾನು ನಾಳೆ ಮಾತನಾಡುತ್ತೇನೆ. ನಾಳೆ ದಿವಸ ಮಾತನಾಡಲು ಅವಕಾಶ ಕೊಡಬೇಕು.

MR. CHAIRMAN.—Sri Puttaranganath, is he prepared to speak now?

SRI K. H. PUTTARANGANATH.—Not today sir. I shall speak tomorrow.

MR. CHAIRMAN.—Is Mr. Nagappa prepared to speak?

† ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥ ಸಚಿವರು ಕೊಟ್ಟಿರತಕ್ಕಂತಹ ಹೇಳಿಕೆ ಹೆಚ್ಚು ಆಶಾದಾಯಕವಾಗಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಈ ಸಾರಿ ತಮ್ಮ ಭಾಷಣವನ್ನು ಕನ್ನಡದಲ್ಲಿ ಹೇಳಿರುವುದು ಸ್ತುತ್ಯಾರ್ಹ. ಏಕೆ ಇದು ಆಶಾದಾಯಕವಾಗಿಲ್ಲ ಎಂದರೆ ಸರಕಾರ ತನಗೆ ಕೊಟ್ಟಿರುವ ಹಣವನ್ನು ಯಾವ ರೀತಿ ಖರ್ಚು ಮಾಡಿದೆ ಎನ್ನುವ ವಿವರಗಳನ್ನು ಕೊಡುವುದಕ್ಕೆ ಬದಲಾಗಿ ಕೇಂದ್ರ ಸರ್ಕಾರದಿಂದ ಬರತಕ್ಕ ಮತ್ತು ಕೇಂದ್ರ ಸರಕಾರಕ್ಕೆ ಕೊಡಬೇಕಾಗಿರುವ ಹಣದ ವಿಚಾರ ಮಾತ್ರ ಹೇಳಿದ್ದಾರೆ. ಇದು ಬರೀ ಒಂದು ಹೇಳಿಕೆ ಅಥವಾ ಮೆಮೊರ್ಯಾಂಡಂ ರೂಪದಲ್ಲಿ ಬಂದಿದೆ. ಕೇಂದ್ರ ಸರಕಾರಕ್ಕೆ ಒಂದು ರೀತಿಯಾದ ಮೆಮೋರ್ಯಾಂಡಂ ರೂಪದಲ್ಲಿ ಕೊಡತಕ್ಕದ್ದು ಸಹಜವಾದರೂ ಇದರಲ್ಲಿ ಕೊಟ್ಟಿರುವ ಕೆಲವು ಅಂಕೆ ಸಂಖ್ಯೆಗಳು ಹಾಗೂ ಮಾಹಿತಿಗಳು ಸಮಂಜಸವಾಗಿಲ್ಲ. ಅವರೇ ಕೊಟ್ಟಿರುವ ಕೆಲವು ಅಂಕೆ ಸಂಖ್ಯೆಗಳನ್ನು ನೋಡುವಾಗ ಅದು ಅವರ ಹೇಳಿಕೆಯಲ್ಲಿ ಕೊಟ್ಟಿರುವಂತೆ ಒಂದಕ್ಕೊಂದು ವಿರೋಧಾಭಾಸವಾದ ಅಂಕೆ ಸಂಖ್ಯೆಗಳು ಎನ್ನುವುದನ್ನು ತೋರಿಸುತ್ತವೆ. ಇವನ್ನು ನಾನು ಮುಂದೆ ತೋರಿಸಿ ಕೊಡುತ್ತೇನೆ. ಮುಖ್ಯವಾಗಿ ಇವೊತ್ತಿನ ದಿವಸ ಕೇಂದ್ರದಲ್ಲಿ ಆಯವ್ಯಯ ಮಂಡಿಸುವುದರಲ್ಲಿ ಆಗಲೀ, ನಮ್ಮ ರಾಜ್ಯದಲ್ಲಿ ಮಂಡಿಸುವುದರಲ್ಲಿ ಆಗಲೀ ವಾಸ್ತವಾಗಿ ಹ್ಯಾವ್ ನಾಟ್ಸ್‌ಗೆ ಅನುಕೂಲ ಮಾಡುವ ರೀತಿ ಮಾಡುತ್ತಿಲ್ಲ. ಸಹಜವಾಗಿ ಇಂದು ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಿದೆ. ಇವರೆಲ್ಲರಿಗೂ ಎಲ್ಲಿ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕೆಂದು ವ್ಯವಸ್ಥೆ ಮಾಡಿದ್ದೀರಿ? ಇದರಿಂದ ಬಡವರಿಗೆ ಸಿಕ್ಕುವ ಲಾಭವಾದರೂ ಏನು? ಇಂದು ರಾಜ್ಯದಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಾಗಲೀ ರಾಜ್ಯ ಸರ್ಕಾರ ಆಡಳಿತ ನಡೆಸುವ ಕಾರ್ಖಾನೆಗಳಲ್ಲಾಗಲೀ ಅಥವಾ ಇನ್ನಾವ ಗಿರಣಿಯಲ್ಲಾಗಲೀ ಯಾವ ರೀತಿ ಜನಗಳಿಗೆ ಉದ್ಯೋಗಗಳು ಸಿಗುತ್ತವೆ ಎನ್ನುವುದೊಂದೂ ಈ ಭಾಷಣದಲ್ಲಿ ಇಲ್ಲ. ಇಂತಹ ಒಂದು ಅಭಿಪ್ರಾಯವನ್ನು ಹಿಂದೆ ಶ್ರಿ ಪಂಡಿತ್ ಜವಹರಲಾಲ್ ನೆಹರೂ ರವರು ಜೀವಂತವಾಗಿದ್ದಾಗ 11-12-1963 ರಲ್ಲಿ ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ. ಆವೊತ್ತಿನ ಪರಿಸ್ಥಿತಿಗೆ ಅನುಸಾರವಾಗಿ ಕೊಟ್ಟ ದುಡ್ಡುಗಳಿಂದ ಮುಂದೆ ಈ ದೇಶಕ್ಕೆ ಯಾವ ರೀತಿ ಲಾಭವಾಗಿದೆ ಎನ್ನುವುದನ್ನು ಅವರು ತಮ್ಮ ಹೇಳಿಕೆಯಲ್ಲಿ ಈ ರೀತಿ ಹೇಳಿದ್ದಾರೆ.

> "One thing that distresses me very greatly is, although I am convinced that the great majority of our population has bettered itself, may be a little, and has more calories of food and more clothes, yet there are people in India who have not profited by planning and whose poverty is abysmal and I want some methods to be found to remedy their wants"......

ಇದನ್ನು ಪಾರ್ಲಿಮೆಂಟಿನಲ್ಲಿ 11-12-1963 ರಲ್ಲಿ ಹೇಳಿದ್ದಾರೆ. ಅವರು ಹೇಳಿ ಇಂದಿಗೆ ಏಳು ವರ್ಷಗಳಾದರೂ ಇದರಲ್ಲಿ ಯಾವ ತರಹದ ಮಾರ್ಪಾಡೂ ಆಗದೇ ನಮಗೆ ಬರತಕ್ಕ ಹಣವನ್ನು ಹೆಚ್ಚಾಗಿ

(ಶ್ರೀ ಎಂ. ನಾಗಪ್ಪ)

ಯಾವ ಯಾವ ಕಾರ್ಯಕ್ರಮಗಳಿಗಾಗಿ ಖರ್ಚು ಮಾಡುತ್ತಿದ್ದಾರೆ ಅದನ್ನು ನೋಡಿದರೆ ಶೇಕಡಾ ಇಪ್ಪತ್ತರಷ್ಟು ಕೆಲಸಗಾರರ ಮೇಲೆ ಮತ್ತು ಕಾರ್ಖಾನೆಗಳ ಮೇಲೆ ಖರ್ಚಾಗುತ್ತಿದೆ. ಇದರಲ್ಲಿ ಶೇಕಡಾ 25—30 ರಷ್ಟು ಜನರಿಗೆ ಮಾತ್ರ ಇದರಿಂದ ಸ್ವಲ್ಪ ಮಟ್ಟಿನ ಪ್ರಯೋಜನವಾಗಿದೆ. ವಕ್ಕಲುತನಕ್ಕೆ ಹೆಚ್ಚು ಗಮನ ಕೊಡಬೇಕೆಂದು ಮತ್ತು ಕೆಲವು ಇಂಡಸ್ಟ್ರಿಗಳ ಮೇಲೆ ಖರ್ಚು ಮಾಡ ಬೇಕೆಂದು ಮತ್ತು ಇನ್ನೂ ಹೆಚ್ಚಿಗೆ ಅನುಕೂಲ ಇರುವವರಿಗಾಗಿ ಹೆಚ್ಚು ಖರ್ಚು ಮಾಡುವುದು ಎನ್ನುವ ಮನೋಭಾವನೆ ಇದರಲ್ಲಿ ಕಂಡು ಬರುತ್ತಿದೆ. ಇದರ ಬಗ್ಗೆ ಒಂದು ಮಾತು ನನಗೆ ಇಲ್ಲಿ ನೆನಪಿಗೆ ಬರುತ್ತದೆ. "The Indians are better talkers than doers better planners than exectutors." ಈ ಮಾತುಗಳನ್ನು ಉತ್ತಮವಾಗಿ ಒಳ್ಳೆಯ ಭಾಷೆಯಲ್ಲಿ ಹೇಳತಕ್ಕ ಜನರು ಇದ್ದಾರೆಯೇ ಹೊರತು ವಾಸ್ತವವಾಗಿ ಕಾರ್ಯ ರೂಪದಲ್ಲಿ ಬರುವುದರಲ್ಲಿ ನಮ್ಮ ದೇಶ ಎಷ್ಟೋ ಹಿಂದುಳಿದಿದೆ. ಇದರ ಬಗ್ಗೆ ಬೇಕಾದಷ್ಟು ಉದಾಹರಣೆಗಳನ್ನು ಹೇಳಬಹುದು. ಇವೊತ್ತು ಒಕ್ಕಲುತನ ಉದಾಹರಣೆಯನ್ನಾಗಿ ತೆಗೆದುಕೊಂಡರೆ ನಾವು ಈ ದಿಸೆಯಲ್ಲಿ ಖರ್ಚು ಮಾಡಿರತಕ್ಕ ಹಣಕ್ಕೆ ಎಷ್ಟು ಮಟ್ಟಿನ ಪ್ರಗತಿ ಸಾಧನೆಯಾಗಿದೆ ಎಂದು ಇವುಗಳ ಲೆಕ್ಕಪತ್ರಗಳನ್ನು ನೋಡಿದರೆ ಇವೊತ್ತು ನಮ್ಮ ರಾಜ್ಯ ನೆರೆ ಹೊರೆಯ ರಾಜ್ಯಗಳಿಗಿಂತ ಬಹಳ ಹಿಂದುಳಿದಿದೆ ಎನ್ನುವುದು ಗೊತ್ತಾಗುತ್ತದೆ. ನಮ್ಮ ನೆರೆಯ ರಾಷ್ಟ್ರಗಳಲ್ಲಿ ಕೃಷಿಗಾಗಿ ಖರ್ಚು ಮಾಡಿ ಪ್ರಗತಿಯನ್ನು ಸಾಧಿಸುತ್ತಿದ್ದಾರೆ. ಆದರೆ ನಮ್ಮ ದೇಶ ದಲ್ಲಿ ಖರ್ಚು ಮಾಡುವ ಹಣಕ್ಕೆ ತಕ್ಕ ಹಾಗೆ ನಮ್ಮಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಬೆಳೆಯನ್ನು ಬೆಳೆದು ಕಾರ್ಯರೂಪಕ್ಕೆ ತಂದಿದ್ದಾರೆಯೇ ಎಂದು ನೋಡಿದರೆ ಅಂತಹ ಪ್ರಗತಿ ಕಾಣುತ್ತಿಲ್ಲ. ಆದರೆ ಎಲ್ಲೋ ಒಂದು ಕಸೆ ಹತ್ತು ಪಲ್ಲ ದವಸ ಬೆಳೆದರೆ ಅದರಿಂದ ಬಡವರಿಗೆ ಬರುವ ಲಾಭವಾದರೂ ಏನು ? ಮಾನ್ಯ ಮಂತ್ರಿಗಳು ಇಲ್ಲಿ ಹೇಳಿರುವಂತೆ ಸುಮಾರು ಒಂದು ಲಕ್ಷಕ್ಕೆ ಮೇಲ್ಪಟ್ಟು ಜನರು ವಿದ್ಯಾವಂತರಾಗಿ ನಿರುದ್ಯೋಗಿಗಳಾಗಿದ್ದಾರೆ. ಇದರಲ್ಲಿ ಬಡವರೇ ಹೆಚ್ಚಾಗಿದ್ದಾರೆ. ಇಷ್ಟು ಜನ ನಿರುದ್ಯೋಗಿಗಳಿಗೆ ಸರಕಾರದವರು ಉದ್ಯೋಗ ಒದಗಿಸಲು ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ? ಇದರಲ್ಲೇನೇ ಕೆಲವು ಕ್ರಮಗಳನ್ನು ಸೂಚಿಸಿದ್ದಾರೆ. ಕೆಲವರನ್ನು ಗ್ರಾಮಗಳಲ್ಲಿ ವಿಲೇಜು ಅಕೌಂಟೆಂಟರುಗಳನ್ನಾಗಿ ಮಾಡುವ ಮತ್ತು ಕೆಲವರನ್ನು ಎಂ. ಎಸ್. ಆರ್. ಟಿ. ಸಿ. ಯಲ್ಲಿ ಸೇರಿಸುವ ಮತ್ತು ಕೆಲವರಿಗೆ ಇನ್ನು ಕೆಲವು ಕೆಲಸಗಳನ್ನು ಕೊಡುವ ವಿಚಾರ ಇದರಲ್ಲಿ ಹೇಳಿದ್ದಾರೆ. ಆದರೆ ಎಲ್ಲರಿಗೂ ಉದ್ಯೋಗಗಳನ್ನು ಕೊಡಲು ಆಗು ತ್ತದೆಯೇ ಎನ್ನುವುದಕ್ಕೆ ಸ್ಪಷ್ಟವಾದ ಉತ್ತರ ಇದರಲ್ಲಿಲ್ಲ. ನಾನು ಇವರಲ್ಲಿ ಇನ್ನೊಂದು ವಿಷಯ ಕೇಳಬೇಕಾಗಿದೆ. ಇದರಲ್ಲಿ ಕಾರ್ ಮಾಡಬೇಕೆಂದು ಇದಕ್ಕೆ ಒಂದು ಯೋಜನೆ ಹಾಕಲಾಗಿದೆ ಎಂದೂ ಹೇಳಿದ್ದಾರೆ. ಒಂದು ಸಣ್ಣ ಕಾರು ಮಾಡುವುದರಿಂದ ಜನಕ್ಕೆ ಅನುಕೂಲವಾಗುತ್ತದೆಯೇ ? ಇದನ್ನು ಮಾಡಲು ಕಾರಣವೇನು ಎಂದರೆ ಮಾನ್ಯ ಮಂತ್ರಿಗಳು ಇದರಿಂದ ಒಂದು ಕೈಗಾರಿಕೆ ಹೆಚ್ಚಾಗುತ್ತದೆ ಮತ್ತು ಕೆಲವರಿಗೆ ಉದ್ಯೋಗಗಳು ಸಿಗಬಹುದು ಎಂದು ಹೇಳಬಹುದು. ಇದಕ್ಕೆ ಬದಲಾಗಿ ಟ್ರಕ್‌ಗಳನ್ನು ಮಾಡುವ ಕೈಗಾರಿಕೆ ಮಾಡಿದರೆ ಒಂದು ಟ್ರಕಿಗೆ ಒಬ್ಬ ಡ್ರೈವರು ಮತ್ತು ಒಬ್ಬರು ಕಂಡಕ್ಟರು ಬೇಕಾಗುತ್ತದೆ, ಹಾಗೂ ಇನ್ನೂ ಕೆಲವು ಕೆಲಸಗಾರರುಗಳಿಗೆ ಅನುಕೂಲ ವಾಗುತ್ತದೆ. ಸಣ್ಣ ಕಾರನ್ನು ಮಾಡಲು ಸುಮಾರು 20 ಸಾವಿರ ಬೇಕಾಗುತ್ತದೆ ಎಂದು ಮಾಡಿದರೆ ಇದರಿಂದ ಎಷ್ಟು ಜನಕ್ಕೆ ಸೌಲಭ್ಯ ಒದಗಿಸಿದಂತಾಗುತ್ತದೆ ? ಇವೊತ್ತು ನೂರು ರೂಪಾಯಿಗಳಷ್ಟು ತಿಂಗಳ ಅದಾಯ ಇರುವವರಿಗೆ ಇದರಿಂದ ಬರುವ ಲಾಭವಾದರೂ ಏನು ? ಯಾವ ಸಮಾಜಕ್ಕೆ ಇದರಿಂದ ಅನುಕೂಲವಾಗುತ್ತದೆ ? ಇದಕ್ಕಾಗಿ ಖರ್ಚೇನೋ ಆಗುತ್ತದೆ ಮತ್ತು ಇದಕ್ಕೆ ಫಾರಿನ್ ಎಕ್ಸ್‌ಚೇಂಜು ಎಷ್ಟು ಬೇಕಾಗುತ್ತದೆ ಇದರಿಂದ ಎಷ್ಟು ಜನಕ್ಕೆ ಕೆಲಸ ಸಿಕ್ಕಲು ಅವಕಾಶವಾಗು ತ್ತದೆ ಇವನ್ನೆಲ್ಲಾ ಯೋಚನೆ ಮಾಡಿದರೆ ರಾಜ್ಯಕ್ಕೆ ಇದರಿಂದ ಹೆಚ್ಚು ಅನುಕೂಲಗಳು ಆಗುತ್ತೆ ಎಂದು ಕಾಣುವುದಿಲ್ಲ. ಇದಕ್ಕೆ ಬದಲಾಗಿ ಟ್ರಕ್‌ಗಳನ್ನು ಮಾಡುವ ಕೈಗಾರಿಕೆ ತೆಗೆದುಕೊಂಡರೆ ಇದರಿಂದ ಸ್ವಲ್ಪ ಜನರಿಗೆ ಉದ್ಯೋಗದ ಅವಕಾಶಗಳು ಸಿಗುತ್ತವೆ. ಸುಮಾರು ಒಂದು ಟ್ರಕ್ಕಿಗೆ ಒಬ್ಬರು ಡ್ರೈವರು ಬೇಕು, ಒಬ್ಬ ಕಂಡಕ್ಟರು ಬೇಕು ಮತ್ತು ನಾಲ್ಕಾರು ಜನ ಕೂಲಿಗಾರರಿಗೆ ಕೆಲಸಗಳು ಸಿಗುತ್ತವೆ ಇದರಿಂದ ಅವರು ಜೀವನ ಮಾಡಲು ಅವಕಾಶವಾಗುತ್ತದೆ. ಇಂತಹ ಒಂದು ಜನರ ಕಡೆಗೆ ಸರಕಾರ ಲಕ್ಷ ಕೊಟ್ಟಿಲ್ಲ. ನಿರುದ್ಯೋಗಿಗಳಾಗಿರುವ ಜನಕ್ಕೆ ಇಂದು ಇದರಿಂದ ಉದ್ಯೋಗ ಸಿಗಲಿಕ್ಕೆ ಇದು ಒಂದು ಕಾರಣವಾಗುತ್ತಿತ್ತು. ಇದನ್ನು ಬಿಟ್ಟು ಇಂದು ಸಣ್ಣ ಕಾರನ್ನು ತಯಾರಿ ಸುವ ಒಂದು ವಿಷಯ ಹೇಳಿ ಬಿಟ್ಟರೆ ಇದರಿಂದ ನೂರಾರು ಜನರಿಗೆ ನೌಕರಿ ಹೇಗೆ ಸಿಕ್ಕುತ್ತದೆ ? ಮತ್ತು ಇದರಿಂದ ಉತ್ಪನ್ನವಾಗುವ ಕಾರುಗಳಿಂದ ಸಮಾಜಕ್ಕೆ ಆಗುವ ಲಾಭವಾದರೂ ಏನು ?

ಸಮಾಜದ ಎಲ್ಲೋ ಕೆಲವು ಜನಕ್ಕೆ ಇದರಿಂದ ಲಾಭವಾದರೂ ದೇಶದ ದೃಷ್ಟಿಯಿಂದ ಜನಕ್ಕೆ ಇದರಿಂದ ಹೆಚ್ಚು ಲಾಭ ಸಿಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕಾಗಿ ನಾನು ಹೇಳುತ್ತಿರುವುದು ವ್ಯವಸಾಯ ಕ್ಷೇತ್ರಕ್ಕೆ ಹೆಚ್ಚು ಅನುಕೂಲ ಮಾಡಿಕೊಡಬೇಕೆಂದು. ಸ್ವಾಮಿ, ಇವತ್ತು ತಾವೇ ಕೃಷಿ ಕೈಗಾರಿಕಾ ಕಾರ್ಪೊರೇಷನ್ನಿನ ಅಧ್ಯಕ್ಷರಾಗಿದ್ದೀರಿ. ಎಷ್ಟು ಟ್ರಾಕ್ಟರ್‌ಗಳನ್ನು ತಾವು ರೈತರಿಗೆ ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು. ನಾಲ್ಕು ಐದು ಎಕರೆ ಜಮೀನು ಇಟ್ಟುಕೊಂಡಿರುವ ರೈತರಿಗೆ ಟ್ರಾಕ್ಟರ್‌ನ ಅನುಕೂಲ ಸಿಗುತ್ತಿಲ್ಲ. 100ಕ್ಕೆ 80 ರಷ್ಟು ಟ್ರಾಕ್ಟರ್‌ಗಳನ್ನು ದೊಡ್ಡ ದೊಡ್ಡ ಶ್ರೀಮಂತ ರೈತರಿಗೆ ಕೊಟ್ಟಿದ್ದೀರಿ. ಉಳಿದ 10—15ರಷ್ಟು ಟ್ರಾಕ್ಟರ್‌ಗಳನ್ನು ಬಡ ರೈತರ ಅನುಕೂಲಕ್ಕಾಗಿ ಇಟ್ಟಿದ್ದೀರಿ. ಒಬ್ಬ ಬಡ ರೈತನ ಬಳಿ ಇವತ್ತು ಸರಿಯಾದ ಒಂದು ಜೊತೆ ಎತ್ತು ಇಲ್ಲ. ಇದರಿಂದ ಬಡ ರೈತರು ಸರಿಯಾದ ಬೆಳೆಯನ್ನು ಬೆಳೆಯಲು ಅವಕಾಶವಾಗದೆ ನನ್ನ ಹೆಂಡತಿ ಮಕ್ಕಳನ್ನು ಸಾಕುವುದು ಕಷ್ಟವಾಗಿದೆ. ಅದೇ ನೂರಾರು ಎಕರೆ ಜಮೀನು ಇರುವವರು ಟ್ರಾಕ್ಟರ್ ಸಹಾಯದಿಂದ ಬೆಳೆ ಬೆಳೆದು ಮಾರ್ಕೆಟ್‌ನಲ್ಲಿ ಒಳ್ಳೆಯ ಬೆಲೆಯನ್ನು ಪಡೆಯುತ್ತಿದ್ದಾರೆ, ಬಡವರಿಗೆ ಈ ಸರ್ಕಾರದವರು ಯಾವ ಸಹಾಯವನ್ನು ಸಹ ಮಾಡುತ್ತಿಲ್ಲ. ಇವತ್ತು ಗುರೆಡ್ಡಿಯವರ ಸಮಾಜವಾದದಲ್ಲಿ ಏನಾಗುತ್ತಿದೆ ಅಂದರೆ ಬಡವ ಕೆಳಗೆ ಹೋಗುತ್ತಿದ್ದಾನೆ, ಶ್ರೀಮಂತ ಆಕಾಶಕ್ಕೆ ಹೋಗುತ್ತಿದ್ದಾನೆ. ಅದಕ್ಕಾಗಿ ನಾನು ಹೇಳುವುದು ಬಡವ ಶ್ರೀಮಂತನ ಮಧ್ಯೆ ಇರುವ ವ್ಯತ್ಯಾಸವನ್ನು ಕಡಿಮೆ ಮಾಡಲು ಈಗಿರುವ ಸರ್ಕಾರದ ನೀತಿಯನ್ನು ಬದಲಾವಣೆ ಮಾಡಬೇಕು ಎಂಬುದಾಗಿ. ಮಾನ್ಯ ಆರ್ಥಿಕ ಸಚಿವರು ತಮ್ಮ ಭಾಷಣದಲ್ಲಿ ಒಂದು ಕಡೆ ರಾಜ್ಯದ ಆದಾಯದಲ್ಲಿ ಶೇಕಡಾ 62ರಷ್ಟು ಗ್ರಾಮಾಂತರ ವಲಯದಿಂದ ಬರುತ್ತಿದೆ ಎಂದು ಹೇಳಿದ್ದಾರೆ. 1960–61ರಲ್ಲಿ ರಾಜ್ಯದ ಆದಾಯ ರೂ. 708.21 ಕೋಟಿ ಇದ್ದರೆ 1969–70ರಲ್ಲಿ ಅದು ರೂ. 1360.29 ಕೋಟಿಯಾಗಿದೆ ಎಂದು ಸಹ ಹೇಳಿದ್ದಾರೆ. ಇವರ ಲೆಕ್ಕದ ಪ್ರಕಾರ 1360.29 ಕೋಟಿ ರೂಪಾಯಿಗಳಲ್ಲಿ 62 ಭಾಗದಷ್ಟು ಹಳ್ಳಿಗಳಿಂದ ಆದಾಯ ಬರುತ್ತಿದೆ ಎಂದು ಹೇಳಿದಂತಾಯಿತು. ಅಂದರೆ 84: ಕೋಟಿ ರೂಪಾಯಿಗಳಷ್ಟು ವರಮಾನ ಹಳ್ಳಿಗಳಿಂದ ಬರುತ್ತಿದೆ. ಇಷ್ಟು ಆದಾಯ ಬರುತ್ತಿದ್ದರೂ ಕೂಡ ಸರ್ಕಾರದವರು ಗ್ರಾಮಾಂತರ ಪ್ರದೇಶಗಳಲ್ಲಿ ಯಾವ ಗ್ರಾಮ ಕೈಗಾರಿಕೆಗಳನ್ನು ಸಹ ಪ್ರಾರಂಭ ಮಾಡಿಲ್ಲ. ಮತ್ತು ಬಡ ಕೃಷಿಕ ವರ್ಗದವರಿಗೆ ಯಾವ ಸವಲತ್ತುಗಳನ್ನು ಸಹ ಒದಗಿಸುತ್ತಿಲ್ಲ: ಸರ್ಕಾರಕ್ಕೆ ಬರುವ ಆದಾಯದಲ್ಲಿ ಹೆಚ್ಚಿನ ಹಣವನ್ನು ಪಟ್ಟಣಗಳಲ್ಲಿರುವ ಜನರಿಗೆ ಖರ್ಚು ಮಾಡಲಾಗುತ್ತಿದೆ. ಇದರಿಂದ ಪಟ್ಟಣದಲ್ಲಿರುವ ಜನರಿಗೆ ಹೆಚ್ಚು ಲಾಭವಾಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಒಕ್ಕಲುತನದ ದೃಷ್ಟಿಯಿಂದ ನೋಡಿದರೆ ಸರ್ಕಾರದವರು ಬಡ ರೈತರು ಆಧುನಿಕ ಬೆಳೆ ಬೆಳೆಯಲು ಯಾವ ಒಂದು ಸವಲತ್ತನ್ನೂ ಕೂಡ ಒದಗಿಸುತ್ತಿಲ್ಲ. ಇವತ್ತು ಕೆಲವು ಕಡೆ ಕೆಲವು ರೈತರು ಆಧುನಿಕ ಬೆಳೆ ಬೆಳೆದು ಒಳ್ಳೆಯ ಲಾಭವನ್ನು ಪಡೆಯುತ್ತಿರಬಹುದು. ಆದರೆ ರಾಜ್ಯದಲ್ಲಿರುವ ಎಲ್ಲ ಬಡ ರೈತರಿಗೂ ಕೂಡ ಸರಿಯಾದ ಸೌಲಭ್ಯ ದೊರಕುತ್ತಿಲ್ಲ. ರೈತರಿಗೆ ಬೆಳೆ ಬೆಳೆಯಲು ಅನೇಕ ಬಾವಿಗಳನ್ನು ತೋಡಿಸಿಕೊಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ ಎಂಬುದಾಗಿ ಮಾನ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ಸ್ತುತ್ಯಾರ್ಹವಾದ ಕೆಲಸ. ಈಗಾಗಲೇ ಸರ್ಕಾರದವರು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಲಕ್ಷಾಂತರ ರೂಪಾಯಿಗಳನ್ನು ವ್ಯಯ ಮಾಡಿ ಬಾವಿ ತೋಡಿಸಲು ಖರ್ಚು ಮಾಡಿದ್ದಾರೆ. ಈ ಮೂಲಕ ಎಷ್ಟರ ಮಟ್ಟಿಗೆ ಪ್ರಗತಿಯಾಗಿದೆ ಎಂಬುದು ಲೆಕ್ಕಪತ್ರಗಳನ್ನು ನೋಡಿದರೆ ಗೊತ್ತಾಗುತ್ತದೆ. ವಾಸ್ತವಿಕ ಸ್ಥಿತಿ ನೋಡಿದರೆ ಬಾವಿ ತೋಡಿಸುವ ವಿಚಾರದಲ್ಲಿ ಯಾವ ಪ್ರಗತಿಯಾಗಬೇಕಾಗಿತ್ತೋ ಅದು ಆಗಿಲ್ಲ ಎಂದು ವ್ಯಸನದಿಂದ ಹೇಳಬೇಕಾಗಿದೆ. ರೈತರ ಹಿತಸಾಧನೆ ಮಾಡುತ್ತೇವೆಂದು ಸರ್ಕಾರದವರು ಒಂದು ಕಡೆ ಹೇಳುತ್ತಾರೆ. ಮತ್ತೊಂದು ಕಡೆ ತೆರಿಗೆ ಹಾಕುತ್ತಾರೆ. ತೆರಿಗೆ ವಿಧಿಸುವ ವಿಚಾರದಲ್ಲಿ ಏನು ಒಂದು ಕಮಿಟಿಯನ್ನು ಸರ್ಕಾರ ನೇಮಕ ಮಾಡಿತ್ತೊ ಅದು ಮಾರಾಟ ತೆರಿಗೆಯ ವಿಷಯದಲ್ಲಿ ತನ್ನ ವರದಿಯನ್ನು ಕೊಟ್ಟಿದೆ. ಅದನ್ನು ಸರ್ಕಾರ ಒಪ್ಪಿಕೊಂಡಿದೆ. ಇದರ ಪ್ರಕಾರ ಫರ್ಟಿಲೈಜರ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದಾರೆ. ಒಕ್ಕಲುತನದವರಿಗೆ ಸಹಾಯ ಮಾಡುತ್ತೇವೆಂದು ಹೇಳಿ ಈ ರೀತಿ ಫರ್ಟಿಲೈಜರ್ ಮೇಲೆ ಸೇಲ್ಸ್ ಟ್ಯಾಕ್ಸ್ ಹಾಕುವುದು ಸರಿಯೇ ಎಂದು ಕೇಳುತ್ತೇನೆ. ಇದರಿಂದ ಬಡ ರೈತರಿಗೆ ಅನ್ಯಾಯವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ.

ಸಹಕಾರ ಚಳುವಳಿ ಮತ್ತು ಮಾರ್ಕೆಟ್‌ಗಳ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗ ಸರ್ಕಾರದವರು ಮಾರ್ಕೆಟ್ ಆಕ್ಟನ್ನು ಪಾಸ್ ಮಾಡಿದ್ದಾರೆ. ಈ ಆಕ್ಟು ಪ್ರಕಾರ ಶೇಕಡಾ ಒಂದೂವರೆ ರೂಪಾಯಿಗಿಂತ ಹೆಚ್ಚಿಗೆ ಕಮಿಷನ್ ತೆಗೆದುಕೊಳ್ಳಬಾರದು ಎಂದು ಇದೆ. ಈ ರೀತಿ ಕಾಯಿದೆ ಇದ್ದರೂ ಕೂಡ ಕಮಿಷನ್ ಏಜೆಂಟುಗಳು ಎರಡು ರೂಪಾಯಿ ಕಮಿಷನ್ ತೆಗೆದುಕೊಳ್ಳುತ್ತಿದ್ದಾರೆ. ಪುಸ್ತಕದಲ್ಲಿ ಮಾತ್ರ ಒಂದೂವರೆ ರೂಪಾಯಿ ಎಂದೇ ಬರೆಯುತ್ತಾರೆ.

(ಶ್ರೀ ಎಂ. ನಾಗಪ್ಪ)

ಈ ಬಗ್ಗೆ ರೈತರು ಸರ್ಕಾರಕ್ಕೆ ಕಂಪ್ಲೈಂಟ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ರೈತರು ಇವರ ಹತ್ತಿರ ಮೊದಲೇ ಸಾಲ ತೆಗೆದುಕೊಂಡು ಸಾಲಗಾರರಾಗಿರುತ್ತಾರೆ. ಇದರ ಬಗ್ಗೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಸಮಯದಲ್ಲಿ ಕೇಳಿ ಕೊಳ್ಳುತ್ತೇನೆ. ಇವತ್ತು ರೈತರು ತಾವು ಬೆಳೆದ ಬೆಳೆಯನ್ನು ಮಾರ್ಕೆಟ್‌ಗೆ ತೆಗೆದುಕೊಂಡು ಬಂದರೆ ಅದನ್ನು ತೂಕ ಮಾಡುವುದಕ್ಕೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಮಾಲನ್ನು ಇಡಲು ತಕ್ಕ ಗೋಡೌನ್ ವ್ಯವಸ್ಥೆ ಇರುವುದಿಲ್ಲ; ಮತ್ತು ಮಾಲನ್ನು ನೋಡಿಕೊಳ್ಳಲು ಸರಿಯಾದ ಸಿಬ್ಬಂದಿ ವರ್ಗ ಇರುವುದಿಲ್ಲ. ನಮ್ಮ ರಾಯಚೂರು ಜಿಲ್ಲೆಯನ್ನೇ ತೆಗೆದುಕೊಂಡರೂ ಕೂಡ ಬಿಗ್ಗೆಸ್ಟ್ ಮಾರ್ಕೆಟ್ ಇನ್ ದಿ ಮೈಸೂರ ಸ್ಟೇಟ್ ಎಂದು ಹೇಳಬಹುದು. ಅಲ್ಲಿಯೂ ಕೂಡ ಮಾರ್ಕೆಟ್‌ಯಾರ್ಡ್ ಫೆಸಿಲಿಟೀಸ್ ಇಲ್ಲ. ಮಾಲನ್ನು ತಂದ ರೈತರು ಯಾರಾದರೂ ಖಾಸಗೀ ವರ್ತಕರ ಅಂಗಡಿ ಮುಂದೆ ತಮ್ಮ ಮಾಲನ್ನು ಹಾಕಬೇಕಾಗುತ್ತದೆ. ಈ ರೀತಿ ಮಾಲನ್ನು ಹಾಕಿದರೆ ರೈತರಿಗೆ ಬಹಳ ಅನ್ಯಾಯ ವಾಗುತ್ತದೆ. ಈ ಅನ್ಯಾಯವನ್ನು ತಪ್ಪಿಸಲು ಸರ್ಕಾರದವರು ಸೂಕ್ತ ವ್ಯವಸ್ಥೆಯನ್ನು ಮಾಡಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರಾಜ್ಯ ಪುನರ್ ವಿಂಗಡಣೆಯಾದ ಮೇಲೆ ಹೈದರಾಬಾದ್ ಕರ್ನಾಟಕದಲ್ಲಿ ಮಾರ್ಕೆಟ್ ಕಮಿಟಿಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲಾಯಿತು. ಇದಕ್ಕಾಗಿ 1956 ರಲ್ಲಿ ಒಂದು ಬಿಲ್ ಸಹ ಪಾಸ್ ಮಾಡಲಾಯಿತು. ಬಿಲ್ ಪಾಸಾಗುವುದಕ್ಕೆ ಮೊದಲು 20 ಕ್ಯಾಟಗರಿ ನೌಕರರು ಇದ್ದರು. ಆಕ್ಟ್ ಪಾಸಾದ ಮೇಲೆ ಕೆಲವರನ್ನು ಸರ್ಕಾರೀ ನೌಕರರೆಂದು ಪರಿಗಣಿಸಲಾಯಿತು, ಮತ್ತೆ ಕೆಲವರನ್ನು ಮಾರ್ಕೆಟ್ ಕಮಿಟಿ ನೌಕರರೆಂದು ಪರಿಗಣಿಸಲಾಯಿತು. ಈ ರೀತಿ ಎರಡು ವರ್ಗ ಗಳನ್ನು ಮಾಡಿದ್ದರಿಂದ ಹೈದರಾಬಾದಿನಿಂದ ಬಂದಂಥ ನೌಕರರಿಗೆ ಅನ್ಯಾಯವಾಯಿತು. ಏಕೆಂದರೆ ಹೈದರಾಬಾದಿನಲ್ಲಿದ್ದ ನೌಕರರು ಪೆನ್‌ಷನ್ ಪಡೆಯುತ್ತಿದ್ದರು. ಅಲ್ಲಿಯ ಸರ್ಕಾರದವರು 9 ಪರ್‌ಸೆಂಟ್‌ವರೆಗೆ ಕಾಂಟ್ರಿಬ್ಯೂಷನ್ ಸಹ ಕೊಡುತ್ತಿದ್ದರು. ಈ ಅನುಕೂಲವನ್ನು ಈಗಿನ ಕಾಯಿದೆಯ ಪ್ರಕಾರ ಪಡೆಯುವುದಕ್ಕೆ ಹೈದರಾಬಾದಿನಿಂದ ಬಂದಿರುವ ನೌಕರರಿಗೆ ಅವಕಾಶವಿಲ್ಲ. ಇದನ್ನು ಸರ್ಕಾರದವರು ತೀವ್ರವಾಗಿ ತಮ್ಮ ಗಮನಕ್ಕೆ ತೆಗೆದುಕೊಂಡು ಮೊದಲಿನ ಅನುಕೂಲ ಗಳನ್ನು ಪಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಹಕಾರ ಚಳುವಳಿಯ ಬಗ್ಗೆ ಮಾನ್ಯ ಹಣಕಾಸಿನ ಸಚಿವರು ಮಾಡಿರುವ ಭಾಷಣವನ್ನು ನಾನು ಈ ದಿನ ಪತ್ರಿಕೆಗಳಲ್ಲಿ ಓದಿದೆ. ಬಹಳ ಕಠಿಣವಾಗಿ ಹೇಳಿದ್ದಾರೆ. ಇದೇ ರೀತಿಯ ಭಾಷಣವನ್ನು ಹಿಂದೆ ಈ ಸಭೆಯಲ್ಲಿ ಕೂಡ ಮಾಡಿದ್ದರು. ಹೊರಗಡೆ ಸಹ ಅನೇಕ ಸಲ ಪ್ರಸ್ತಾಪ ಮಾಡಿದ್ದಾರೆ.

ಸಹಕಾರ ಚಳುವಳಿ, ವಾಸ್ತವಿಕವಾಗಿ ಯಶಸ್ವಿಯಾಗಿ ನಡೆಯಬೇಕಾದರೆ ಸ್ವಜನಪಕ್ಷಪಾತ ಹೋಗಬೇಕು. ಸ್ವಜನ ಪಕ್ಷಪಾತ ನಡೆಯುವ ಬಗ್ಗೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ರಾಯಚೂರಿನಲ್ಲಿ ಒಂದು ಸೊಸೈಟಿಯಲ್ಲಿ, ಈ ಮಾನ್ಯ ಸಭೆಯ ಸದಸ್ಯರೊಬ್ಬರು ಅದಕ್ಕೆ ಅಧ್ಯಕ್ಷರಾಗಿದ್ದಾರೆ. ಅವರು ಆ ಸೊಸೈಟಿಯಲ್ಲಿ ತಕ್ಕ ಸದಸ್ಯರ ಪೈಕಿ ತಮ್ಮ ಸಂಬಂಧೀಕರ 9 ಜನ ಸದಸ್ಯರ ಸಿಗ್ನೇಚರನ್ನು ಮಾಡಿಸಿ ಒಂದು ಮೀಟಿಂಗ್ ಮಾಡಿದ್ದಾರೆ. ಜನರಲ್ ಬಾಡಿ ಮೀಟಿಂಗ್ ಅನ್ನು ಇವೊತ್ತಿನವರೆಗೂ ಕರೆದಿಲ್ಲ. ಇಂಥಾ ಒಂದು ಸಂಸ್ಥೆಯನ್ನು ಈ ದೇಶದಲ್ಲಿ ಇನ್ನೂ ಇಟ್ಟಿದ್ದಾರೆ. ಅವರ ಶಿಷ್ಯರಾಗಿರುವವರು ಇನ್ನೊಬ್ಬರು ಹಿಂದುಳಿದ ವರ್ಗದವರ ಹಾಗೂ ಹರಿಜನರ ಹೌಸಿಂಗ್ ಕೋಆಪರೇಟಿವ್ ಸೊಸೈಟಿಗೆ ಅಧ್ಯಕ್ಷರಾಗಿ ಬಂದ ನಂತರ 3 ತಿಂಗಳೂ ಕೂಡ ಅದು ನಡೆಯುವುದಕ್ಕೆ ಅವಕಾಶವನ್ನು ಕೊಡದೆ 23ನೇ ಡಿಸೆಂಬರ್ ತಿಂಗಳಿಂದ ಈಚೆಗೆ ಅದನ್ನು ಲಿಕ್ವಿಡೇಟ್ ಮಾಡಿ ಡೆಪ್ಯುಟಿ ಸೆಕ್ರೆಟರಿಗಳಿಂದ, ಮಂತ್ರಿಗಳಿಂದ ಒತ್ತಾಯ ಹಾಕಿಸಿ ಅದನ್ನು ಸೂಪರ್‌ಸೀಡ್ ಮಾಡಿದ್ದಾರೆ. ಇಂಥಾ ಸಹಕಾರ ಚಳುವಳಿಯಲ್ಲಿ ಸ್ವಜನ ಪಕ್ಷಪಾತವನ್ನು ಮಾಡಿದರೆ ಯಾವ ಸಹಕಾರ ಸಂಘ ಮುಂದಕ್ಕೆ ಬರುತ್ತದೆ? ನಾನು ಅನೇಕ ಸಹಕಾರ ಸಂಘಗಳನ್ನು ನೋಡಿದ್ದೇನೆ. ಎಷ್ಟೋ ಸಹಕಾರ ಸಂಘಗಳಲ್ಲಿ ಹಣ ಅಪವ್ಯಯವಾಗಿದೆ. ದುಡ್ಡು ತಿಂದಿದ್ದಾರೆ. ಈ ರೀತಿಯಾಗಿ ಈ ಸಹಕಾರ ಸಂಘಗಳಲ್ಲಿ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

4-30 P.M.

ನಮ್ಮ ದೇಶದಲ್ಲಿ ನಿರುದ್ಯೋಗ ಜಾಸ್ತಿಯಾಗಿದೆ. ಸರ್ಕಾರಿ ನೌಕರಿಯಲ್ಲಿ ಸಹಿತ ಸಾಧಾರಣ ವಾಗಿ 7 ಸಾವಿರ ಜನ ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ಕೆಲಸದಿಂದ ತೆಗೆಯಬೇಕೆಂದು ಸರ್ಕಾರ ದವರು ಉದ್ದೇಶಿಸಿದ್ದಾರೆ. ಇದು ಸರಿಯಲ್ಲ.

ಕೊನೆಯದಾಗಿ ನಿವೃತ್ತಹೊಂದಿದ ಅಧಿಕಾರಿಗಳಿಗೆ, ನೌಕರರಿಗೆ ಕೇಂದ್ರ ಸರ್ಕಾರದವರು 25 ರೂಪಾಯಿಗಳಿಂದ 45 ರೂಪಾಯಿಗಳವರೆಗೆ ಭತ್ಯವನ್ನು ಏರಿಸಿದ್ದಾರೆ. ಅದೇ ರೀತಿ ನಿವೃತ್ತ ನೌಕರರಿಗೆ ಭತ್ಯವನ್ನು ಏರಿಸುವ ಬಗ್ಗೆ ನಮ್ಮ ಸರ್ಕಾರದವರೂ ಸಹ ಯೋಚನೆ ಮಾಡಬೇಕು. ಓಲ್ಡ್ ಪೆನ್‌ಷನ್ ದಾರರಿಗೂ ಕೂಡ 15 ರೂಪಾಯಿಗಳಿಂದ 25 ರೂಪಾಯಿಗಳವರೆಗೆ ಪೆನ್‌ಷನ್ ಏರಿಸಿದ್ದಾರೆ. ಅದರಂತೆ ನಮ್ಮ ರಾಜ್ಯ ಸರ್ಕಾರದವರು ಪೆನ್‌ಷನ್‌ದಾರರಿಗೆ ಪೆನ್‌ಷನ್ ಹೆಚ್ಚಿಸುವ ವಿಷಯದಲ್ಲಿ ಯೋಚನೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಭಾಷಣದಲ್ಲಿ ವಾಸ್ತವಿಕವಾಗಿ ಭೂಸುಧಾರಣೆಯ ಬಗ್ಗೆ ಒಂದು ಶಬ್ದವನ್ನೂ ಹೇಳಿಲ್ಲ. ಲ್ಯಾಂಡ್ ರಿಫಾರಮ್ಸ್ ಬಗ್ಗೆ, ಮತ್ತು ಭೂಮಿಯನ್ನು ಹಂಚುವ ಬಗ್ಗೆ ಮತ್ತು ಬ್ಯಾಂಕಿನಿಂದ ಹಣವನ್ನು ಪಡೆಯುವ ಬಗ್ಗೆ, ಯಾವ ರೈತರು ಇದ್ದಾರೆ ಅವರಿಗೆ ಭೂಮಿಯನ್ನು ಯಾವ ದೃಷ್ಟಿಯಿಂದ ನೀಡಬೇಕು ಎನ್ನುವುದನ್ನೆಲ್ಲಾ ವಿಚಾರ ಮಾಡಬೇಕಾಗಿತ್ತು. ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರು ಭೂಸುಧಾರಣೆಯನ್ನು ತೀವ್ರಗತಿಯಲ್ಲಿ ಜಾರಿಗೆ ತರಬೇಕು, ಅಮಲಬಜಾವಣೆ ಮಾಡಬೇಕು ಎಂದು ಹೇಳಿದ್ದಾರೆ. ಹೀಗಿರುವಾಗ ಮಾನ್ಯ ಹಣಕಾಸಿನ ಮಂತ್ರಿಗಳ ಭಾಷಣದಲ್ಲಿ ಭೂಸುಧಾರಣೆಯ ಬಗ್ಗೆ ಒಂದು ಅಂಶ ಕೂಡ ಇದರಲ್ಲಿ ಇಲ್ಲದೇ ಇರುವುದು ವಿಷಾದಕರವಾದ ಸಂಗತಿ. ಅದಕ್ಕಾಗಿ ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿದಂತಹ ಆಯವ್ಯಯ ಪಟ್ಟಿ ನಿರಾಶಾದಾಯಕವಾಗಿದೆ ಆದ್ದರಿಂದ ನಾನು ಇದನ್ನು ತೀವ್ರವಾಗಿ ವಿರೋಧಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ಮಳವಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಇಂದಿನ ದಿನ 1970-71ನೇ ಸಾಲಿನ ಆಯವ್ಯಯ ಅಂದಾಜನ್ನು ಏನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳು ಈ ಸಭೆಯಮುಂದೆ ಮಂಡಿಸಿದ್ದಾರೆ ಅದರ ಮೇಲೆ ನಾನು ಸಾಮಾನ್ಯ ಚರ್ಚೆಯಲ್ಲಿ ಭಾಗವಹಿಸಿ ಮೊಟ್ಟ ಮೊದಲನೆಯದಾಗಿ ಈ ದೇಶದಲ್ಲಿ ಯಾವ ಸಮಾಜವಾದ ಚಳುವಳಿ ಇತ್ತೀಚೆಗೆ ಪ್ರಾರಂಭವಾಗಿದೆಯೋ ಅದರ ಕಾರ್ಯಕರ್ತರು ಯಾರು ಇದ್ದಾರೆ ಆ ಸಮಾಜವಾದ ಚಳುವಳಿಯ ಕಾರ್ಯಕರ್ತರಿಗೆ ನಾನು ನನ್ನ ಧನ್ಯವಾದಗಳನ್ನು ಮೊಟ್ಟ ಮೊದಲನೆಯದಾಗಿ ಅರ್ಪಿಸುತ್ತಾ ಈ ಒಂದು ತತ್ವ ಎಷ್ಟರಮಟ್ಟಿಗೆ ಈ ಆಯವ್ಯಯ ಅಂದಾಜಿನಲ್ಲಿ ಇದೆ ಅದನ್ನು ನಾನು ಹೇಳುತ್ತೇನೆ. ಈ ಹಣಕಾಸಿನ ಮಂತ್ರಿಗಳ ಭಾಷಣವನ್ನು ನಾನು ಒಂದು ಕಡೆಯಿಂದ ನೋಡಿದೆ. ಅದರಲ್ಲಿ ಉದ್ದುದ್ದವಾದ ದೊಡ್ಡದಾದ ತತ್ವಗಳನ್ನು ಮಾತ್ರ ಹೇಳಿದ್ದಾರೆಯೇ ಹೊರತು ಅದಕ್ಕೆ ಡೆಫಿನೆಟ್ ಆದ ಪ್ರೋಗ್ರಾಮ್ ಇದರಲ್ಲಿ ಯಾವುದೂ ಕಾಣಲಿಲ್ಲ. ಎಸ್.ವಿ.ಡಿ ನಾಯಕರಾದ ಶ್ರೀಮಾನ್ ಶಿವಪ್ಪನವರು ಶ್ರೀ ನಾಗಪ್ಪನವರ ಒಂದು ಚರ್ಚೆಯ ಮೇಲೆ ಮಾತನಾಡುತ್ತಾ ಅವರು ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಹೇಳುತ್ತಾ ಇದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿರತಕ್ಕ ಒಂದು ಮೆಮೋರಾಂಡಾ ಒಂದು ಜ್ಞಾಪಕ ಪತ್ರ ಇದ್ದ ಹಾಗೆ ಇದೆಯೇ ಹೊರತು ಬಜೆಟ್ಟನ್ನು ನಿರೂಪಿಸತಕ್ಕ ಒಂದು ಜ್ಞಾಪಕ ಪತ್ರ ಆಗಿಲ್ಲ ಎಂದು ಅವರೂ ಕೂಡ ಹೇಳಿದ್ದಾರೆ. ಅದು ಬಹಳ ವಿಷಾದದಿಂದ ಅವರು ಹೇಳಿದ್ದಾರೆ. ಆದರೆ ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಯಾವ ಸಮಾಜವಾದವನ್ನು ನಮ್ಮ ಸ್ನೇಹಿತರು ಒಪ್ಪಿಕೊಂಡಿದ್ದಾರೆಯೋ ಅದೇ ಸಮಾಜವಾದವನ್ನು ನಾವೂ ಕೂಡ ಒಪ್ಪಿಕೊಂಡಿದ್ದೇವೆ ಎಂದು ಶ್ರೀಮಾನ್ ಶಿವಪ್ಪನವರು ಹೇಳಿದರು. ಸಮಾಜವಾದದ ಪ್ರಕಾರ 10 ಪಾಯಿಂಟುಗಳ ಪ್ರೋಗ್ರಾಮ್ ಅನ್ನು ಸಾಮಾಜಿಕ ಮತ್ತು ಅರ್ಥಿಕ ಕ್ಷೇತ್ರಗಳಲ್ಲಿ ರೂಪಿಸಬೇಕೆಂದು ಬೊಂಬಾಯಿನಲ್ಲಿ ನಡೆದ ಅಧಿವೇಶನದಲ್ಲಿ ಏನು ನಿರೂಪಣೆ ಮಾಡಿದ್ದರೋ ಅದನ್ನು ನಿನ್ನೆ ಲೋಕಸಭೆಯಲ್ಲಿ ಪ್ರಧಾನ ಮಂತ್ರಿಗಳು ಬಜೆಟ್ಟನ್ನು ಮಂಡಿಸುವಾಗ ಹೇಳಿದ್ದಾರೆ. ಸಮಾಜವಾದವನ್ನು ಕೇಂದ್ರ ಸರ್ಕಾರದ ಬಜೆಟ್ಟಿನಲ್ಲಿ ತೆಗೆದುಕೊಂಡು ಬಂದಿದ್ದಾರೆ. ಅವರ ಬಜೆಟ್ಟಿನಲ್ಲಿ ಅದರ ರಿಫ್ಲೆಕ್ಷನ್ ಆಗಿದೆ ಎನ್ನತಕ್ಕದ್ದನ್ನು ನಾವೆಲ್ಲರೂ ನೋಡಬಹುದು. ಸಮಾಜವಾದ ಎಂದರೆ It is a science of new society and a vision of new civilization. ಎಂದು ಹೇಳಿದ್ದಾರೆ. ಬಹುಶಃ ಸಮಾಜವಾದ ಪ್ರಪಂಚದಲ್ಲಿ ಎಲ್ಲಾ ರಾಜ್ಯಗಳ ಸಾಮಾಜಿಕ, ಆರ್ಥಿಕ ರಾಜಕೀಯ ಆಶೋತ್ತರಗಳು ಏನಿವೆ ಅದಕ್ಕೆ ಅನ್ವಯವಾಗಿರತಕ್ಕಂಥ ಒಂದು ಸಮಾಜವಾದವನ್ನು ನಾವು ನೋಡುತ್ತಿದ್ದೇವೆ. ರಷ್ಯಾ ದೇಶದ ಸಮಾಜವಾದ ಏನಿದೆಯೋ ಅದನ್ನು ಕೂಡ ಅವರು ಮೊದಲು ಹೇಳಿದರು. Midway between socialism and communism ಏನು ಇದೆ ಇದು ಸಮಾಜವಾದವಲ್ಲ ಎಂದು ಹೇಳಿದ್ದಾರೆ. "It is not that communism that expounded by Karl Marx. We do not want to copy the prototype of communism that is prevailing in Soviet Russia. Let us have a new brand of socialisum that suits our social, economic and

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

political conditions in our country.'' ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಅಹಮದಾಬಾದಿನಲ್ಲಿ ನಡೆದ ಎ.ಐ.ಸಿ.ಸಿ ಅಧಿವೇಶನದಲ್ಲಿ ಸಮತಾವಾದ ಸಮಾಜ ತತ್ವವನ್ನು ಏನು ರೂಪಿಸಿದರು ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ಯಾವ ಒಂದು ಅಘಾದ ವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ ಎನ್ನುವುದು ಈ ಆಯವ್ಯಯ ಅಂದಾಜಿನಲ್ಲಿ ಏನೂ ಕಾಣುವುದಿಲ್ಲ. ಶ್ರೀಮಾನ್ ಶಿವಪ್ಪನವರೂ ಕೂಡ ಮಾತೆತ್ತಿದರೆ ಇಂಡಿಕೇಟ್ ಕಾಂಗ್ರೆಸ್, ಸಿಂಡಿಕೇಟ್ ಕಾಂಗ್ರೆಸ್ ಎಂದು ಹೇಳುತ್ತಾರೆ. ಯಾವ ಒಂದು ಪಕ್ಷವೇ ಆಗಲೀ ಅವರಿಗೆ ದೇಶದಲ್ಲಿರ ತಕ್ಕ ಪರಿಸ್ಥಿತಿ ಏನಿದೆ ಎನ್ನುವುದು ಮತ್ತು ಇಂಟರ್‌ನಲ್ ಡೆಮಾಕ್ರಸಿ ಏನಿದೆ ಎನ್ನತಕ್ಕಂಥಾದ್ದು ಯಾವಾಗ ಅವರಿಗೆ ಸರಿಯಾಗಿ ಅರ್ಥವಾಗುವುದಿಲ್ಲ ಆಗ ಸ್ವಾಭಾವಿಕವಾಗಿ ಒಂದು ಒಡಕು ಉಂಟಾಗುತ್ತದೆ ದೇಶದಲ್ಲಿ ಸರ್ಕಾರದವರು ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಅವುಗಳ ಬಗ್ಗೆ ಶ್ರೀಮಾನ್ ಶಿವಪ್ಪನವರು ಮಾತನಾಡಿ ಹರಿಜನರ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತ ಸಮತಾವಾದ ಸಮಾಜ ಸ್ಥಾಪನೆ ಮಾಡುವ ಉದ್ದೇಶದಿಂದ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೆ ನಮ್ಮ ಊರಿನಲ್ಲಿ ಒಂದು ಬಾವಿಯಲ್ಲಿ ಹರಿಜನರು ನೀರು ತೆಗೆದುಕೊಳ್ಳಲು ಬಿಟ್ಟಿದ್ದೇವೆ ಎಂದು ಹೇಳಿದರು. ನಮ್ಮ ಒಂದು ಅನುಭವದಲ್ಲಿ ಈಗ 23 ವರ್ಷಗಳಿಂದ ಪ್ರಜಾ ಸೋಷಲಿಸ್ಟ್ ಪಕ್ಷ ಇಂಡಿಯಾದೇಶದಲ್ಲಿ ಸ್ವಲ್ಪ ಭಾಗದಲ್ಲಿ ಇದೆ. ನಮ್ಮ ರಾಜ್ಯದಲ್ಲಿಯೂ ಇದೆ. ಈ ಪ್ರಜಾಸೋಷಲಿಸ್ಟ್ ಪಕ್ಷ ಏನಿದೆ ಅದು In my opinion you are political Tories and Social Whigs who do not stand for revolution. How can you have a programme pertaining to eradication of untouchability ? ನಾನಾದರೂ ಕೇಳಿದೆ, ಇವರ ಪಕ್ಷದ ಕಾರ್ಯಕ್ರಮ ಏನು, ಎಂದು

ಶ್ರೀ ಬಿ. ಪಿ. ಗಂಗಾಧರ್.—On a point order. ಈಗಿರತಕ್ಕ ಸಂಧರ್ಭದಲ್ಲಿ ನೀವು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಅವರಿಗೆ ಬಜೆಟ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರೇ ವಿನಹ ಪ್ರಜಾ ಸೋಶಿಯಲಿಸ್ಟ್ ಪಾರ್ಟಿಯವರ ಐಡಿಯಾಲಜಿ ಏನು, ಅವರು ಏನು ಮಾಡುವುದಕ್ಕೆ ಹೊರಟಿದ್ದಾರೆ. ಅಥವಾ ಇವರ ಎಕನಾಮಿಕ್ ಅಂಡ್ ಸೋಶಿಯಲ್ ಕಾರ್ಯಕ್ರಮಗಳೇನು ? ಅದಕ್ಕೋಸ್ಕರ ಏನೇನು ಮಾಡಿದ್ದಾರೆ, ಮಾಡುತ್ತಾರೆ, ಎನ್ನತಕ್ಕ ವಿಚಾರ ಪೂರ್ಣವಾಗಿ ಬಜೆಟಿಗೆ ಸಂಬಂಧಪಟ್ಟ ವಿಚಾರವಲ್ಲ. ಈ ಮನೆಯಲ್ಲಿ ಹಣಕಾಸಿನ ಸಚಿವರು ಬಜೆಟನ್ನು ಇಟ್ಟಿದ್ದಾರೆ. ಇವರು ಅದರ ಮೇಲೆ ಕಾಮೆಂಟ್ಸ್ ಮಾಡಬಹುದು, ಅಥವಾ ವಿರೋಧ ಮಾಡುವವರಾಗಿದ್ದಾರೆ, ಅಂಟಿ ಸೋಶಿಯಾಲಿಸ್ಟಿಕ್ ಆಗಿದ್ದರೆ, ಇವರಿಗೆ ಹೇಗೆ ಇಷ್ಟ ಇದೆಯೋ, ಹಾಗೆ ಹೇಳಬಹುದು. ಆದರೆ ಇತರ ಪಾರ್ಟಿಯ ಬಗ್ಗೆ ಅದರ ಕಾರ್ಯಕ್ರಮಗಳ ಬಗ್ಗೆ ಮಾತನಾಡ ಬಾರದು. ನನಗೆ ಗೊತ್ತಿದೆ ಕಾಂಗ್ರೆಸ್ಸಿನಲ್ಲಿದ್ದ ಜನರು, ಅಲ್ಲಿ ಸೀಟ್ ಸಿಗಲಿಲ್ಲವೆಂದು ಬೇರೆಯೇ ಒಂದು ಪಾರ್ಟಿ ಮಾಡಿಕೊಂಡಿದ್ದಾರೆ. ನಾವು ಪವರಿಗೆ ಬಂದಾಗ, ಏನೇನು ಕಾರ್ಯಕ್ರಮ ಗಳನ್ನು ಹಾಕಿಕೊಳ್ಳುತ್ತೇವೆ ಎಂದು ಆಗ ಹೇಳುತ್ತೇವೆ. ಆದ್ದರಿಂದ ನಮ್ಮ ಬಗ್ಗೆ ಅವರು ಹೇಳು ವುದು ಅವಶ್ಯವಿಲ್ಲ. ಇವರಿಗೆ ಏನಾದರು ಹೇಳಲು ಇದ್ದರೆ, ಅವರ ಮೇಲೆ ಹೇಳಲಿ ಮತ್ತು ತಪ್ಪು ಇದ್ದರೆ ಎತ್ತಿ ತೋರಿಸಲಿ.

ಛೇರ್ಮನ್ ಅವರು.—ಅದರಲ್ಲಿ ಏನು ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆದ್ದರಿಂದ ಅವರು ಹೇಳುವುದಕ್ಕೆ ಉತ್ತರ ಕೊಟ್ಟಿದ್ದೇನೆ. ಇವೊತ್ತಿನ ದಿವಸ ದೇಶದಲ್ಲಿ ಇಂಡಿಕೇಟ್ ಕಾಂಗ್ರೆಸ್, ಸಿಂಡಿಕೇಟ್ ಕಾಂಗ್ರೆಸ್ ಎಂದು ಉಂಟಾಗಿದೆ. ಇವತ್ತು ದೇಶದಲ್ಲಿ ಬಹು ಜನರ ಆಡಳಿತದ ಹೆಸರಿನಲ್ಲಿ ಅಧಿಕಾರಕ್ಕೆ ಬಂದು ತಮ್ಮ ಸ್ವಜನ ಪಕ್ಷಪಾತದಿಂದ ತಮ್ಮ ವೈಯುಕ್ತಿಕ ಅಭಿವೃದ್ಧಿಗೋಸ್ಕರ, ಪಟ್ಟಭದ್ರ ಹಿತಗಳನ್ನು ಸಂರಕ್ಷಣೆ ಮಾಡುವುದಕೋಸ್ಕರ ಪ್ರಯತ್ನಮಾಡುತ್ತಿದ್ದಾರೆ. ಈ ದೃಷ್ಟಿಯಲ್ಲಿ ಇದು ಒಂದು ವ್ಯಾಪಾರ ಸಂಸ್ಥೆಯ ಹಾಗೆ ಆಗಿದೆ. ಯಾವ ಪಕ್ಷವೇ ಆಗಲಿ, ಮತಾಂತರ ಹೊಂದಿದಾಗ ಸಾಮಾನ್ಯವಾಗಿ ಅದನ್ನು ಇಂಡಿಕೇಟ್ ಎಂದು ಹೇಳುತ್ತೇವೆ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವೊತ್ತಿನ ದಿವಸ ಇಡೀ ದೇಶದಲ್ಲೇ ಯಾವ ಜನಾಂಗ ಈ ಒಂದು ಸಮಾಜವಾದದ ಬಗ್ಗೆ ಎಚ್ಚತ್ತಿದೆ. ಆದ್ದರಿಂದ ಈ ಒಂದು ಸಮಾಜವಾದವನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಸಮಾಜವಾದವನ್ನು ಬೇರೆಯವರು ಹೇಳುತ್ತಾರೆಂದು ನಾವು ಹೇಳತಕ್ಕದಲ್ಲ. ಇವತ್ತು ಬಜೆಟ್ ಭಾಷಣದಲ್ಲಿ ಕೋಟಿ

ಗಟ್ಟಲೆ ಹಣವನ್ನು ನಿಮ್ನ ವರ್ಗದವರಿಗೆ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಅದಕ್ಕೆ ಕೇಂದ್ರದವರ ಸಹಾಯವೂ ಇತ್ತು ಎಂದು ಹೇಳಿದ್ದಾರೆ. ಒಬ್ಬ ಆಂಗ್ಲ ಲೇಖಕನು 'ಕ್ರೈಸಿಸ್ ಆಫ್ ಇಂಡಿಯಾ, ಎಂಬ ಪುಸ್ತಕದಲ್ಲಿ ನಮ್ಮ ಇಂಡಿಯಾ ದೇಶದಲ್ಲಿ ಖರ್ಚುಮಾಡಿದಂತಹ ಕೋಟಿ ಗಟ್ಟಲೆ ಹಣದ ಬಗ್ಗೆ, ಇಲ್ಲಿರುವ ಜನರ ಬಗ್ಗೆ, ಜಾತಿಯ ಬಗ್ಗೆ ಎಲ್ಲಾ ಹೇಳಿದ್ದೇನೆ. ಈ ಯೋಜನೆಯಲ್ಲಿ ಎಷ್ಟೋ ಜನರು ಶ್ರೀಮಂತರು ಶ್ರೀಮಂತರಾಗುತ್ತಾರೇ ಹೊರತು, ಸಾಮಾನ್ಯ ಜನರು ಮುಂದುವರಿಯುತ್ತಾ ಇಲ್ಲವೆಂಬುದನ್ನು ಹೇಳಿದ್ದಾರೆ. ನಾವು ಇವೊತ್ತಿನ ದಿವಸ ದೇಶದಲ್ಲಿ ಏನೇನು ನಡೆದುಕೊಂಡು ಬಂದಿದೆ ಎಂಬುದನ್ನು ನೋಡಿದ್ದೇವೆ. ಇವತ್ತು ಯಾವ ಒಂದು ಕ್ಷೇತ್ರವನ್ನೇ ನೋಡಿದರೂ, ಲೈಸೆನ್ಸಿಂಗ್ ಸಿಸ್ಟಂ, ಅಥವಾ ಲೋಕೋಪಯೋಗಿ ಇಲಾಖೆಯಲ್ಲಿ ಕಂಟ್ರಾಕ್ಟ್ಸ ಮುಂತಾದುವುಗಳನ್ನು ಕೊಡುವುದೇ ಆಗಲಿ, ಎಲ್ಲದರಲ್ಲೂ ಸ್ವಜನ ಪಕ್ಷಪಾತ ಜಾತೀಯತೆ ಎಲ್ಲಾ ತುಂಬಿ ತುಳುಕಾಡುತ್ತಿದೆ. ನಾನು ಇದರ ಬಗ್ಗೆ ಆಯೊ ಡಿಮ್ಯಾಂಡ್ ಬಂದಾಗ ಹೆಚ್ಚಾಗಿ ಮಾತನಾಡುವೆನು. ಮತ್ತು ನಾವು ವೀಕರ್ ಸೆಕ್ಷನ್ ಎಂದು ಕರೆಯುತ್ತಿದ್ದೇವೆ, ಅವರ ಬಗ್ಗೆ ಅವರು ಅಭಿವೃಧಿಯ ಬಗ್ಗೆ, ವಿದ್ಯಾಭ್ಯಾಸದ ಬಗ್ಗೆ, ಸಾರ್ವತ್ರಿಕವಾಗಿ ಸುಧಾರಿಸುವುದರಲ್ಲಿ, ಗ್ರಾಮಮಟ್ಟದಲ್ಲಿ ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ಬಲಪಡಿಸಿ ಬಹುಮುಖಗೊಳಿಸುವುದರಲ್ಲಿ, ಗಣನೀಯ ಸಾಧತ್ಯೆ ಸಾಧ್ಯವಾಗಿದೆ ಎಂದು ಹೇಳಿದ್ದಾರೆ. ಅದೇ ರೀತಿ ಬೇರೆ ಕಾರ್ಯಕ್ರಮಗಳನ್ನೂ ಹೇಳಿಕೊಂಡಿದ್ದಾರೆ. ಸಹಕಾರೀ ಕ್ಷೇತ್ರದಲ್ಲಿ 240 ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆ. ಎಲ್ಲೆಲ್ಲಿ ಅಸ್ಪೃಶ್ಯತೆ ನಿವಾರಣೆಗೋಸ್ಕರ ಖರ್ಚು ಮಾಡಿದ್ದಾರೆ? ಮತ್ತು ಒಬ್ಬರನ್ನಾದರೂ ಇದರ ಕೆಲಸಕ್ಕೆ ತೆಗೆದುಕೊಂಡಿದ್ದಾರೆಯೇ ಎಂಬುದನ್ನು ಹೇಳುತ್ತಿಲ್ಲ. ಅದೇ ರೀತಿ 3 ಕೋಟಿ ರೂಪಾಯಿಗಳನ್ನು ಸಾಲ ತೆಗೆದುಕೊಂಡು ಹೌಸಿಂಗ್ ಪ್ರೊಗ್ರಾಂ ಹಾಕಿ ಮನೆಗಳನ್ನು ಕಟ್ಟಿಸುವ ಯೋಜನೆ ಮಾಡಿದ್ದಾರೆ. ಅದು ಅರ್ಧಂಭರ್ಧವಾಗಿ ಅಲ್ಲೇ ಉಳಿದಿದೆ. ಇವತ್ತು ಇದಕ್ಕೆ ಎಲ್ ಐ ಸಿ ಯವರು ಸಾಲವನ್ನು ಕೂಡ ಕೊಡುತ್ತಿಲ್ಲ. ಏಕೆಂದರೆ ಇವರು ಎಲ್ಲಿ ತೆಗೆದುಕೊಂಡು ವಾಪಸ್ಸು ಕೊಡುವುದಿಲ್ಲವೋ, ಎಂದು. ಇದರ ಬಗ್ಗೆ ಕೂಲಂಕಷವಾಗಿ ಸೋಶಿಯಲ' ವೆಲ್‌ಫೇರ್ ಡಿಮ್ಯಾಂಡ್ ಬಂದಾಗ ಹೇಳುತ್ತೇನೆ. ಮೂರನೆ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಎಷ್ಟು ಹಣ ಲ್ಯಾಪ್ಸ್ ಆಗಿದೆ? ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಮ್‌ಗಳಲ್ಲಿ ಎಷ್ಟು ಲ್ಯಾಪ್ಸ್ ಆಗಿದೆ? ಇದರಿಂದ ಎಷ್ಟು ಮಟ್ಟಿಗೆ ಅಸ್ಪೃಶ್ಯತೆಯನ್ನು ಹೋಗಲಾಡಿಸಿದ್ದಾರೆ, ಇದಕ್ಕೆ ಪ್ರಯತ್ನ ಮಾಡಿದ್ದಾರೆ ಎಂದು ತಿಳಿಯುತ್ತದೆ, ಮತ್ತು ಲಾ ಅಂಡ್ ಆರ್ಡರ್ ಬಗ್ಗೆ ಎಲ್ಲೂ ಈ ಜನರಿಗೆ ನ್ಯಾಯವೆಂಬುದು ದೊರಕುತ್ತಾ ಇಲ್ಲ. ಇವತ್ತಿನದಿವಸ ಹಳ್ಳಿಗಳಲ್ಲಿ ಯಾವರೀತಿಯ ಬದಲಾವಣೆಗಳನ್ನು ನೋಡುತ್ತಾ ಇಲ್ಲ. At the village level no real change has taken place.

ಆದ್ದರಿಂದಲೇ ಅವರು ಈ ಒಂದು ಕಾರ್ಯಕ್ರಮವನ್ನು ಪ್ರಾಮುಖ್ಯವಾಗಿ ಹೇಳಿದ್ದಾರೆ. ಈಗ ಸಿದ್ಧಗಂಗಾಮಠದಲ್ಲಿ 7 ಲಕ್ಷ ರೂಪಾಯಿಗಳಷ್ಟು ಗ್ರ್ಯಾಂಟ್ ತೆಗೆದುಕೊಳ್ಳುತ್ತಾರೆ. ಅಲ್ಲಿ ಹರಿಜನರು ಒಂದು ಕಡೆ, ಉಳಿದ ಜಾತಿಗಳು ಒಂದು ಕಡೆ ಇರುತ್ತಾರೆ. ಆದರೆ ಚನ್ನಪಟ್ಟಣದಲ್ಲಿರುವ ಶ್ರೀ ಬಿ. ಜೆ. ಲಿಂಗೇಗೌಡರ ಹಾಸ್ಟಲ್‌ನಲ್ಲಿ ಆ ರೀತಿ ಇಲ್ಲ. ಬೀರೇಶ್ವರ ಹಾಸ್ಟಲ್‌ನಲ್ಲಿಯೂ ಆ ರೀತಿ ಇಲ್ಲ. ಆದ್ದರಿಂದ ಆ ಕಡೆಗಳಲ್ಲಿ ಯಾವ ರೀತಿ ಇದೆಯೆಂಬುದನ್ನು ನೋಡಬೇಕು. ನಾವು ದುರ್ಬಲವಾದ ಜನಾಂಗಕ್ಕೆ ಸೇರಿದವರು. ಸುಮ್ಮನೆ ನಿಮಗೆ ಅಂತಹವರಿಗೆ ಸಹಾಯಮಾಡಿ ಎಂಬುದಾಗಿ ಹೇಳುವುದಿಲ್ಲ. ಆ ಜನಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿಯಬೇಕಾದರೆ ಅವರಿಗೆ ಎಲ್ಲಾ ಸೌಲಭ್ಯಗಳನ್ನು ಕೊಡಬೇಕು. We speak of discrimination in South Africa, but every village in India is South Africa. ಈ ದೃಶ್ಯ ಬದಲಾವಣೆಯಾಗಬೇಕಾಗಿದೆ. ಯಾವ ಒಂದು ಸೋಷಿಯಲ್ ರಿಫಾರ್ಮೇಷನ್ ಆಗದ ಏನೂ ಮಾಡುವುದಕ್ಕಾಗುವುದಿಲ್ಲ. ಇದರಿಂದ ಇಕನಾಮಿಕ್ ರಿವಲ್ಯೂಷನ್ ಎಲ್ಲೂ ಆಗುವುದಿಲ್ಲ. ಎಲ್ಲಿಯವರೆಗೆ ಸಮಾಜ ಮುಖಂಡರು ಮತ್ತು ಮಧ್ಯಮವರ್ಗದ ಜನರು ಈ ಒಂದು ರಾಷ್ಟ್ರದ ಭಾರತಕ್ಕ ಸರ್ಕಾರಕ್ಕೆ ಮತ್ತು ಅದು ಮಾಡಿದಂಥ ಕಾನೂನುಗಳಿಗೆ ಬೆಂಬಲವನ್ನು ಎಲ್ಲಿಯವರೆಗೆ ಕೊಡುತ್ತಾರೋ, ಅಲ್ಲಿಯವರೆಗೆ ಮಾತ್ರ ಪ್ರಜಾಪ್ರಭುತ್ವ ಚೆನ್ನಾಗಿ ನಡೆಯುತ್ತದೆ. ಆದರೆ ಈ ದೇಶದಲ್ಲಿ ಮಧ್ಯಮವರ್ಗದ ಮುಖಂಡರು ಮತ್ತು ಮಧ್ಯಮವರ್ಗದ ಜನರು ರೀ ಆಕ್ಷನರಿಯಾಗಿರುವುದರಿಂದ ಯಾವ ತರಹ ಬದಲಾವಣೆಯನ್ನು ಈ ದೇಶದಲ್ಲಿ ನೋಡುವುದಕ್ಕೆ ಆಗುತ್ತಾ ಇಲ್ಲವೆಂದು ನಾನು ಈ ಸಮಯದಲ್ಲಿ ಹೇಳುತ್ತೇನೆ ನಮ್ಮ ಮುಖಂಡರಾದ ಮಾನ್ಯ ಶ್ರೀ ಸಿದ್ಧವೀರಪ್ಪನವರು ಈಗ ಜಾತೀಯತೆ ಬಹಳ ಇದೆ, ಹಳ್ಳಿಗಳಲ್ಲಿ ಇದರಿಂದ ಬಹಳವಾಗಿ ಒಳಜಗಳಗಳು ಜಾಸ್ತಿಯಾಗಿದೆ ಎಂದು ಹೇಳಿದರು. ಈ ಸರ್ಕಾರದ ಮುಖ್ಯಮಂತ್ರಿಗಳಾಗಿರುವ ಮಾನ್ಯ ಶ್ರೀ ವೀರೇಂದ್ರ ಪಾಟೀಲರು ಒಂದು ಸಾರಿ ನಗುತ್ತಾ 14ಜನರು ಒಂದೇ ಜಾತಿಯವರು ಮಂತ್ರಿಮಂಡಲದಲ್ಲಿದ್ದಾರೆಂದು ಹೇಳಿದರು. ಒಂದು ಸಾರಿ ಹಿಂದೆ ಪ್ರಜಾಪ್ರಭುತ್ವದ ಬಗ್ಗೆ ಪ್ಲೇಟೊ ಎಂಬ ಒಬ್ಬ ತತ್ವ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಜ್ಞಾನಿ Middle Class Peoples 'Reactionaries ವಿಷಯವಾಗಿ ಬಹಳ ಚೆನ್ನಾಗಿ ವಿವರಣೆ ಮಾಡಿದ್ದಾನೆ. ಅದನ್ನು ಯೂನಿವರ್ಸಿಟಿಯವರು ಕನ್ನಡದಲ್ಲಿ ಬೇಕಾದಷ್ಟು ತರ್ಜುಮೆ ಮಾಡಿದ್ದಾರೆ. ಅದನ್ನು ಪ್ರತಿಯೊಬ್ಬ ಸದಸ್ಯರೂ ಓದಿ ಅದನ್ನು ಇಲ್ಲಿ ಅನುಷ್ಠಾನಕ್ಕೆ ತಾರದೇ ಇದ್ದರೆ ಈ ಪ್ರಜಾ ಪ್ರಭುತ್ವ ಪ್ರಯೋಗ ಎಷ್ಟರಮಟ್ಟಿಗೆ ನಡೆಯುತ್ತಿದೆ ಎನ್ನುವುದಕ್ಕೆ ಮಾನ್ಯ ಶ್ರೀ ಸಿದ್ಧವೀರಪ್ಪನವರು ಕೆಲವು ವಿಚಾರಗಳನ್ನು ಹೇಳಿದರು. ಪ್ರತಿಯೊಂದು ಡಿಮ್ಯಾಂಡ್ ಬಂದಾಗ್ಗೆ ಅದರ ಬಗ್ಗೆ ನಾನು ಮಾತನಾಡುತ್ತೇನೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಮತ್ತು ಇನ್ನೂ ಕೆಲವು ಇಲಾಖೆಗಳಲ್ಲಿ ಒಂದೇ ಜಾತಿಯ ಜನರನ್ನು ಹೆಚ್ಚಿಸಿಕೊಂಡು, ಬೆಳೆಸಿಕೊಂಡು ಹೋಗಲು ಹೊರಟ್ಟಿದ್ದಾರೆ. ಆದರೆ ಜನರು ಈಗ ಕಣ್ಣುಮುಚ್ಚಿಕೊಂಡಿದ್ದಾರೆಂದು ತಿಳಿಯಬೇಡಿ. ಇವತ್ತಿನದಿವಸ ಉಂಟಾಗಿದೆ ಎಲ್ಲರೂ ಜಾಗ್ರತರಾಗಿದ್ದಾರೆ. ಒಂದಲ್ಲ, ಒಂದು ದಿವಸ ಈ ದೇಶದಲ್ಲಿ ಕ್ರಾಂತಿ ಕೂಡ ಆಗಬಹುದೆಂದು ಹೇಳುತ್ತೇನೆ. ಮಾನ್ಯ ಶ್ರೀ ವೀರೇಂದ್ರಪಾಟಿಲ್‌ರವರು ಮತ್ತು ಇತರ ಲಿಂಗಾಯಿತ ಸದಸ್ಯರು ನಾನು ಈ ರೀತಿ ಹೇಳಿದೆನೆಂದು ತಪ್ಪಾಗಿ ತಿಳಿದುಕೊಳ್ಳಬಾರದು. ನಾನು ಯಾರನ್ನೂ ದ್ವೇಷಿಸುವುದಿಲ್ಲ. ನಾನು ಯಾವ ಜಾತಿಯಲ್ಲೂ ಭೇದಭಾವ ಮಾಡುವುದಿಲ್ಲ. ನಾನು ಒಂದು ಪಬ್ಲಿಕ್ ಮೀಟಿಂಗ್‌ನಲ್ಲಿ ಮಾತನಾಡುತ್ತಾ ಇದ್ದಾಗ್ಗೆ ಲಿಂಗಾಯಿತರ ಬಗ್ಗೆ ಒಂದು ದೊಡ್ಡ ಕ್ರಾಂತಿಯಾಗಬಹುದು ಎಂಬುದಾಗಿ ಹೇಳಿದ್ದು ನನಗೆ ಜ್ಞಾಪಕವಿದೆ. ನನ್ನಲ್ಲಿ ಜಾತೀಯತೆ ಬಗ್ಗೆ 30 ಉದಾಹರಣೆಗಳಿವೆ. ಇದಕ್ಕಾಗಿ ಒಂದು ಕಮಿಟಿಯನ್ನು ರಚನೆ ಮಾಡಲಿ, ಯಾವ ರೀತಿಯಲ್ಲಿ ಜಾತೀಯತ ಮಾಡಿದ್ದಾರೆಂಬುದನ್ನು ರುಜುವಾತು ಮಾಡುತ್ತೇನೆ. ಆದರೆ ಈ ಸರ್ಕಾರದಲ್ಲಿ ಒಳ್ಳೆಯ ಮಾರ್ಗದಲ್ಲಿ ನ್ಯಾಯವಾದ ರೀತಿಯಲ್ಲಿ ಕೆಲಸ ಮಾಡತಕ್ಕವರು ಇದ್ದಾರೆ. ಆದರೂ ಬಹು ಮಟ್ಟಿಗೆ ಜಾತೀಯತ ಬಹಳ ಮಟ್ಟಿಗೆ ಹೆಚ್ಚಾಗಿದೆ ಎಂದು ಹೇಳಿದರೆ ಅದೇನೂ ತಪ್ಪಾಗಲಾರರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri THIRUMULADEVARAYA (Gangavathi).—Mr. Speaker, Sir, all my friends have already spoken on the Budget and I do not want to repeat the observations so far made. I will confine myself to the affairs of my district only.

Sir, you know that Bellary and Raichur Districts were predominantly famine-stricken ones. To prevent the recurrence of famine, the Thungabhadra Dam was constructed as a joint efforts of the Nizam of Hyderabad in those days and the Madras Government. Now it is not only a preventive dam, but has become a productive dam also. If it is properly developed, I think it is going to be the granary of our State. In some cases, water is fully utilised for rice crop, but it does not mean that the area is fully developed. Internal roads also play a prominent part in the transport of ferilizers to the field and to convey the produce from there to the outside markets. In this respect, I would like to point out that certain roads have been formed by the P. W. authorities. But the earthwork has not been done. Material has been collected and it is evaporating daily. Some culverts are constructed and there are no connections provided for them. If these roads are not serviceable, I think the money that has been invested on them, will be a national waste.

Sir, Tungabhadra Dam has become productive dam and so the problem has arisen. Canals have been going at a higher level and that has brought up the problem of seepage to lands at lower levels. The lands within the ayacut of Tungabhadra have been divided into four kinds for purposes of cultivation—heavy irrigation, paddy, garden and light. If any raiyat goes against the cropping pattern, he is heavily

penalised. So certain lands which are earmarked for heavy irrigation are affected by seepage and he has to grow paddy. If he grows paddy, he will be heavily penalised. If he does not grow paddy, he will be at a loss. Such lands should be localised.

Water table of the Tungabhadra Ayacut has reached a higher level. Water table should be 1½ ft. below the road level. Otherwise, we cannot grow anything except paddy Drainage is therefore very essential. So a drainge scheme is quite essential there. If a drainage scheme is taken up there, I think we can bring some more lands under cultivation.

5-00 P. M.

Besides that, lot of water flows in streams and it is going back to the river. So if certain pick-ups are built, I think not only will it ease the tail-enders' difficulties but it will also command some more areas of land.

Then, Sir, the State Highway which is running in the Tungabhadra ayacut area is sinking here and there due to heavy irrigation. In this connection I would like to point out that Dr. V. K. R. V. Rao, former Shipping Minister of the Centre, while travelling in Munirabad-Raichur area felt that he was travelling in a ship. I, therefore, request Government to see that this highway is improved.

In the Tungabhadra ayacut sugarcane is grown. There the crop is coming up well. The tonnage per acre is between 25 and 35 tons. Even recovery is also good. A sugar factory is essential there.

Besides that, Raichur District is one of the biggest cotton growing districts in our State. Even irrigated cotton is also coming up well. So a cotton factory is necessary there.

Besides that, because Bellary and Raichur Districts both come under Irigation area, some agricultural implements factory is necessary at Munirabad or some other suitable place and it will be very helpful to the agriculturists there.

Then it is also necessary to have a fertilizer factory there if it is possible to have one there. Both these districts alone will consume the entire production of the fertilizer factory if it is started there.

This year unfortunately one or two slight breaches have occurred in the Tungabhadra Main Canal and that is why the strengthening of the main canal is slowed down or it is going on at snail's pace. I would request that if breaches have not occurred, it does not mean that strengthening should be slowed down. On the contrary, it should be geared up.

It is a wrong notion that Raichur District is under the Tungabhadra ayacut. More than half the district is non-ayacut area. Whenever the question of Raichur comes and whenever we approach for anything for Raichur, they think we are in the Tungabhadra ayacut

(SRI THIRUMALADEVARAYA)

We want to point out that more than half the district is non-ayacut area and this non-ayacut soil is not very good and that is why I want that Government should give some preference to this area for wells, electricity and some other things so that it can be helpful for cultivators and small industries.

Then, Sir, if it is possible to have electric line drawn on the banks of Tungabhadra and Krishna rivers we can have lift irrigation and that will also be helpful to the ryots.

Government have spent a certain amount for famine roads, but if those roads are not brought to a safe level, I think whatever money is invested will be a waste. So I request Government to see that at least the famine roads are brought to a safe level.

Then, cent per cent land revenue is going to be given to local authorities. Formerly the panchayats used to get 25 per cent. Now they are going to get 30 per cent. Panchayats have got very little resources and I do not think that with this 30 per cent they will be able to do any service to the villages. Therefore I request Government to raise their share of the land revenue or give them some other source of income.

With these few words, I thank the Chair for giving me a chance to speak.

† ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು-ಕೋಟೆ) —ಮಾನ್ಯ ಸಭಾಧ್ಯಕ್ಷರೇ, ಈಗ ನಮ್ಮ ಆರ್ಥಿಕ ಚಿತ್ರವನ್ನು ದೇಶದಮುಂದೆ ಇಡತಕ್ಕ ಚಾಣಾಕ್ಷತೆ ಆರ್ಥಿಕ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ ಎನ್ನತಕ್ಕಂಥದ್ದು ಎಲ್ಲರಿಗೂ ಅರಿವಾಗಿದೆ. ತಾವು ತಮ್ಮ ಆರಂಭ ಭಾಷಣದಲ್ಲಿ ಹಿಂದೆ ಹೇಗಿತ್ತು ಎನ್ನುವುದನ್ನು ನಾವು ಸೂಚಿಸಿದ್ದೇವೆ. ಇನ್ನು ಮಾಡಬೇಕಾದದ್ದು ಏನು ಇದೆ ಎನ್ನುವುದರ ಬಗ್ಗೆ ಒಂದು ವಿವರಣೆಯನ್ನು ಕೊಟ್ಟಿದ್ದಾರೆ. ಸ್ವಾಮಿ, ದೇಶದಲ್ಲಿ ಸ್ವಾತಂತ್ರ್ಯ ಬಂದು 22 ವರ್ಷಗಳಾದುವು. 22 ವರ್ಷಗಳ ಕೆಳಗೆ ನಾನು ಸ್ವಾತಂತ್ರ್ಯ ಸಂಗ್ರಾಮವಾದಮೇಲೆ ಸಂಪಾದನೆ ಮಾಡುವುದಕ್ಕೆ ಶುರು ಮಾಡಿ ಮುನ್ನೂರು ರೂಪಾಯಿ ಸಂಪಾದನೆ ಮಾಡುತ್ತಿದ್ದ ಕಾಲದಲ್ಲಿ ನೆಮ್ಮದಿಯಿಂದ ಸಂಸಾರವನ್ನು ನಡೆಸಿಕೊಂಡು ನಮ್ಮ ಮನೆ ಮಕ್ಕಳ ಕ್ಷೇಮ ನೋಡಿಕೊಳ್ಳುವುದಕ್ಕೆ ಹೆಚ್ಚಿನ ಸಾಧ್ಯತೆ ಇತ್ತು. ಈಗ ಅದರ ನಾಲ್ಕರಷ್ಟು, ಐದರಷ್ಟು ವರಮಾನ ನನಗೆ ಇದ್ದರೂ ಕೂಡ ಇನ್ನೂ ತೆರಿಗೆ ಹೊರೆಯಿಂದ ಸಾಲದ ಭಾರದಿಂದ ಕಷ್ಟ ಪಡಬೇಕಾದಂಥ ಪರಿಸ್ಥಿತಿ ಈಗ ಕಾಣುತ್ತಾ ಇದೆ. ನಮ್ಮ ಮನೆಯಲ್ಲಿ ಹಾಲಿಗಾಗಿ 120 ರೂಪಾಯಿಗಳು ಖರ್ಚಾಗುತ್ತಾ ಇದೆ. ನಮ್ಮ ಮನೆಗಿಂತ ಹೆಚ್ಚಿಗೆ ಇರತಕ್ಕ ಸಂಸಾರದಲ್ಲಿ 120 ರೂಪಾಯಿ ಸಂಬಳ ಪಡೆದು ಯಾವರೀತಿ ಜೀವನ ಮಾಡುತ್ತಿದ್ದಾರೆ ಎನ್ನತಕ್ಕಂಥ ಪರಿಸ್ಥಿತಿಯನ್ನು ನೋಡಿದರೆ ದೇಶದ ಪರಿಸ್ಥಿತಿಯನ್ನು ನಾವು ಯಾವ ಸ್ಥಿತಿಗೆ ತೆಗೆದುಕೊಂಡು ಹೋಗಿದ್ದೇವೆ ಎನ್ನುವುದನ್ನು ಅಳತೆ ಇಟ್ಟುಕೊಂಡು ನೋಡಬಹುದು ಬರೀ ಖಾಲಿ ಅಂಕಿ ಅಂಶಗಳಿಂದ ಮತ್ತು ವಾದ ಸರಣಿಯಿಂದ ಪ್ರಗತಿಯನ್ನು ತೋರಿಸಿದರೆ ಪ್ರಯೋಜನವಾಗುವುದಿಲ್ಲ. ಹಿಂದೆ ಹೊಟ್ಟೆತುಂಬ ಊಟ ಮಾಡುತ್ತಾ ಇದ್ದರು, ಆರೋಗ್ಯವಂತರಾಗಿ, ದೃಢಕಾಯರಾಗಿದ್ದರು. ಈಗ ಏನಾಗಿದೆ ಎಂದರೆ ಪ್ರತಿಯೊಬ್ಬನೂ ಕೂಡ ತಾನು, ತನ್ನ ಜಾತಿ, ತನ್ನ ಗುಂಪು ಬೆಳೆಯಬೇಕು ಎನ್ನುವುದರಲ್ಲಿ ಕಾಲ ಕಳೆಯುತ್ತಾ ಇದ್ದಾನೆ. ತನ್ನ ಮುಂದಿನ ಅಧಿಕಾರದ ಬಗ್ಗೆ ಗಮನ ಇದೆಯೇ ಹೊರತು ಯಾರೂ ಕೂಡ ಹೆಚ್ಚಿಗೆ ನಮ್ಮ ರಾಷ್ಟ್ರ, ನಮ್ಮ ಕರ್ತವ್ಯದ ಬಗ್ಗೆ ಏನೂ ಗಮನ ಕೊಡದೆ ಇರುವುದು ಬಹಳ ಶೋಚನೀಯವಾದ ಪರಿಸ್ಥಿತಿಯಾಗಿದೆ.

ನನಗಾದರೂ ಅನಿಸುತ್ತಾ ಇದೆ, ಈಗ ಹೋಗುತ್ತಾ ಇರತಕ್ಕ ಸ್ಥಿತಿಯಲ್ಲಿ ಹೀಗೆಯೇ ನಡೆದರೆ ನಮ್ಮ ದೇಶ ಎಚ್ಚೆತ್ತುಕೊಳ್ಳುವ ಸ್ಥಿತಿಗೆ ಬರದೆ ಸರ್ವನಾಶವಾಗಿ ಪುನಃ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆಯೋ ಇಲ್ಲವೊ ಎಂಬ ಕಳವಳ ನನ್ನ ಮನಸ್ಸಿಗೆ ಬರುತ್ತಾ ಇದೆ. ಎಲ್ಲರಲ್ಲೂ ಕೂಡ

ಒಂದು ಹೈಪೋಟಿ ಹುಟ್ಟಿದೆ, ನಾನು ನಿನಗಿಂತ ಸೋಷಿಯಲಿಸ್ಟ್ ಎಂಬ ವಾದ ಬಂದು ಅನೇಕ ಕಡೆಗಳಲ್ಲಿ ಸೋಷಿಯಲಿಸಂನ ಒಂದು ಚಿತ್ರವನ್ನು ಇಟ್ಟುಕೊಂಡು ದೇಶದಲ್ಲಿ ಜನಗಳ ಕಣ್ಣಿಗೆ ಮಣ್ಣು ಹಾಕುತ್ತಾ ಇದ್ದಾರೆ ಎಂದರೂ ತಪ್ಪಾಗಲಾರದು. ನನ್ನ ಮನಸ್ಸಿನಲ್ಲಿ ಇರತಕ್ಕದ್ದನ್ನು ಬಿಚ್ಚಿ ಹೇಳಬೇಕಾದರೆ ಮನುಷ್ಯ ನ್ಯಾಯವಾಗಿ, ಧರ್ಮವಾಗಿ, ಸತ್ಯವಾಗಿ ದುಡಿದು ಸಂಪಾದನೆ ಮಾಡಬೇಕು ಸಂಪಾದನೆ ಮಾಡಿದ್ದನ್ನು ತಗೆದುಕೊಂಡು ತನ್ನ ಸಂಸಾರವನ್ನು ಸರಿಯಾಗಿ ಸಾಕಬೇಕು. ಸಾಕಿದ ಮೇಲೆ ಯಾರಿಂದ ತಾನು ಸಂಪಾದನೆ ಮಾಡಿದನೋ ಅವರ ಹಿತರಕ್ಷಣೆಗೆ ಗಮನಕೊಡಬೇಕು, ನಂತರ ತನ್ನ ಊರು, ತನ್ನ ದೇಶದ ಕಡೆಗೆ ಗಮನ ಕೊಡಬೇಕೆನ್ನುವುದನ್ನು ಮನುಷ್ಯ ಯೋಚನೆ ಮಾಡಿದರೆ ದೇಶಕ್ಕೆ ಒಳ್ಳೆಯದಾಗುತ್ತದೆಯೇ ಹೊರತು ಮತ್ತೆ ಬೇರೆಯಿಲ್ಲ. ಹಿಂದೆ ಸ್ವಾತಂತ್ರ್ಯದ ಸಮರದಲ್ಲಿ ಹೋರಾಡುತ್ತಾ ಇದ್ದಾಗ ಇದ್ದಂಥ ನಿಸ್ವಾರ್ಥತೆ ಮತ್ತು ಜನಗಳಲ್ಲಿ ಇದ್ದಂಥ ಒಗ್ಗಟ್ಟು ಒಡೆದು ಹೋಗಿ ಛಿದ್ರ ಛಿದ್ರವಾಗಿ ದೇಶ ಹೀನಸ್ಥಿತಿಗೆ ಹೋಗುತ್ತಾ ಇರುವುದನ್ನು ನೋಡಿ ಹಿಂದೆ ಸ್ವಾತಂತ್ರ್ಯದಲ್ಲಿ ಭಾಗವಹಿಸಿದವರಿಗೆ ನಿಜವಾಗಿಯೂ ಕೂಡ ವ್ಯಸನ ಪಡತಕ್ಕ ಪರಿಸ್ಥಿತಿ ಈಗ ಒದಗಿರುವುದು ಬಹಳ ಶೋಚನೀಯವಾದ ವಿಚಾರ.

ಇನ್ನು ನಮ್ಮಲ್ಲಿ ಆಗಿರತಕ್ಕದ್ದು ಏನೆಂದರೆ ವಿಶೇಷ ಪ್ರಗತಿಯನ್ನು ಅಂಕಿಅಂಶಗಳು ತೋರಿಸಿದರೂ ಕೂಡ ಒಂದು ಗಂಭೀರವಾದ ಅಂಶವೆಂದರೆ ಜನಸಂಖ್ಯೆ ಅಪಾರವಾಗಿ ಬೆಳೆದಿವೆ. ಫ್ಯಾಮಿಲಿ ಪ್ಲಾನಿಂಗ್ ವಿಚಾರದಲ್ಲಿ ಎಷ್ಟು ವಿಚಾರದಲ್ಲಿ ಎಷ್ಟು ಹೇಳಿದರೂ ಕೂಡ ಅದು ಹೆಚ್ಚಾಗಿ ಬೆಳೆದೇ ಇದೆ. ಎರಡನೆಯದು ಹಸಿವು. ಜನ ಆಹಾರಕ್ಕೆ ಬಹಳವಾಗಿ ಕಾತುರಪಡುತ್ತಾ ಇರುವುದು. ಬೇಕಾದಷ್ಟು ಬೆಳೆಯುತ್ತಾ ಇದೆ ಅಂತ ಅನ್ನುವ ಅಂಕಿ ಅಂಶಗಳಿಂದ ಜನರು ತೃಪ್ತರಾಗುವುದಿಲ್ಲ. ಹೊಟ್ಟೆ ತುಂಬ ಆಹಾರ ಕೊಡುವ ಕಡೆಗೆ ಗಮನ ಕೊಡಬೇಕು.

ಇನ್ನು ಎಜ್ಯುಕೇಷನ್ ಬಗ್ಗೆ. ಈ ಅಸೆಂಬ್ಲಿಗೆ ನಾನು ಬಂದು ಮೂರು ವರ್ಷವಾಯಿತು. ಮೊದಲನೆಯ ವರ್ಷ 36 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ಹೇಳಿದರು, ಎರಡನೆಯ ವರ್ಷ 44 ಕೋಟಿ ರೂಪಾಯಿ ಆಯಿತು, ಈ ವರ್ಷ 53 ಕೋಟಿ ರೂಪಾಯಿಗೆ ಏರಿಸಿದ್ದಾರೆ, ಸಂತೋಷ. ಎಲ್ಲಾ ಬಾಬಿಗಿಂತಲೂ ಕೂಡ ವಿದ್ಯಾಭ್ಯಾಸಕ್ಕೆ ಸಾಕಾದಷ್ಟು ಹೆಚ್ಚಿನ ಗಮನ ಕೊಡಬೇಕಾದ್ದು ಅತಿ ಅವಶ್ಯಕವಾದದ್ದು ಎಂದು ನಾನು ಹೇಳುತ್ತೇನೆ. ವಿದ್ಯಾರ್ಥಿಗಳಿಗೆ ಸರಿಯಾದಂತಹ ವಿದ್ಯೆ ಬರುತ್ತಾ ಇದೆಯೋ ಇಲ್ಲವೆ, ಬರಿ ಪಾಸ್ ಮಾಡತಕ್ಕ ವರ್ಕ್‌ಷಾಪ್ ಆಗಿವೆಯೋ? ಅವರು ವಿದ್ಯೆಗೆ ಸಾಕಾದಷ್ಟು ಗಮನ ಕೊಡುತ್ತಾ ಇದ್ದಾರೆಯೋ ಎಂಬ ಬಗ್ಗೆ ಆರ್ಥಿಕ ಸಚಿವರ ಗಮನವನ್ನು ಸೆಳೆಯಬೇಕಾಗಿದೆ. ನಾಯಕರು ಅಂತ ಅನಿಸಿಕೊಳ್ಳತಕ್ಕವರು ಸರಿಯಾದ ಮಾರ್ಗದರ್ಶನವನ್ನು ತೋರಿಸದೆ ಹುಡುಗರು ತಮ್ಮ ವಿದ್ಯಾಭ್ಯಾಸದ ಕಡೆಗೆ ಗಮನವನ್ನು ಕೊಡುವುದಕ್ಕೆ ಬದಲಾಗಿ ಅವರನ್ನು ರಾಜಕೀಯದ ಕಡೆಗೆ ಎಳೆದು ದೇಶ ಹಾಳಾಗುವ ಸ್ಥಿತಿಗೆ ತಂದಿರುವುದು ಬಹಳ ಶೋಚನೀಯವಾದ ವಿಚಾರ. ನಾನು ಮೊದಲಿನಿಂದ ಹೇಳುತ್ತಾ ಇದ್ದೇನೆ, ಎಜ್ಯುಕೇಷನ್ ಬಗ್ಗೆ ಬರೀ ದುಡ್ಡು ಖರ್ಚು ಮಾಡಿದರೆ ಆಗುವುದಿಲ್ಲ. ಕ್ವಾಂಟಿಟಿಗೆ ಬದಲಾಗಿ ಕ್ವಾಲಿಟಿಕಡೆಗೆ ಹೆಚ್ಚು ಗಮನ ಕೊಡಬೇಕು. ಮಕ್ಕಳಲ್ಲಿ ರಾಷ್ಟ್ರಪ್ರೇಮ ಬೆಳೆಯುವುದಕ್ಕೆ ಮತ್ತು ಕರ್ತವ್ಯದೃಷ್ಟಿ ಕಡೆಗೆ ಹೆಚ್ಚು ಗಮನ ಕೊಡಬೇಕೆಂಬುದನ್ನು ಮುಖ್ಯವಾಗಿ ಗಮನಿಸಬೇಕಾದ ವಿಚಾರ ಎಂದು ಹೇಳುತ್ತೇನೆ. ಮುಂದಿನ ಸತ್‌ಪ್ರಜೆಗಳಾಗತಕ್ಕವರು ಮಕ್ಕಳು, ದಯವಿಟ್ಟು ನೀವು ನಿಮ್ಮ ವಿದ್ಯೆಯ ಕಡೆಗೆ ಗಮನಕೊಟ್ಟು ರಾಷ್ಟ್ರಾಭಿಮಾನಿಗಳಾಗಬೇಕು. ರಾಷ್ಟ್ರವನ್ನು ಕಟ್ಟತಕ್ಕ ಜವಾಬ್ದಾರಿ ನಿಮ್ಮ ಮೇಲೆ ಇದೆ, ಇದಕ್ಕೆ ಹೆಚ್ಚು ಗಮನ ಕೊಡಿ ಎಂದು ವಿದ್ಯಾರ್ಥಿಗಳಿಗೆ ಕೇಳಿಕೊಳ್ಳತಕ್ಕ ಪರಿಸ್ಥಿತಿ ಈಗ ಬಂದಿದೆ. ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವನ್ನು ಸರಿಯಾಗಿ ಮಾಡಿ ದೇಶವನ್ನು ಕಾಪಾಡತಕ್ಕ, ರಾಷ್ಟ್ರವನ್ನು ಕಟ್ಟತಕ್ಕ ಅಭಿಮಾನದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲಿ ಎಂದು ವಿದ್ಯಾರ್ಥಿಗಳಲ್ಲಿ ಬಹಳ ವಿನಯದಿಂದ ಮತ್ತು ನಮ್ರತೆಯಿಂದ ಬೇಡಿಕೊಳ್ಳುತ್ತೇನೆ; ಮತ್ತು ಹರಿಜನ ಗಿರಿಜನರ ಬಗ್ಗೆ ಬೇಕಾದಷ್ಟು ಮಾತನಾಡುತ್ತಾ ಇದ್ದಾರೆ. ನನ್ನ ತಿಳುವಳಿಕೆ ಪ್ರಕಾರ ಹರಿಜನೋದ್ಧಾರವಾಗಬೇಕಾದರೆ ಅವರ ಸಾಹಸದಿಂದ ಮಾತ್ರವೇ ಸಾಧ್ಯವೇ ಹೊರತು ಮನೆ ಮಠ ಕಟ್ಟಿಕೊಟ್ಟರೆ ಆಗುವುದಿಲ್ಲ. ಆದ್ದರಿಂದ ಎಷ್ಟು ಸಾಧ್ಯವಾಗುತ್ತದೆಯೋ ಅಷ್ಟುಮಟ್ಟಿಗೂ ಹರಿಜನರನ್ನು ವಿದ್ಯಾವಂತರನ್ನಾಗಿ ಮಾಡಿದ ಪಕ್ಷದಲ್ಲಿ ಹರಿಜನರಲ್ಲಿ ಅಸ್ಪೃಶ್ಯತೆ ಅನ್ನುವುದು ಖಂಡಿತವಾಗಿಯೂ ನಿರ್ನಾಮವಾಗುತ್ತದೆ ಎಂದು ಹೇಳಬಯಸುತ್ತೇನೆ. ಮಂತ್ರಿಗಳು ಯಾರಾದರೂ ನಮ್ಮ ಮನೆಗೆ ಬಂದರೆ ಎಲ್ಲ ವಿಧವಾದ ಪೂಜ್ಯತೆಯಿಂದ ಕರೆದುಕೊಂಡು ಹೋಗುತ್ತೇವೆ, ಅವೇ ಬೇರೆ ಯಾರಾದರೂ ಬಂದರೆ ಅವರನ್ನು ದೂರದಲ್ಲೇ ಇಡುವುದಕ್ಕೆ ಪ್ರಯತ್ನ ಪಡುತ್ತೇವೆ. ಇದರಲ್ಲಿ ಮುಖ್ಯವಾಗಿ ಇರುವುದು ಅವರು ತಮ್ಮ ಸ್ಥಾನಮಾನಗಳನ್ನು ಬೆಳೆಸಿಕೊಳ್ಳಬೇಕಾದರೆ ಹರಿಜನರು ತಮ್ಮಲ್ಲಿರತಕ್ಕ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸನ್ನು

(ಶ್ರೀ ಟಿ. ಆರ್. ಶಾಮಣ್ಣ)

ತೊಡೆದು ಹಾಕಿಕೊಳ್ಳಲು ಪ್ರಯತ್ನ ಮಾಡಬೇಕು. ಮತ್ತು ತಾವು ವಿದ್ಯಾವಂತರಾಗಿ ಯಾರಿಗೂ ಕಡಿಮೆ ಇಲ್ಲ ಎಂದು ತೋರಿಸಿಕೊಳ್ಳಬೇಕಾದರೆ ಅದು ತಮ್ಮ ಸ್ವಶಕ್ತಿಯಿಂದ ಬರಬೇಕು ಎಂಬುದನ್ನು ಹೇಳುತ್ತಾ ಇದ್ದೇನೆ. ನಾನು ಇನ್ನೊಂದು ಮಾತು ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಬಾರದು. ಹರಿಜನ ನಾಯಕರು ಯಾರಿದ್ದಾರೆ ಅವರು ತಾವು ಮೇಲಕ್ಕೆ ಏರುತ್ತಾ ಹೋಗಿ ಹಿಂದೆ ಬಿದ್ದವರನ್ನು ಹಿಂದಕ್ಕೆ ಒದೆಯುತ್ತಾ ಇದ್ದಾರೆ ಎಂದು ಹೇಳಿದರೆ ಯಾರೂ ತಪ್ಪು ತಿಳಿದುಕೊಳ್ಳಕೂಡದು. ಹರಿಜನರ ಸೇವೆ ಮಾಡಬೇಕಾದರೆ ಇನ್ನೂ ಗುಡಿಸಿಲಿನಲ್ಲಿ ವಾಸಮಾಡತಕ್ಕವರು ಯಾರಿದ್ದಾರೆ ಅವರನ್ನು ಮೇಲ್ಮಟ್ಟದಲ್ಲಿ ತರುವುದಕ್ಕೆ ಪ್ರಯತ್ನ ಮಾಡಿಲ್ಲ ಎಂದು ಹೇಳಬಯಸುತ್ತೇನೆ. ಹಿಂದೆ ಗೋಪಾಲಸ್ವಾಮಿಯನ್ನ ಅಂತ ಅನ್ನುವವರು ಇಲ್ಲಿ ಇದ್ದರು. ಅವರು ಏನು ಮಾಡುತ್ತಾ ಇದ್ದರು ಎಂದರೆ ಎಲ್. ಎಸ್. ಪರೀಕ್ಷೆ ರಿಸಲ್ಟ್ ಬಂದ ತಕ್ಷಣ ಹರಿಜನರು ಎಷ್ಟು ಜನ ಪಾಸ್ ಮಾಡಿದ್ದಾರೆ, ಅಷ್ಟು ಜನಕ್ಕೂ ಪೋಸ್ಟ್ ಕಾರ್ಡ್ ಹಾಕಿ ಅವರಿಗೆ ಸೂಕ್ತವಾದ ತಿಳಿವಳಿಕೆಯನ್ನು ಕೊಡುತ್ತಾ ಇದ್ದರು. ಈಗ ನಾನು ಕೇಳಿಕೊಳ್ಳುವುದೇನೆಂದರೆ ಹರಿಜನ ನಾಯಕರು ತಮ್ಮವರನ್ನು ಮೇಲಕ್ಕೆ ತರಲು ಪ್ರಯತ್ನ ಮಾಡಬೇಕು. ನಿಮ್ಮ ಉದ್ಧಾರವನ್ನು ನೀವೇ ಮಾಡಿಕೊಳ್ಳಬೇಕು ಎಂದು ಹೇಳಿ ಅವರಲ್ಲಿ ವಿನಯಪೂರ್ವಕವಾಗಿ ಹೇಳಿ ಸರ್ಕಾರದವರು ಹಣ ಖರ್ಚು ಮಾಡಿ ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಮುನಿಯಪ್ಪ.—ಹರಿಜನೋದ್ಧಾರ ಮಾಡಬೇಕೆಂದರೆ ವಿದ್ಯಾಭ್ಯಾಸಕ್ಕೆ ಮೊದಲನೆ ಪ್ರಿಫರೆನ್ಸ್ ಕೊಡಿ ಎಂದು ಹೇಳಿದಿರಿ. ಈಗ ಸವರ್ಣೀಯರ ಹಾಸ್ಟೆಲಿನಲ್ಲಿ ಹರಿಜನರನ್ನು ಕಡ್ಡಾಯವಾಗಿ ಇಂತಿಷ್ಟು ಜನ ಸೇರಿಸಲೇಬೇಕೆಂದು ಮಾಡಬೇಕೆಂಬ ಬಗ್ಗೆ ತಮ್ಮ ಸಲಹೆ ಏನು ?

ಶ್ರೀ ಟಿ. ಆರ್. ಶಾಮಣ್ಣ.—ಸಂತೋಷ ಅದೇ ರೀತಿ ಮಾಡಿ. ಮಾನ್ಯ ಸದಸ್ಯರು ಬಂದರೆ ನನ್ನ ಜೊತೆಯಲ್ಲಿ ಕರೆದುಕೊಂಡುಹೋಗಿ ನಮ್ಮ ಊಟದ ಮನೆಯಲ್ಲೇ ಕೂಡಿಸಿಕೊಂಡು ಊಟ ಮಾಡುತ್ತೇನೆ. ಸರ್ಕಾರದವರು ಅವರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಸಾಕಾದಷ್ಟು ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎ. ಮುನಿಯಪ್ಪ.—ಸವರ್ಣೀಯರ ಹಾಸ್ಟೆಲ್‌ನಲ್ಲಿ 10 ಪರ್ಸೆಂಟ್ ಸೀಟ್ಸ್ ಹರಿಜನರಿಗೆ ಕೊಡಿ ಎಂದು ಮಾಡಿದ್ದಾರೆ. ಆ ರೀತಿ ಅವರನ್ನು ಸೇರಿಸುತ್ತಾ ಇಲ್ಲ ಎಂದು ಹೇಳುತ್ತಾ ಇದ್ದೇನೆ. ಅದಕ್ಕೆ ಸರ್ಕಾರದವರಿಗೆ ಏನಾದರೂ ಸಲಹೆ ಮಾಡುತ್ತೀರಾ ?

ಶ್ರೀ ಟಿ. ಆರ್. ಶಾಮಣ್ಣ.—ಸರ್ಕಾರದವರು ನಿರ್ದಾಕ್ಷಿಣ್ಯವಾಗಿ ಇರಬೇಕು, ಅದರ ಬಗ್ಗೆ ಯಾರು ಸರ್ಕಾರದಿಂದ ದುಡ್ಡು ತೆಗೆದುಕೊಳ್ಳುತ್ತಾರೆಯೋ ಅವರೆಲ್ಲರೂ ಸರ್ಕಾರದ ಒಂದು ನಿಯಮದ ಪ್ರಕಾರ ಕೆಲಸ ಮಾಡಬೇಕೆಂದು ಹೇಳಬಲ್ಲೆ. ಇನ್ನೊಂದು ವಿಚಾರವನ್ನು ತಮ್ಮ ಮುಂದೆ ನಾನು ಅರಿಕೆ ಮಾಡಿಕೊಳ್ಳಬೇಕಾಗಿದೆ. ಸಾಧಾರಣವಾಗಿ ಈ ಅಸೆಂಬ್ಲಿಯಲ್ಲಿ ಇರತಕ್ಕ ಹೆಚ್ಚು ಜನ ಹಳ್ಳಿಯಲ್ಲೇ ವಾಸಮಾಡತಕ್ಕವರು, ನಾನು ಕೂಡ ಹಳ್ಳಿಯಲ್ಲೇ ವಾಸಮಾಡಿದವನು. ಹಳ್ಳಿ ಜನರು ಬಹಳ ಕಷ್ಟಪಟ್ಟು ಜೀವನ ಮಾಡತಕ್ಕವರು ಎಂದು ಹೇಳುತ್ತಾ ಇರುತ್ತಾರೆ. ಹಳ್ಳಿಯವರಿಗೆ ಸಾಕಾದಷ್ಟು ಸಹಾಯ ಮಾಡಬೇಕೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೂ ಕೂಡ ಪಟ್ಟಣಗಳಲ್ಲಿ ವಾಸಮಾಡತಕ್ಕವರ ವಿಚಾರ ಆಲೋಚನೆ ಮಾಡಿದರೆ ಇವತ್ತಿನ ದಿವಸ ಬೊಂಬಾಯಿನಲ್ಲಿರುವ ಹಾಗೆ ಎಲ್ಲರೂ ಬೆಂಗಳೂರು ಪಟ್ಟಣದಲ್ಲಿ ಇದ್ದಾರೆ ಎಂದು ಯಾರೂ ತಿಳಿದುಕೊಳ್ಳಬಾರದು. ಬೆಂಗಳೂರಿನಲ್ಲಿ ನಾನು ನೋಡಿದ್ದೇನೆ ಅನೇಕ ಸಂಸಾರಗಳು ಒಂದು ರೂಮಿನಲ್ಲಿ ವಾಸಮಾಡಿ ಗಂಡಹೆಂಡತಿ ಪ್ರತ್ಯೇಕವಾಗಿ ಮಲಗಿಕೊಳ್ಳತಕ್ಕ ಸಂದರ್ಭಗಳು ಉಂಟು. ಬಡ ಸಂಸಾರಗಳು ಬಹಳ ಕಷ್ಟದಲ್ಲಿ ಇವೆ. ಹೊಟ್ಟೆಗೆ ಇಲ್ಲ ಅದರ ಜೊತೆಗೆ ಗಂಡ ಕುಡುಕನಾಗಿ ಈ ಪಟ್ಟಣದ ದುರ್ವಿದ್ಯೆಯನ್ನು ಕಲಿತುಕೊಂಡು ಸಂಸಾರವನ್ನು ಬಹಳ ಕಷ್ಟಕ್ಕೆ ಈಡು ಮಾಡತಕ್ಕ ಒಂದು ಪರಿಸ್ಥಿತಿಯಲ್ಲಿ ಸಾವಿರಾರು ಸಂಸಾರಗಳು ಬೆಂಗಳೂರಿನಲ್ಲಿ ಇವೆ. ಆದ್ದರಿಂದ ಪಟ್ಟಣವನ್ನು ಒಂದು ಓರೆಗಣ್ಣಿನಿಂದ ನೋಡಬೇಡಿ, ಪಟ್ಟಣದ ಸೌಲಭ್ಯದ ಕಡೆಗೂ ಕೂಡ ಗಮನ ಕೊಡಬೇಕೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಈಗ ನಮ್ಮ ಮುಂದೆ ಇಟ್ಟಿರತಕ್ಕ ಬಡ್ಜೆಟ್ಟಿನಲ್ಲಿ ಸಾಲ, ಓವರ್‌ಡ್ರಾಫ್ಟ್, ಮತ್ತು ಕೇಂದ್ರದ ಸಹಾಯ ಧನ ಇವುಗಳೆಲ್ಲಾ ನಮೂದಾಗಿದೆ. ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಇಷ್ಟೆ. ನಮಗೆ ಬರತಕ್ಕ ವರಮಾನ ಸಾಕಾದಷ್ಟು ಇದೆ ಆದರೆ ಏನಾಗುತ್ತಾ ಇದೆ ಎಂದರೆ ನನ್ನ ಅಭಿ

ಪ್ರಾಯದಲ್ಲಿ ಬಿಳಿಯ ಆನೆಯ ಹಾಗೆ ಈ ಒಂದು ಎಸ್ಟಾಬ್ಲಿಷ್‌ಮೆಂಟನ್ನು ಬೆಳೆಸಿದ್ದೀರಿ. ನನಗೆ ಸರ್ಕಾರದ ಕೆಲಸ ಮಾಡತಕ್ಕ ನೌಕರರ ಬಗ್ಗೆ ಸಾಕಾದಷ್ಟು ಮಮತೆ ಇದೆ, ಸರ್ಕಾರಿ ನೌಕರರಲ್ಲಿ ಸುಮ್ಮನೆ ಅವರಿವರನ್ನು ನೋಡಿಕೊಂಡು ಸೂಕ್ಷ್ಮವಾಗಿ ಕೆಲಸ ಮಾಡತಕ್ಕ ಒಂದು ಪ್ರವೃತ್ತಿ ಇದೆ, ಅಂತ ಕೆಲಸ ಮಾಡತಕ್ಕ ಅನೇಕ ನೌಕರರು ಇದ್ದಾರೆ. ಆದುದರಿಂದ ನಿಷ್ಠೂರವಾಗಿ ಹೇಳಿದರೂ ಕೂಡ ನೌಕರರು ಬೇಕಾದಷ್ಟು ವೇತನವನ್ನು ತೆಗೆದುಕೊಳ್ಳಲಿ, ಆದರೆ ಅನಾವಶ್ಯಕವಾಗಿ ಕಾಲ ಕಳೆಯದೆ ಕಾಲವನ್ನು ವ್ಯರ್ಥಮಾಡದೆ ತೆಗೆದುಕೊಳ್ಳುವ ಸಂಬಳಕ್ಕೆ ತಕ್ಕಂತೆ ದುಡಿಯಬೇಕು ಎಂದು ವಿನಯಪೂರ್ವಕವಾಗಿ ನೌಕರರನ್ನು ಕೇಳಿಕೊಂಡು ಅನೇಕ ಇಲಾಖೆಗಳ ಸೃಷ್ಟಿಯಾಗಿ ವ್ಯರ್ಥವಾಗಿ ಹಣ ಖರ್ಚಾಗುತ್ತಿದೆ. ಅದರ ಜೊತೆಗೆ ತೆರಿಗೆಯನ್ನು ಹಾಕುವುದಕ್ಕೆ ಬದಲಾಗಿ ಇರುವ ಲಂಚರುಷುವತ್ತನ್ನು ಕಡಮೆಮಾಡಿ ಬರಬೇಕಾದ ತೆರಿಗೆಯನ್ನು ಸರಿಯಾಗಿ ವಸೂಲುಮಾಡಿದರೆ ಹೊಸ ತೆರಿಗೆ ಹಾಕಬೇಕಾಗುವುದಿಲ್ಲ ಎಂದು ಹೇಳುತ್ತೇನೆ. ಮಾರಾಟ ತೆರಿಗೆ ಇಲಾಖೆಯಲ್ಲಿ ಆಫೀಸರು ಯಾರಾದರೂ ಹೋದ ತಕ್ಷಣ ಪೇಜು ನೋಡಿ ಇಷ್ಟು ಕೊಡುತ್ತೀರಾ ಎಂದು ಕೇಳಿ ನಂತರ ಅಸೆಸ್ ಮಾಡುತ್ತಾರೆ, ಯಾರೂ ಕೂಡ ಲೆಕ್ಕದ ಪ್ರಕಾರ ಅಸೆಸ್ ಮಾಡುವುದಿಲ್ಲ. ವರ್ತಕರು ರಾಮನ ಲೆಕ್ಕ ಮತ್ತು ಕೃಷ್ಣನ ಲೆಕ್ಕ ಎಂದು ಎರಡು ವಿಧವಾಗಿ ಲೆಕ್ಕ ಇಡುವರು, ಮನೆಯಲ್ಲಿ ಬರೆಯುವುದೊಂದು, ಸರಕಾರಕ್ಕೆ ಕೊಡುವುದೊಂದು, ಹೀಗೆ ಎರಡು ಲೆಕ್ಕ ಇಡುವರು. ಕೆಲವರು ಸತ್ಯವಂತರೂ ಇದ್ದಾರೆ. ಅನೇಕರು ನ್ಯಾಯವಾಗಿ ಕೊಡಬೇಕಾದ್ದನ್ನು ಕೊಡುವರು, ಸರ್ಕಾರದವರು ಸೇಲ್ಸ್‌ಟ್ಯಾಕ್ಸ್ ಆಫೀಸರ ಬಗ್ಗೆ ಸರಿಯಾಗಿ ಗಮನಕೊಟ್ಟರೆ, ಸರಿಯಾಗಿ ತೆರಿಗೆ ಬರಬೇಕಾದನ್ನು ವಸೂಲು ಮಾಡಿದರೆ, ಈಗ ಬರುವ 42 ಲಕ್ಷ ರೂಪಾಯಿ ಆದಾಯಕ್ಕೆ ಬದಲಾಗಿ 50 ಲಕ್ಷ ಬರಲು ಸಾಧ್ಯವಿದೆ. ಹಾಗೆ ಮಾಡಬೇಕೇ ಹೊರತು ಸಣ್ಣಪುಟ್ಟ ಹೊಸ ತೆರಿಗೆ ಹಾಕಿ ಜನರಿಗೆ ತೊಂದರೆ ಮಾಡಬಾರದು. ಇದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕು, ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಬೇಕು, ಹಾಗೆ ಮಾಡಿ ಬರಬೇಕಾದ್ದನ್ನು ಸರಿಯಾಗಿ ವಸೂಲುಮಾಡಬೇಕು. ಬೆಂಗಳೂರು ಕಾರ್ಪೊರೇಷನ್ ಬಗ್ಗೆ ಮುನಿಸಿಪಲ್ ಬಜೆಟ್ ಬಂದಾಗ ಹೇಳುತ್ತೇನೆ. ಹಿಂದೆ ನಾನು ಮಾತನಾಡುವಾಗ ಡಿಸೆಂಬರಿನಲ್ಲಿ ಚುನಾವಣೆ ಮಾಡುವುದಿಲ್ಲ ಎಂದು ಹೇಳಿದ್ದೆ ಇಂದು ಫೆಬ್ರವರಿ ಆಯಿತು, ಬರುವ ಡಿಸೆಂಬರಿನವರೆಗೆ ಮಾಡುವುದಿಲ್ಲ. ಯಾವಾಗಲೂ ಖಚಿತವಾಗಿ ಹೇಳಿದರೆ ಒಳ್ಳೆಯದು, ಸುಮ್ಮನೆ ಏನೋ ಹೇಳಿ ಜನರ ಕಣ್ಣಿಗೆ ಮಣ್ಣೆರಚಬಾರದು.

ಈಗ ಗಾಂಧಿ ಶತಮಾನೋತ್ಸವದ ವರ್ಷ, ಬೇಕಾದ ಉತ್ಸವ ಮಾಡುತ್ತಿದ್ದಾರೆ. ಈಗ ಗಾಂಧೀಜೀಯವರು ಬದುಕಿದ್ದು ದೇಶದ ಪರಿಸ್ಥಿತಿ ನೋಡಿದರೆ ಅವರು ಉಪವಾಸಮಾಡಿ ಸಾಯುತ್ತಿದ್ದರು. ಗೋಡ್ಸೆ ಗಾಂಧಿಯವರನ್ನು ಕೊಂದ, ಇಂದು ಅವರಿದ್ದರೆ ಅನ್ಯಾಯಗಳೇನು ನಡೆಯುತ್ತಿವೆಯೆಂಬುದನ್ನು ನೋಡಿ ಅವರು ಉಪವಾಸ ಮಾಡಿ ಸಾಯುತ್ತಿದ್ದರು, ಗಾಂಧಿ ತತ್ವಕ್ಕೆ ವಿರುದ್ಧವಾಗಿ ಈಗ ಕೆಲಸಕಾರ್ಯಗಳು ನಡೆಯುತ್ತಿವೆ ಎಂದು ಹೇಳಿದರೆ ತಪ್ಪಾಗಲಾರದು.

ಇದರ ಜೊತೆಗೆ ಸರ್ಕಾರದವರು ನಡೆಸುತ್ತಿರುವ ಅನೇಕ ಕೈಗಾರಿಕೆಗಳು ಪ್ರಗತಿಯನ್ನು ತೋರಿಸಿಲ್ಲ, ನಷ್ಟದಲ್ಲಿ ಅವು ಕೆಲಸಮಾಡುತ್ತಿರುವುದು ಶೋಚನೀಯ.

ಕೊನೆಯದಾಗಿ ಕನ್ನಡದ ಬಗ್ಗೆ ಬಹಳ ಅಭಿಮಾನ ಮತ್ತು ಪ್ರೀತಿಯನ್ನು ತೋರಿಸಿ ನಮ್ಮ ಆರ್ಥಿಕ ಸಚಿವರು ಮಾತನಾಡಿದ್ದಾರೆ. ಬರೀ ಬಾಯಿಮಾತಿನಿಂದ ಹೇಳಿದರೆ ಉದ್ಧಾರವಾಗುವುದಿಲ್ಲ. ಸ್ವರಾಜ್ಯ ಬಂದು 22 ವರ್ಷಗಳಾದರೂ ಕೂಡ ಕನ್ನಡ ಮಾಧ್ಯಮ ಜಾರಿಗೆ ಬಂದಿಲ್ಲ. ಇನ್ನೂ ಕನ್ನಡವನ್ನು ಆಡಳಿತ ಭಾಷೆ ಮಾಡುವುದಕ್ಕೆ ಸಾಧ್ಯವಾಗಿಲ್ಲ ಅದಕ್ಕೆ ಇಷ್ಟು ಕಾಲಬೇಕೇ? ಇದು ಶೋಚನೀಯ. ಕಾರ್ಪೊರೇಷನ್ನಿನಲ್ಲಿ ಹತ್ತು ವರ್ಷಗಳ ಕೆಳಗೆ ಕನ್ನಡ ಆಡಳಿತ ಭಾಷೆಯಾಗಬೇಕೆಂದು ತೀರ್ಮಾನಮಾಡಿ 10 ಟೈಪ್‌ರೈಟರುಗಳನ್ನು ತಂದರು, ಅವು ರಿಕಾರ್ಡು ರೂಮಿನಲ್ಲಿ ಉಪಯೋಗವಿಲ್ಲದೆ ಬಿದ್ದಿವೆ. ಈಗ ಕನ್ನಡ ಟೈಪ್‌ರೈಟರುಗಳನ್ನು ಕೊಂಡುಕೊಳ್ಳುವುದಕ್ಕೆ ಸಹಾಯ ಮಾಡಿದ್ದಾರೆ. ಆದರೆ ಟೈಪ್‌ರೈಟಿಂಗ್ ಮತ್ತು ಷಾರ್ಟ್‌ಹ್ಯಾಂಡ್ ಕಲಿಯುವುದಕ್ಕೆ ಇನ್‌ಸೆಂಟಿವ್ ಕೊಟ್ಟಿಲ್ಲ. ಕನ್ನಡ ಆಡಳಿತ ಭಾಷೆಯಾಗಿ ಜಾಗ್ರತೆ ಮುಂದುವರೆಯಲು ಕನ್ನಡ ಷಾರ್ಟ್‌ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಕಲಿತವರ ಸಂಖ್ಯೆ ಹೆಚ್ಚಬೇಕು. ಮತ್ತು ಕಾಗುಣಿತ ಚೆನ್ನಾಗಿ ಗೊತ್ತಿರಬೇಕು, ಅಕ್ಷರ ಚೆನ್ನಾಗಿ ಬರೆಯಲು ಬರಬೇಕು. ಆದುದರಿಂದ ಇನ್ನುಮುಂದಾದರೂ ಕೂಡ ಟೆಸ್ಟ್ ಮಾಡುವಾಗ ಕನ್ನಡ ಚೆನ್ನಾಗಿ ಬರೆಯಲು ಬರುವುದೇ, ಕಾಗುಣಿತ ಚೆನ್ನಾಗಿ ಬರುವುದೇ ಮತ್ತು ಕನ್ನಡ ಷಾರ್ಟ್ ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಬರುವುದೇ ಎಂಬುದನು ಗಮನಿಸಬೇಕು. ವಿದ್ಯಾರ್ಥಿವೇತನವನ್ನಾದರೂ ಕೊಟ್ಟು, ಪಾಠ ಹೇಳಲು ಇನ್‌ಸ್ಟಿಟ್ಯೂಟುಗಳಿಗೆ ಸಬ್ಸಿಡಿಯಾದರೂ ಕೊಟ್ಟು ಷಾರ್ಟ್ ಹ್ಯಾಂಡ್ ಮತ್ತು ಟೈಪ್‌ರೈಟಿಂಗ್ ಕಲಿಯಲು ಅವಕಾಶ ಮಾಡಿದರೆ ಆಫೀಸುಗಳಲ್ಲಿ ಕೆಲಸ ಮಾಡಲು ಸಾಧ್ಯ. ಹಾಗಿಲ್ಲದೆ ಸುಮ್ಮನೆ ಬಾಯಲ್ಲಿ ಹೇಳಿದರೆ

(ಶ್ರೀ ಟಿ. ಆರ್. ಶಾಮಣ್ಣ)

ಪ್ರಯೋಜನವಾಗುವುದಿಲ್ಲ. ನಮ್ಮ ನೆರೆ ರಾಷ್ಟ್ರವಾದ ತಮಿಳುನಾಡಿನಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮುಂದುವರೆದಿದ್ದಾರೆ, ರಾಜ್ಯ ಭಾಷೆಯನ್ನು ಬೆಳೆಸಿದ್ದಾರೆ. ಹಾಗಿರುವಾಗ ನಾವೇಕೆ ಹಿಂದೆ ಬಿದ್ದಿದ್ದೇವೆ ಎಂಬುದನ್ನು ವಿಚಾರ ಮಾಡಬೇಕು. ಇದರಿಂದ ನಮ್ಮ ರಾಜ್ಯದವರಿಗೆ ಬಹಳ ಅನ್ಯಾಯವಾಗಿದೆ.

ಬೆಂಗಳೂರು—ಮೈಸೂರುಗಳಲ್ಲಿ ಅನೇಕ ಕಾರ್ಖಾನೆಗಳಿವೆ, ಖಾಸಗಿ ಕಾರ್ಖಾನೆಗಳೂ ಇವೆ. ಆದರೆ ಕೇಂದ್ರ ಸರ್ಕಾರ ಸ್ಥಾಪಿಸಿರುವ ಕಾರ್ಖಾನೆಗಳಲ್ಲಿ ಬಂಗಾಳಿ ಆಫೀಸರಿದ್ದರೆ ಬಂಗಾಳಿಗಳಿಗೆ, ಮಲೆಯಾಳಿ ಆಫೀಸರಿದ್ದರೆ ಮಲೆಯಾಳಿಗಳಿಗೆ, ಪಂಜಾಬಿ ಆಫೀಸರಿದ್ದರೆ ಪಂಜಾಬಿಗಳಿಗೆ ಹೆಚ್ಚಾಗಿ ಕೆಲಸ ದೊರೆಯುತ್ತದೆ. ಇದರಿಂದ ಕನ್ನಡಿಗರಿಗೆ ಬಹಳ ಅನ್ಯಾಯವಾಗಿದೆ. ಆದುದರಿಂದ ಇನ್ನುಮೇಲೆ ಮೈಸೂರು ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಮೈಸೂರು ರಾಜ್ಯದವರಿಗೆ ಇಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಒತ್ತಾಯಮಾಡಬೇಕು. ಅದಕ್ಕೆ ನಿಯಮ ಸಹ ಮಾಡಬೇಕು. ಇದು ಹೇಗಿದೆಯೆಂದರೆ ಒಂಟೆಗೆ ಮೂತಿ ಇಡಲು ಅವಕಾಶ ಕೊಟ್ಟರೆ ಅದು ಒಳಗೆ ಇರುವವರನ್ನು ಈಚೆಗೆ ದಬ್ಬುವುದು, ಹಾಗಿದೆ. ಬರೀ ಭಾಷಣದಿಂದ ಪ್ರಯೋಜನವಾಗುವುದಿಲ್ಲ. ಪ್ರತಿಯೊಬ್ಬರೂ ಕೂಡ ಕನ್ನಡ ಭಾಷೆ ಬೆಳೆಸಲು ಪ್ರಯತ್ನ ಪಡಬೇಕು. ಈಗಲಾದರೂ ಕೂಡ ಕನ್ನಡ ಜನತೆ ಎಚ್ಚತ್ತು ಕನ್ನಡ ರಾಜ್ಯದ ಹಿತದ ಬಗ್ಗೆ ಹೋರಾಡಬೇಕು, ಶ್ರಮಿಸಬೇಕು, ಸ್ವಾರ್ಥ, ಜಾತಿಮತ ಮತ್ತು ಗುಂಪಿನ ಮನೋಭಾವ ಬಿಡಬೇಕು, ಒಗ್ಗಟ್ಟಿನಿಂದ ಕೆಲಸಮಾಡಬೇಕು ಎಂದು ತಿಳಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಸನ್ಮಾನ್ಯ ಸಭಾಧ್ಯಕ್ಷರೇ 1970—71ನೆಯ ಸಾಲಿನ ಆಯವ್ಯಯ ಪಟ್ಟಿ ಬಗ್ಗೆ ಮಾನ್ಯ ಸಚಿವರು ಮಾಡಿರುವ ಭಾಷಣದ ಬಗ್ಗೆ ಕೆಲವು ಸಲಹೆಗಳನ್ನು ಕೊಡುತ್ತೇನೆ ಎತ್ತು ಏರಿಗೆ ಎಳೆದರೆ ಕೋಣ ನೀರಿಗೆಳೆಯಿತು ಎಂಬ ಗಾದೆಗನುಗುಣವಾಗಿ ಶ್ರೀ ರಾಮಕೃಷ್ಣ ಹೆಗಡೆಯವರ ಭಾಷಣವಿದೆ. ಕನ್ನಡದಲ್ಲಿ ಅವರು ಭಾಷಣ ಮಾಡಿದ್ದರಿಂದ ಮತ್ತು ಅವರ ಕನ್ನಡದ ಜ್ಞಾನವನ್ನು ಮೆಚ್ಚಿ ಶ್ರೀ ಶಿವಪ್ಪನವರು ಪ್ರಶಂಸೆಮಾಡಿದ್ದಾರೆ. ಆದರೆ ಕಳೆದ 22 ವರ್ಷಗಳಿಂದ ಕನ್ನಡದ ಬಗ್ಗೆ ಕಾಂಗ್ರೆಸ್ ಆಡಳಿತದಲ್ಲಿ ಎಷ್ಟು ಆಸಕ್ತಿ ವಹಿಸಿದ್ದಾರೆ, ಕನ್ನಡನಾಡಿನ ಬಗ್ಗೆ ಎಷ್ಟು ದುಡಿದಿದ್ದಾರೆ ಎಂದು ಪ್ರಶ್ನೆಮಾಡಬೇಕಾಗಿದೆ. ಆದನ್ನು ಕೆಲವು ಅಂಕಿ ಅಂಶಗಳ ಮೂಲಕ ಹೇಳುತ್ತೇನೆ. 10 ಲಕ್ಷ ಪ್ರಜೆಗಳಿಗೆ ಬ್ರಿಟನ್ನಿನಲ್ಲಿ 469 ಗ್ರಂಥಗಳನ್ನು ಬಿಡುಗಡೆ ಮಾಡಿದ್ದಾರೆ, ಜಪಾನಿನಲ್ಲಿ 331 ಗ್ರಂಥಗಳನ್ನು ಬಿಡುಗಡೆ ಮಾಡಿದ್ದಾರೆ, ಇಂಡಿಯಾದಲ್ಲಿ 10 ಲಕ್ಷ ಪ್ರಜೆಗೆ 27 ಗ್ರಂಥ ಬಿಡುಗಡೆಮಾಡಿದ್ದಾರೆ. ಅದೇ ಮೈಸೂರು ರಾಜ್ಯದಲ್ಲಿ ಕನ್ನಡದಲ್ಲಿ ಎಷ್ಟು ಗ್ರಂಥಗಳನ್ನು ಒದಗಿಸಿದ್ದಾರೆ ಎಂದು ನೋಡಿದರೆ 61-62ರಲ್ಲಿ 632, 67-68ರಲ್ಲಿ 458 ಗ್ರಂಥಗಳನ್ನು ಬಿಡುಗಡೆಮಾಡಿದ್ದಾರೆ. ಗುಜರಾತಿನಲ್ಲಿ 61-62ರಲ್ಲಿ 1,066, 67-68ರಲ್ಲಿ 976 ಗ್ರಂಥಗಳನ್ನು ಬಿಡುಗಡೆ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ 61-62ರಲ್ಲಿ 3,151, 67-68ರಲ್ಲಿ 4,966 ಗ್ರಂಥಗಳನ್ನು ಬಿಡುಗಡೆ ಮಾಡಿದ್ದಾರೆ. ಅದೇ ತಮಿಳು ನಾಡಿನಲ್ಲಿ 1961-62ರಲ್ಲಿ 1084 ಗ್ರಂಥಗಳು ಮತ್ತು 1967-68ರಲ್ಲಿ 972 ಗ್ರಂಥಗಳನ್ನು ಬಿಡುಗಡೆ ಮಾಡಿದ್ದಾರೆ. ಪ್ರತಿವರ್ಷ ಕನ್ನಡ ಗ್ರಂಥಗಳನ್ನು ಬಿಡುಗಡೆ ಮಾಡುತ್ತಿರುವುದನ್ನು ನೋಡಿದರೆ ಸರ್ಕಾರದವರಿಗೆ ಕನ್ನಡದ ಬಗ್ಗೆ ಇರತಕ್ಕ ಅಭಿಮಾನ, ಅವರ ಧೋರಣೆ, ಧ್ಯೇಯಗಳನ್ನು ನೋಡುವುದಾದರೆ ದಿನೇ ದಿನೇ ಅದು ಕುಂಠಿತವಾಗಿ ಹೀನಸ್ಥಿತಿಗೆ ಇಳಿಯುತ್ತಿದೆ. ಈಗಲಾದರೂ ಕೂಡ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡಬೇಕು ಎಂದು ಶ್ರೀಮಾನ್ ಶಾಮಣ್ಣನವರು ಹೇಳಿದರು. ಕನ್ನಡದ ಬಗ್ಗೆ ಅಭಿಮಾನವಿದ್ದರೆ, ಒಳ್ಳೆಯ ಮನಸ್ಸಿದ್ದರೆ, ಈ ಕೂಡಲೇ ಎಲ್ಲ ಇಲಾಖೆಗಳಲ್ಲಿಯೂ ಕನ್ನಡದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವಂಥ ವ್ಯವಸ್ಥೆ ಮತ್ತು ಎಲ್ಲ ಲೆಕ್ಕ ಪತ್ರಗಳನ್ನೂ ದಾಖಲೆಗಳನ್ನೂ ಕನ್ನಡದಲ್ಲಿ ಇಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿಲ್ಲ. ಹಣಕಾಸಿನ ಮಂತ್ರಿಗಳು ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ಕನ್ನಡ ದೇಶದವರಾಗಿದ್ದು, ಕನ್ನಡ ನಾಡಿನಲ್ಲಿ ಹುಟ್ಟಿದವರಾಗಿದ್ದು ಕನ್ನಡಿಗರಾಗಿದ್ದು ಕನ್ನಡದಲ್ಲಿ ಭಾಷಣ ಮಾಡಿದ್ದು ಅತಿಶಯ ಎಂದು ನಾನು ಹೇಳಲಾರೆ. ಅವರ ಭಾಷಣದ ಮೊದಲನೇ ಪುಟದಲ್ಲಿ ಹೀಗೆ ಹೇಳಿದ್ದಾರೆ. ಅಭಿವೃದ್ಧಿ ಹೊಂದಿದ ಪ್ರದೇಶಗಳ ಬೆಳವಣಿಗೆಗೆ ಈ ದಶಕದಲ್ಲಿ ಸಾಧ್ಯವಾಗುತ್ತದೆ ಎಂದು ಭಾವಿಸಲಾಗಿತ್ತು. ಆದರೆ ಬಹುಶಃ ಮಾನವ ಕೋಟಿಯ ಪಾಲಿಗೆ ಆ ಭರವಸೆ ಪೂರ್ಣವಾಗಿ ಈಡೇರಿಲ್ಲ. ಪ್ರಗತಿಯೇ ಆಗಿಲ್ಲ ಎಂದು ಇದರ ಅರ್ಥವಲ್ಲ. ಹೀಗೆ ಹೇಳುವುದರ ಉದ್ದೇಶ—ಜನತೆ ಧೀರ ಪ್ರಯತ್ನಗಳನ್ನು ಮಾಡಿದರೂ ಬೆಳವಣಿಗೆಯ ಮುನ್ನಡೆ, ಗತಿ, ಸಾಕಷ್ಟು ತೀವ್ರವಾಗಲಿಲ್ಲ. ಫಲದ ವಿತರಣೆ ಸಮಾನವಾಗಿ ಆಗಿಲ್ಲ,..........

5-30 P.M.

ಎನ್ನುವ ಮಾತುಗಳನ್ನು ಹೇಳಿದ್ದಾರೆ. ಇಷ್ಟೊಂದು ಹೇಳಿರುವ ಅವರು ಸಮಾಜದ ದುರ್ಬಲ ವರ್ಗಗಳ ಪೋಷಣೆಯಲ್ಲಿ, ಶಿಕ್ಷಣ ಮತ್ತು ಸಾಮಾಜಿಕ ಸೇವೆಗಳನ್ನು ಸಾರ್ವತ್ರಿಕವಾಗಿ ಸುಧಾರಿಸುವುದರಲ್ಲಿ, ಗ್ರಾಮ ಮಟ್ಟದಲ್ಲಿ ಆರ್ಥಿಕ ಮತ್ತು ರಾಜಕೀಯ ಸಂಸ್ಥೆಗಳನ್ನು ಬಲಪಡಿಸಿ ಬಹುಮುಖಗೊಳಿಸುವುದರಲ್ಲಿ, ಗಣನೀಯ ಸಾಧನೆ ಈ ದಶಕದಲ್ಲಿ ಸಾಧ್ಯವಾಗಿದೆ.' ಎಂದು ಹೇಳಿದ್ದಾರೆ. ರಾಜಕೀಯ ಪಕ್ಷಗಳ ಬೆಳವಣಿಗೆ ಮತ್ತು ಪುರಸ್ಕಾರ ಮಾತ್ರ ಪೂರ್ಣವಾಗಿ ಒಂದು ಪಕ್ಷವನ್ನು ಎತ್ತಿ ಮತ್ತೊಂದನ್ನು ಬಡಿಗೊತ್ತುವ ಕಾರ್ಯಮಾಡಿದ್ದಾರೆ. ಮೈಸೂರು ರಾಜ್ಯದಲ್ಲಿಗತಕ್ಕ ಕಿವುಡ ಮಕ್ಕಳ, ಕುರುಡು ಮಕ್ಕಳ ಮತ್ತು ಅಂಗಹೀನ ಮಕ್ಕಳ ಬಗ್ಗೆ ಏನೂ ಹೇಳಿಲ್ಲ. ಸಮಾಜದಲ್ಲಿರುವ ಅಂಗಹೀನ ಮಕ್ಕಳ ಬಗ್ಗೆ, ಬಡ ಜನತೆಯ ಬಗ್ಗೆ ಕಿಂಚಿತ್ತೂ ಸಹಾಯ ಸೌಲಭ್ಯಗಳನ್ನು ನೀಡದಿರುವ ಬಗ್ಗೆ 1970—71ರ ಆಯವ್ಯಯ ಬಜೆಟ್ಟಿನಲ್ಲಿ ಅನುಕಂಪ ಪಟ್ಟು ಏನೂ ಹೇಳಿಲ್ಲ. ಮೈಸೂರು ರಾಜ್ಯದಲ್ಲಿರುವ ಅಂಗಹೀನ ಮಕ್ಕಳು ಬೇಕಾದಷ್ಟು ಇದ್ದಾರೆ. ಮೈಸೂರಿನಲ್ಲಿ ಒಂದು ಪಾಠ ಶಾಲೆ ಇದ್ದು 120 ಮಕ್ಕಳಿಗೆ ಮಾತ್ರ ವ್ಯಾಸಂಗಕ್ಕೆ ಅವಕಾಶವಿದೆ.

[MR. DEPUTY SPEAKER in the Chair]

ರಾಜ್ಯದಲ್ಲಿರುವ ಅಂಗಹೀನ ಮಕ್ಕಳ ಬೆಳವಣಿಗೆಯ ವಿಚಾರದಲ್ಲಿ ಇದೇ ರೀತಿಯಲ್ಲಿ ಮುಂದುವರಿಸಿ ಕೊಂಡು ಹೋದರೆ ರಾಜ್ಯದಲ್ಲಿ ದೊಡ್ಡ ಆಂದೋಳನವಾಗಬಹುದು.

ರಾಜ್ಯಪಾಲರು ಭಾಷಣ ಮಾಡಿದಾಗ ರಾಜ್ಯದಲ್ಲಿ ಸುಮಾರು 3,600 ಗ್ರಾಮಗಳಿಗೆ ಕಡಿಯುವ ನೀರಿನ ವ್ಯವಸ್ಥೆ ಇಲ್ಲ ಎಂದು ಹೇಳಿದ್ದಾರೆ. ಮಹಾತ್ಮ ಗಾಂಧಿ ಶತಮಾನೋತ್ಸವ ವರ್ಷದಲ್ಲಾದರೂ ಈ 3,600 ಗ್ರಾಮಗಳಿಗೆ ಕುಡಿಯುವ ನೀರನ್ನು ಕೊಡುತ್ತೇವೆಂದು ಸ್ಪಷ್ಟವಾಗಿ ಹೇಳಿಲ್ಲ. ಇದನ್ನು ನೋಡಿದರೆ ಬಹಳ ದುಃಖ ಮತ್ತು ವ್ಯಸನವಾಗುತ್ತದೆ. ತಮ್ಮ ಆಯವ್ಯಯ ಪಟ್ಟಿಯಲ್ಲಿ ತೋರಿಸಿರುವಂತೆ ಬರತಕ್ಕ 234 ಕೋಟಿ ರೂಪಾಯಿ ಹಣದಲ್ಲಿ ಸೇಕಡ 62 ಭಾಗ ಗ್ರಾಮಾಂತರ ಪ್ರದೇಶಗಳಿಂದ ಬರುತ್ತದೆ ಎಂದು ಹೇಳಿದ್ದಾರೆ. ಇನ್ನುಳಿದ 38 ಭಾಗ ಕೂಡ ಅಪ್ರತ್ಯಕ್ಷವಾಗಿ ಗ್ರಾಮಾಂತರದಿಂದಲೇ ಬರುತ್ತದೆ ಯಾವ ನಗರದವರೂ ಕೂಡ ನೇರವಾಗಿ ಕೊಡುತ್ತಿಲ್ಲ, ಗ್ರಾಮಾಂತರದಲ್ಲಿ ಉತ್ಪನ್ನವಾಗತಕ್ಕ ವಿವಿಧ ಆಹಾರ ಪದಾರ್ಥಗಳು, ಬಟ್ಟೆ ವಗೈರೆ ಬಾಬುಗಳ ಮೇಲೆ ಅಲ್ಲಿರುವವರು ಕೊಡತಕ್ಕ ತೆರಿಗೆಯೆ ವಿನಾ ಮತ್ತೇನೂ ಅಲ್ಲ. ಗ್ರಾಮಾಂತರ ಜನತೆಯ ಬಗ್ಗೆ ಏನು ಕಾರ್ಯಕ್ರಮ ಮತ್ತು ಏನೇನು ಯೋಜನೆಯನ್ನು ಕೈಕೊಂಡಿದ್ದಾರೆ ? ದೊಡ್ಡ ದೊಡ್ಡ ನಗರಗಳಲ್ಲಿ ಮಾತ್ರ ಹೌಸಿಂಗ್ ಬೋರ್ಡ್, ಹೌಸಿಂಗ್ ಕಾರ್ಪೊರೇಷನ್ ಮಾಡಿಕೊಂಡು ಅಲ್ಲಿರುವ ಪ್ರಥಮ ದರ್ಜೆ ಜನರಿಗೆ ಪೂರ್ಣ ಸಹಕಾರವನ್ನು ನೀಡಿದ್ದಾರೆ. ಬೆಂಗಳೂರಿನಲ್ಲಿ ಮೂರು ಲಕ್ಷ ಜನರು ಫುಟ್‌ಫಾತ್‌ಗಳಲ್ಲಿ ವಾಸ ಮಾಡುತ್ತಿದ್ದಾರೆ, ನಿರುದ್ಯೋಗಿಗಳು ಮತ್ತು ಫುಟ್‌ಪಾತ್ ಮೇಲೆ ಮಲಗುವವರ ಬಗ್ಗೆ ಏನಾದರೂ ಯೋಚನೆ ಮಾಡಿದ್ದಾರೆಯೇ ? ಒಂದು ಕಟ್ಟಡದ ವ್ಯವಸ್ಥೆಯನ್ನು ಮಾಡಿದ್ದಾರೆಯೇ ? ಅವರಿಗೆ ಒಂದು ಸರಿಯಾದ ಕಾಟೇಜೋ ಮನೆಯೋ ಮಾಡಿಸಿಕೊಡಬೇಕಾಗಿತ್ತು. ಆಗರ್ಭ ಶ್ರೀಮಂತರ ಹಿತಕ್ಕಾಗಿ ಸರ್ಕಾರ ಎಲ್ಲಾ ವಿಧದ ಸೌಲಭ್ಯವನ್ನು ಮಾಡುತ್ತಿದೆ. ಅವರಿಗೆ ಸಾಮಾನ್ಯ ಜನರ ಹಿತರಕ್ಷಣೆ ಮಾಡತಕ್ಕ ಶಕ್ತಿ ಸಾಮರ್ಥ್ಯ ಇಲ್ಲ. ಈಗಲಾದರೂ ಕೂಡ ಎಚ್ಚೆತ್ತುಕೊಳ್ಳದೆ ಹೋದರೆ ಅದರಿಂದ ಬಹಳ ಕೆಟ್ಟ ಪರಿಣಾಮವಾಗುತ್ತದೆ.

22 ವರ್ಷಗಳ ರಾಜ್ಯಾಡಳಿತ ನಡೆಸಿದ್ದಾರೆ. ಭಾರಿ ಕೈಗಾರಿಕೆಗಳನ್ನು ರಾಜ್ಯದಲ್ಲಿ ಸ್ಥಾಪನೆ ಮಾಡಿದ್ದಾರೆ ? ದೇಶದಲ್ಲಿ 17 ಲಕ್ಷ ಜನ ನಿರುದ್ಯೋಗಿಗಳಿದ್ದಾರೆಂದು ಮಾನ್ಯ ಕಾರ್ಮಿಕ ಸಚಿವರು ಮೊನ್ನೆ ಹೇಳಿದರು. ವಿದ್ಯಾವಂತರಾಗಲೀ, ಅವಿದ್ಯಾವಂತರಾಗಲೀ ಪ್ರತಿವರ್ಷ ಎಷ್ಟು ಜನರಿಗೆ ಉದ್ಯೋಗವನ್ನು ಒದಗಿಸಿಕೊಡುತ್ತಇದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಲಿಲ್ಲ ನಿರುದ್ಯೋಗ ನಿವಾರಣೆ ಕಿಂಚಿತ್ತೂ ಆಗಿಲ್ಲ. ಸರ್ಕಾರ ಮಾಡಿರತಕ್ಕ ಕಾರ್ಯಗಳೆಲ್ಲಾ ದಿನಚರಿಯದು. ಸತ್ಯಾಗ್ರಹ, ಉಪವಾಸ, ನಡೆದು ಕಾರ್ಮಿಕರಿಗೆ ಸಂಬಳ ಕೊಡದೆ ಇರುವ ವ್ಯವಸ್ಥೆ ಇದೆ. ಬೆಳಗೊಳದ ರಸಾಯನಿಕ ಕಾರ್ಖಾನೆಯಲ್ಲಿ ಒಂದು ಸಾವಿರ ಜನ ಕೆಲಸ ಮಾಡುತ್ತಿದ್ದರು. ಈಗ ಕೇವಲ 180 ಜನ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಬೆಳಗೊಳ ಕಾಗದದ ಕಾರ್ಖಾನೆ ಯಲ್ಲಿ ನಾಲ್ಕು ಸಾವಿರ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ದಿನ ಅಲ್ಲಿರುವವರು 400 ಜನ ಮಾತ್ರ. ಈ ಕಾರ್ಖಾನೆಗಳಿಂದ ಕ್ರಮವಾಗಿ 4 ಲಕ್ಷ ರೂಪಾಯಿ ಮತ್ತು 9 ಲಕ್ಷ ರೂಪಾಯಿ ವಿದ್ಯುಚ್ಛಕ್ತಿಯ ಬಾಬತು ಬಾಕಿ ಇದೆ. ಅವರು ಅದನ್ನು ಕೊಡುವುದಕ್ಕೆ ಸಾಧ್ಯವೇ ? ಈ ರೀತಿ

(ಶ್ರೀ ಬಿ. ದೊಡ್ಡಬೋರೇಗೌಡ)

ಯಾದರೆ ಕಾರ್ಖಾನೆಗಳ ಪ್ರಗತಿಯೂ ಆಗುವುದಿಲ್ಲ, ನಿರುದ್ಯೋಗಿಗಳಿಗೆ ಕೆಲಸವೂ ಸಿಕ್ಕುವುದಿಲ್ಲ. ಇದನ್ನು ಕೂಡಲೇ ಬಗೆಹರಿಸಬೇಕು.

ಕುಡಿಯುವ ನೀರಿಗೆ ಮತ್ತು ತಿನ್ನುವ ಅನ್ನಕಾಗಿ ಬವಣೆ ಪಡತಕ್ಕ ಕ್ಲಿಷ್ಟ ಸಮಸ್ಯೆಗಳಿವೆ. ಗ್ರಾಮಾಂತರದಲ್ಲಿ ಜನತೆ ಯಾವರೀತಿಯ ಜೀವನ ನಡೆಸುತ್ತಿದ್ದಾರೆ, ಅವರ ಜೀವನಕ್ಕೆ ಇರತಕ್ಕ ಅಡ್ಡಿ ಆತಂಕಗಳೇನು, ಎಷ್ಟು ಕಷ್ಟ ಕಾರ್ಪಣ್ಯದಲ್ಲಿದ್ದಾರೆ. ಎನ್ನುವುದರ ಬಗ್ಗೆ ಸಹಿತ ವಿಚಾರ ಮಾಡಿಲ್ಲ. ನಿಮ್ಮ ನೆರವು ಹೋಗತಕ್ಕುದು ದೊಡ್ಡ ದೊಡ್ಡ ನಗರಗಳಿಗೆ. ಅಲ್ಲಿನ ವಿಚಾರಗಳಿಗೆ ಮಾತ್ರ ಗಮನ ಕೊಡುತ್ತಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿ, ಭೂ ಅಭಿವೃದ್ಧಿ ಬ್ಯಾಂಕ್, ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿವೆ, ಇವುಗಳಿಂದ ರಾಜ್ಯದ ಹಿತಸಾಧನೆಯಾಗುತ್ತದೆ ಎಂದು ಹೇಳಿದ್ದಾರೆ. ಅವರಿಗೆ ಒದಗಿಸಿರುವ ಹಣವೆಷ್ಟು, ಅಲ್ಲಿರತಕ್ಕ ಜನಸಂಖ್ಯೆ ಏನು, ಆ ಜನರ ಕಷ್ಟ ಕಾರ್ಪಣ್ಯಗಳೇನು ಎನ್ನುವ ಅರಿವು ಇದೆಯೇ ?

ಅಲ್ಲಿರುವ ಸಹಕಾರ ಸಂಘಗಳೆಲ್ಲಾ ಅಸಹಕಾರ ಸಂಘಗಳಾಗಿವೆ. ದೇಶವಲ್ಲಿ ಕೋಟಿ ಗಟ್ಟಲೆ ಹಣ ದುರ್ವ್ಯಯವಾಗಿದೆ. ನಿಜವಾಗಿ ಒಳ್ಳೆಯ ಕೆಲಸ ಎಲ್ಲಿಯೂ ಆಗುತ್ತಿಲ್ಲ. ಸರ್ಕಾರದಿಂದ ನಾಮಕರಣವಾದಂಥ ಜನ ಒಂದು ಗುಂಪುಗಳನ್ನು ನಿರ್ಮಾಣ ಮಾಡಿದ್ದೀರಿ. ಮಂಡ್ಯ ಜಿಲ್ಲೆಯ ಒಂದು ಬೃಹತ್ ಸಹಕಾರ ಸಂಘದಲ್ಲಿ 81 ಸಾವಿರ ರೂಪಾಯಿಗಳನ್ನು ಮ್ಯಾನೇಜರ್ ಡ್ರಾ ಮಾಡಿದ್ದಾರೆ. 2 ವರ್ಷಗಳಲ್ಲಿ ಈಗ 15 ದಿವಸಗಳಲ್ಲಿ ಅದನ್ನು ಜಮಾ ಮಾಡಿರಬಹುದು. ಸರ್ಕಾರದ ಆಡಿಟರ್ ಅವರು ಆ ಸಂಘದ ಲೆಕ್ಕಗಳನ್ನು ಆಡಿಟ್ ಮಾಡಿಕೊಂಡು ಬಂದಿದ್ದಾರೆ. ಇದೆಲ್ಲಾ ಹೇಗೆ ಆಗಿದೆ ಎಂಬುದನ್ನು ಆಡಿಟರುಗಳು ಕಂಡು ಹಿಡಿದಿದ್ದಾರೆಯೇ ಎನ್ನುವುದನ್ನು ಯೋಚನೆ ಮಾಡಿ. ಸಂಬಂಧಪಟ್ಟ ಸಚಿವರಿಗೆ ಆರು ತಿಂಗಳ ಹಿಂದೆ ಒಂದು ಕಾಗದ ಬರೆದೆ. ಅದಕ್ಕೆ ಇನ್ನೂ ಉತ್ತರವಿಲ್ಲ. ನಿಮ್ಮ ಅಧಿಕಾರ ಸರಿಯಾಗಿ ಮುಂದುವರಿಯಬೇಕಾದರೆ, ಸಹಕಾರ ಸಂಘಗಳನ್ನು ಮುಚ್ಚಿಬಿಡಿ. ನಾನು ಆಗಲೇ ಹೇಳಿದಂತೆ ಸಹಕಾರ ಸಂಘಗಳೆಲ್ಲ ಅಸಹಕಾರ ಸಂಘಗಳಾಗಿವೆ. ಅಲ್ಲಿರುವವರನ್ನು ಇಳಿಸುವುದಕ್ಕೆ ಪ್ರಯತ್ನಮಾಡಿದರೆ ನೀವು ಇಳಿಯಬೇಕಾಗುತ್ತದೆ. ದೇಶಕ್ಕೆ ಒಳ್ಳೆಯದಾಗಬೇಕಾಗಿದ್ದರೆ ಈ ಸಹಕಾರ ಸಂಘಗಳ ಸರಿಯಾದ ಒಂದು ವ್ಯವಸ್ಥೆಯನ್ನು ಮಾಡಬೇಕಾದುದ್ದು ಅತಿಮುಖ್ಯ. ಈ ಬಗ್ಗೆ ಸರಿಯಾದ ಮುಂಜಾಗ್ರತೆ ಕ್ರಮ ಕೈಗೊಳ್ಳದಿದ್ದಲ್ಲಿ ಕ್ರಾಂತಿಯಾದೀತು.

ಆಹಾರ ಧಾನ್ಯದ ಬಗ್ಗೆ ಏನೂ ಹೇಳಿಲ್ಲ. ಒಂದು ಎಕರೆಗಿಂತ ಕಡಮೆ ಇರುವವರಿಂದ ಲೆವಿ ವಸೂಲು ಮಾಡುವುದಿಲ್ಲವೆಂದು ಹೇಳಿದ್ದರೂ 10 ಗುಂಟೆ ಜಮೀನು ಇರುವವರಿಂದಲೂ ವಸೂಲು ಮಾಡಿದ್ದಾರೆ. ಹೀಗಿದ್ದರೂ ಕೂಡ ಗ್ರಾಮಾಂತರದಲ್ಲಿರುವ ರೈತರಿಗೆ ಒಂದು ವಾರಕ್ಕೆ ಐದು ಕೆ.ಜಿ. ಧಾನ್ಯವನ್ನು ಕೊಡುತ್ತಿಲ್ಲ ! ಗ್ರಾಮಾಂತರದಲ್ಲಿರುವ ಜನರ ವಿಚಾರದಲ್ಲಿ ಏನಾದರೂ ಕರುಣೆ ಪಟ್ಟಿದ್ದೀರಾ ಎಂದು ಕೇಳುತ್ತೇನೆ. ಗ್ರಾಮಾಂತರಗಳಲ್ಲಿರುವ ದಿನಚರಿ ಇರುವ ಅನ್ನಸಮಸ್ಯೆ ಬಗ್ಗೆ ಜವಾಬ್ದಾರರು ಯಾರು ! ಗ್ರಾಮಾಂತರ ಪ್ರದೇಶದಲ್ಲಿರುವ ಸಹಕಾರ ಸಂಘಗಳಿಂದ ಆಗಿರತಕ್ಕ ಹಾನಿಯನ್ನು ಯಾವ ರೀತಿ ಸರಿಪಡಿಸುತ್ತೀರಾ ! ಮಂಡ್ಯ ಸಕ್ಕರೆ ಕಾರ್ಖಾನೆಗೆ 1962—63 ರಲ್ಲಿ ಕೇಂದ್ರ ಸರಕಾರವು ಎರಡೂವರೆ ಸಾವಿರ ಟನ್ ಕಬ್ಬು ಅರೆಯುವುದಕ್ಕೆ ಲೈಸೆನ್ಸ್ ಮಂಜೂರು ಮಾಡಿದೆ. ಈ ಸಕ್ಕರೆ ಕಾರ್ಖಾನೆಯ ಯಂತ್ರೋಪಕರಣಕ್ಕಾಗಿ ಮೂರು ಕಾಲು ಕೋಟಿ ಹಣ ಖರ್ಚು ಮಾಡಿದೆ. ನಿಮ್ಮವರೇ ಇದಕ್ಕೆ ಅಧ್ಯಕ್ಷರಾಗಿದ್ದಾರೆ. ಅವರು ಎರಡು ಪ್ರೆಸ್ ನೋಟ್ ಕೊಟ್ಟು ಯಂತ್ರ ರಿಪೇರ್ ಮಾಡಿಸಬೇಕಾಗಿದೆ ಎಂದು ತಿಳಿಯಪಡಿಸಿದ್ದಾರೆ. ಮೂರು ವರ್ಷದಿಂದ ಕಬ್ಬನ್ನು ಈ ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಅರೆಯಲಿಲ್ಲ ಯಾಕೆಂದರೆ ಮೆಷಿನ್ ದುರಸ್ತಿಯಾಗಬೇಕು ಎಂದು ಹೇಳಿದ್ದಾರೆ. ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ಮಾಡದೇ ಇರುವುದರಿಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಾ ? ಈ ಕಾರ್ಖಾನೆಯಲ್ಲಿ ಹತ್ತು ಸಾವಿರ ಕಾರ್ಮಿಕರ ಹಿತ ದೃಷ್ಟಿಯಿಂದ ವಿಚಾರಣೆ ನಡೆಸುತ್ತೀರಾ ? ಆ ಧೈರ್ಯ ಇದೆಯೇ? ಒಂದು ವರ್ಷದಿಂದ ಕಬ್ಬನ್ನು ಅರೆದಿಲ್ಲ. ಎರಡು ಸಾವಿರ ಟನ್ ಕಬ್ಬು ಅರೆಯಬಹುದಾಗಿತ್ತಲ್ಲವೇ ? 1 ಕೋಟಿ 120 ಲಕ್ಷ ರೂಪಾಯಿಗಳ ಹೊಸ ಮೆಷಿನರಿಗೆ ಆರ್ಡರ್ ಕೊಟ್ಟಿದ್ದೇವೆ ಎಂದು ಹೇಳಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ನಿಮ್ಮನ್ನು ಚೇರಮನ್ ಮಾಡಿದರೆ ಸರಿಪಡಿಸುತ್ತೀರಾ ?

ಶ್ರೀ ಬಿ. ದೊಡ್ಡಬೋರೇಗೌಡ.—ನಾನು ಚೇರಮನ್ನೂ ಆಗುವುದಿಲ್ಲ, ಮಂತ್ರಿಯೂ ಆಗುವುದಿಲ್ಲ. ಈ ಪಾಪದ ಪ್ರಾಯಶ್ಚಿತ್ತಾ ನೀವು ಅನುಭವಿಸುತ್ತೀರಿ ಎಂದು ಇಷ್ಟು ಮಾತ್ರ ಹೇಳಿ, ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಲ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಮಂತ್ರಿಗಳು ಈ ವರ್ಷದ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಾ ಸೊಗಸಾದ ಕನ್ನಡದಲ್ಲಿ ಭಾಷಣ ಮಾಡಿದ್ದು ಬಹಳ ಸಂತೋಷವಾಯಿತು. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಟ್ಯಾಕ್ಸ್ ಹೆಚ್ಚು ಹಾಕಿದ್ದಾರೆ ಎಂದು ಕೆಲವು ಸದಸ್ಯರು ಟೀಕೆ ಮಾಡಿದರು. ಆದರೆ ರೈತನಿಗೋಸ್ಕರ ನೀರಾವರಿ ಬಾವಿ ಬೇಕು, ಡ್ಯಾಮ್ ಬೇಕು ಎಂದು ನಾವೇ ಕೇಳುತ್ತೇವೆ. ಸರಕಾರ ಈ ಕೆಲಸಗಳನ್ನು ಮಾಡಿ ಕೊಡುತ್ತದೆ. ಅದಕ್ಕೆ ಹಣಬೇಕು. ಸರಕಾರ ಸಾಲ ಮಾಡಿ ಹಣ ತರಬೇಕಾಗುತ್ತದೆ. ಇಲ್ಲವೆ ಟ್ಯಾಕ್ಸ್ ಹೆಚ್ಚಿಸಿ ಹಣ ಒದಗಿಸಬೇಕಾಗುತ್ತದೆ. ಟ್ಯಾಕ್ಸ್ ಹೆಚ್ಚಿಸಿ ರೈತನನ್ನು ಹಾಳು ಮಾಡುತ್ತೀರಿ ಎಂದು ಹೇಳುವವರೂ ಅವರೇ, ರೈತನಿಗೆ ಇದು ಬೇಕು ಅದು ಬೇಕು ಎಂದು ಹೇಳುವವರೂ ಅವರೇ. ಸರಕಾರಕ್ಕೆ ಸರಿಯಾದ ಸಲಹೆ ಕೊಡಬೇಕು. ರೋಡ್ ಬೇಕು, ಬಡವರಿಗೆ ಬಾವಿ ಬೇಕು, ಹರಿಜನ ಗಿರಿಜನರಿಗಾಗಿ ಸ್ಕೂಲು ಬೇಕು, ದವಾಖಾನೆ ಬೇಕು ಎಂದು ನಾವೇ ಒತ್ತಿ ಒತ್ತಿ ಹೇಳುತ್ತೇವೆ. ಬಹುಮಟ್ಟಿಗೆ ಈ ಕೆಲಸ ಕಾರ್ಯಗಳು ಆಗುತ್ತಾ ಇವೆ. ಆದರೂ ಕೂಡ ಇವು ಇನ್ನೂ ಹೆಚ್ಚಿಗೆ ಆಗಬೇಕು ಎಂದು ಸರಕಾರಕ್ಕೆ ಮನವಿ ಮಾಡಿಕೊಂಡು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಹರಿಜನ ಗಿರಿಜನರಿಗಾಗಿ ಆಸ್ಪತ್ರೆ, ಸ್ಕೂಲು, ಹಾಸ್ಟಲು ಒದಗಿಸುವ ವ್ಯವಸ್ಥೆ ಮಾಡಲು ಸರಕಾರ ಮನಸ್ಸು ಮಾಡಬೇಕು. ಯಾಕೆಂದರೆ ಹರಿಜನರು ಗಿರಿಜನರು ನಮ್ಮ ಮಕ್ಕಳು ಅವರು ನಮ್ಮ ಒಡಹುಟ್ಟಿದವರು ಅವರು ಹಿಂದುಳಿದಿದ್ದಾರೆ, ಅವರನ್ನು ಮುಂದಕ್ಕೆ ತರಬೇಕು ಎಂದು ಯಾರು ಭಾವಿಸುತ್ತಾರೋ ಅವರೇ ನಮ್ಮ ಪಾಲಿಗೆ ದೇವರು ಎಂದು ನಾನು ತಿಳಿದುಕೊಳ್ಳುತ್ತೇನೆ. ಹಳ್ಳಿಗಳಲ್ಲಿ ಹರಿಜನರ ಗಿರಿಜನರ ಪರಿಸ್ಥಿತಿ ಬಹಳ ಕಷ್ಟದ್ದಾಗಿದೆ. ಆದುದರಿಂದ ಈ ವಿಚಾರ ಮನಸ್ಸಿಗೆ ತೆಗೆದುಕೊಂಡು ಅವರ ಕುಂದು ಕೊರತೆಗಳನ್ನು ನಿವಾರಿಸಬೇಕು ಎಂದು ಪದೇ ಪದೇ ಹೇಳುತ್ತೇನೆ. ಹರಿಜನರು ಗಿರಿಜನರು ನಮ್ಮ ಮಕ್ಕಳು ಎಂದು ಭಾವನೆ ಮಾಡಿಕೊಂಡು, ಅವರಿಗೆ ಉತ್ತೇಜನ ಕೊಟ್ಟು ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ತುಮಕೂರಿನಲ್ಲಿ ಒಂದು ವಿದ್ಯಾಸಂಸ್ಥೆಯವರು ಒಂದು ಕಾಲೇಜು ಹಾಸ್ಟಲ್ ಮಾಡಿದ್ದಾರೆ. ಈ ಹಾಸ್ಟೆಲ್ಲಿನಲ್ಲಿ ಹರಿಜನ ವಿದ್ಯಾರ್ಥಿಗಳನ್ನು ಒಂದು ಕಡೆ ಕೂಡಿಸಿ ಊಟಕ್ಕೆ ಹಾಕುತ್ತಾರೆ. ಲಿಂಗಾಯುತ ವಿದ್ಯಾರ್ಥಿಗಳಿಗೆ ಇನ್ನೊಂದು ಕಡೆ ಹಾಕುತ್ತಾರೆ, ಬ್ರಾಹ್ಮಣರಿಗೆ ಬೇರೆ ಕಡೆ ಊಟಕ್ಕೆ ಹಾಕುತ್ತಾರೆ ಎಂದು ನಾನು ಕೇಳಿದ್ದೇನೆ. ನಾನು ಸ್ವತಃ ನೋಡಿಲ್ಲ. ಅದು ಇದ್ದರೂ ಇರಬಹುದು. ಆದರೆ ಹೀಗೆ ಪ್ರತ್ಯೇಕವಾಗಿ ಹರಿಜನರಿಗೆ ಊಟಕ್ಕೆ ಹಾಕುವ ವ್ಯವಸ್ಥೆ ಮಾಡಬಾರದು. ತುಮಕೂರಿನ ಸಿದ್ಧಗಂಗಾ ಮಠದ ಮಹಾ ಸ್ವಾಮಿಗಳಿಗೆ ಇಂಥ ಭಾವನೆ ಏತಕ್ಕೆ ಬಂದಿತೋ ಗೊತ್ತಿಲ್ಲ. ಇಂಥ ಭಾವನೆ ಅವರಲ್ಲಿ ಬರಬಾರದು. ಎಲ್ಲರನ್ನೂ ಒಟ್ಟಿಗೆ ಸೇರಿಸಬೇಕು, ಒಟ್ಟಿಗೆ ಓದಿಸಬೇಕು ಎಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಸ್ಪೆಷಲ್ ಗ್ರ್ಯಾಂಟ್ ಬಜೆಟ್ಟಿನಲ್ಲಿ ಒದಗಿಸಿರುವುದನ್ನು ಇನ್ನೂ ಹೆಚ್ಚಿಸಬೇಕು ಎಂದು ಹಣ ಕಾಸಿನ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಹರಿಜನರಿಗಾಗಿ ಸ್ಕೂಲು ಹಾಸ್ಟೆಲ್ ಮಾಡಬೇಕು. ಇವರು ವಿದ್ಯಾವಂತರಾದರೆ ಮುಂದಕ್ಕೆ ಬರುತ್ತಾರೆ. ಈ ವಿಚಾರವನ್ನು ಸರಕಾರ ದುರ್ಲಕ್ಷ್ಯದಿಂದ ನೋಡುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಸರಕಾರಿ ಅಧಿಕಾರಿಗಳು ಕೂಡ ಅನೇಕರು ಒಳ್ಳೆಯವರು ಆಗಿದ್ದಾರೆ. ಎಲ್ಲಿಯೋ ಸಣ್ಣ ಪುಟ್ಟ ದೋಷಗಳು ಇರುತ್ತವೆ. ಆದರ ಬಗ್ಗೆ ವಿರೋಧ ಪಕ್ಷದವರು ಏನೇನೋ ಗೊಂದಲ ಮಾಡಿ ಸರಕಾರವನ್ನು ಟೀಕಿಸುತ್ತಾರೆ. ಕೆಲವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಹೋಗಿದ್ದರೂ ಕಾಂಗ್ರೆಸ್ಸನ್ನು ಬೈಯುತ್ತಾರೆ. ಕಾಂಗ್ರೆಸ್ ಸರಕಾರ ಒಳ್ಳೇ ಕೆಲಸ ಕಾರ್ಯಗಳನ್ನು ಮಾಡುತ್ತಿದೆ. ಸರಕಾರಕ್ಕೆ ರಚನಾತ್ಮಕ ಸಲಹೆ ಮಾಡಬೇಕು. ನಮ್ಮ ಪ್ರದೇಶದಲ್ಲಿ ಜನರು ಬಹಳ ಹಿಂದುಳಿದಿದ್ದಾರೆ. ನೀರಾವರಿ ಸೌಲಭ್ಯ ಮೂರು ತಾಲ್ಲೂಕುಗಳಿಗೆ ಬಂದಿದೆ. ರೈತರ ಹಿತ ದೃಷ್ಟಿಯಿಂದ ನಮ್ಮ ಜಿಲ್ಲೆಯ ನೀರಾವರಿ ಯೋಜನೆಗೆ ಹೆಚ್ಚು ಹಣ ಒದಗಿಸಬೇಕು ಎಂದು ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ದವಾಖಾನೆ ಇರುವ ಊರಿನಿಂದ ಡಾಕ್ಟರು ಹಳ್ಳಿಗಳಿಗೆ ಹೋಗಬೇಕಾದರೆ ನಡೆದುಕೊಂಡು ಹೋಗಬೇಕಾಗುತ್ತದೆ. ಆದುದರಿಂದ ಹಳ್ಳಿಗಳಿಗೆ ಡಾಕ್ಟರರು ಹೋಗುವುದಿಲ್ಲ. ಹಳ್ಳಿಗಳಿಗೆ ಹೋಗುವುದಕ್ಕಾಗಿ ಡಾಕ್ಟರಿಗೆ ಒಂದು ಜೀಪು ಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಹರಿಜನ ಗಿರಿಜನರಿಗೆ ಭೂಮಿ ಹಂಚುವುದಕ್ಕಾಗಿ ಒಂದು ಸಮಿತಿ ಮಾಡಿದ್ದೇವೆ ಎಂದು ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಹರಿಜನ ಗಿರಿಜನರು ಬಡವರಾಗಿರುವುದರಿಂದ ದುಡ್ಡು

(ಶ್ರೀಮತಿ ನಾಗಮ್ಮ)

ಕೊಡುವುದಕ್ಕೆ ಅವರಿಂದ ಸಾಧ್ಯವಿಲ್ಲ. ಆದುದರಿಂದ ಅವರಿಂದ ದುಡ್ಡು ತೆಗೆದುಕೊಳ್ಳದೆ ನಾಲ್ಕು ಎಕರೆ ಐದು ಎಕರೆ ಭೂಮಿ ಕೊಟ್ಟು ಬಿಡುವ ವ್ಯವಸ್ಥೆ ಮಾಡಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಹಣಕಾಸಿನ ಮಂತ್ರಿಗಳು 1970—71 ನೆಯ ಸಾಲಿನ ಆಯವ್ಯಯಪಟ್ಟಿಯನ್ನು ಈಗ ತಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ರಾಜ್ಯದ ಹಣಕಾಸಿನ ಮಂತ್ರಿಗಳು ಸ್ವಲ್ಪ ವಿಚಾರವಂತರೂ ಹೌದು ಅವರು ತಮ್ಮ ಬಗ್ಗೆ ಒಳ್ಳೆಯ ಅಭಿಪ್ರಾಯಗಳನ್ನು ಬೆಳೆಸಿಕೊಂಡು ಬಂದಿದ್ದಾರೆ. ಇವರು ಸಮತಾವಾದ ಸಮಾಜದಲ್ಲಿ ಒಳ್ಳೆಯ ನಂಬಿಕೆಯನ್ನು ಇಟ್ಟುಕೊಂಡಿರತಕ್ಕವರು ಎಂದು ಹೇಳುವುದು ಅವರ ಮುಖ ಸ್ತುತಿಗಾಗಿ ಹೇಳುವ ಮಾತಲ್ಲ. ಕಳೆದ ಆರು ವರ್ಷಗಳಲ್ಲಿ ನಾನು ಈ ಮನೆಗೆ ಸದಸ್ಯನಾಗಿ ಬಂದು ಮೂರು ವರ್ಷಗಳಾಯಿತು, ಈ ಅವಧಿಯ ಪ್ರತಿ ಸಾಲಿನಲ್ಲೂ ನಮ್ಮ ಹಣಕಾಸಿನ ಸಚಿವರು ರಾಜ್ಯದ ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ. ಆದರೆ ನಾನೊಬ್ಬ ಅರ್ಥಶಾಸ್ತ್ರಾಭ್ಯಾಸದ ವಿದ್ಯಾರ್ಥಿಯಾಗಿದ್ದುದರಿಂದ ನಾನು ಮೊದಲಿಂದಲೂ ಇವರು ಮಂಡಿಸತಕ್ಕ ಆಯವ್ಯಯ ಪಟ್ಟಿಯ ಬಗ್ಗೆ ಕುತೂಹಲವುಳ್ಳವನಾಗಿದ್ದೆನು, ಮತ್ತು ಇವರು ಮಂಡಿಸುತ್ತಿದ್ದ ಆಯವ್ಯಯ ಪಟ್ಟಿಗಳನ್ನೆಲ್ಲಾ ನಾನು ಅವಲೋಕನ ಮಾಡುತ್ತಿದ್ದೆನು. ಆದ್ದರಿಂದ ನನಗೇನು ಇವರ ವಿಚಾರದಲ್ಲಿ ಒಂದು ತಿಳಿಯಬಂದಿತೆಂದರೆ—ಇವರು ಬೆಳೆಸಿಕೊಂಡು ಬಂದ ಅನೇಕ ಅಭಿಪ್ರಾಯಗಳು ಏನಿವೆ ಅವುಗಳನ್ನು ನಾನು ಅಭ್ಯಾಸಮಾಡಿದ್ದರಲ್ಲಿ ಮಾನ್ಯ ಸಚಿವರು ಕೆಲವು ಇಕ್ಕಟ್ಟುಗಳಿಗೆ ಸಿಕ್ಕಿಕೊಂಡೋ ಅಥವಾ ಯಾವುದೋ ಒಂದು ಮಿತಿಗೊಳಗಾಗಿರಬೇಕೆಂಬ ಕಡ್ಡಾಯದಿಂದಲೋ ಏನೋ ಅವರಿಗೆ ಈ ಸಮತಾವಾದ ಸಮಾಜದಲ್ಲಿ ಅವರಿಟ್ಟಿದ್ದ ನಂಬಿಕೆ ದಿನ ದಿನಕ್ಕೂ ದೂರವಾಗುತ್ತಿದೆಯೋ ಏನೋ ಅಂತ ನನಗೆ ಅನಿಸುತ್ತಿದೆ. ಏಕೆಂದರೆ ಮಾನ್ಯ ಸಚಿವರು ತಮ್ಮ ಆಯವ್ಯಯದ ಭಾಷಣದಲ್ಲಿ ಅಲ್ಲಲ್ಲೇ ಕೆಲವು ಸಮತಾವಾದ ಸಮಾಜದ ಅಭಿಪ್ರಾಯಗಳನ್ನು ಸೂಚನೆ ಮಾಡಿದ್ದರೂ ಅವುಗಳೆಲ್ಲಾ ಬಹಳ ಜಾಣತನದಿಂದ ಕೂಡಿದವುಗಳಾಗಿರುತ್ತವೆ. ಮಾನ್ಯ ಸಚಿವರು ರಾಜ್ಯದಲ್ಲಿರತಕ್ಕ ಪ್ರಜೆಗಳ ಮೇಲೆ ಕೇವಲ ಕರಭಾರವೊಂದನ್ನೇ ಅಲ್ಲದೆ ಋಣಭಾರವನ್ನೂ ಕೂಡ ಹೇರಿದ್ದಾರೆ, ಇನ್ನು ರಾಜ್ಯದ ಆಸ್ತಿಪಾಸ್ತಿಗಳನ್ನೂ ಮತ್ತು ಸಂಪತ್ತನ್ನೂ ಹೆಚ್ಚು ಮಾಡುವುದರಲ್ಲಿ ಇವರು ತಾಳಿರತಕ್ಕ ಆರ್ಥಿಕ ಸಮಾವೇಶದ ಧ್ಯೇಯ ಧೋರಣೆಗಳೇನಿವೆ ಅವು ತಮ್ಮ ಕಾರ್ಯವನ್ನು ಸಾಧಿಸಲು ಮಾಡಿರತಕ್ಕ ಸಂಘ ಸಂಸ್ಥೆಗಳಲ್ಲಿ ಹಣವನ್ನು ತೊಡಗಿಸುವ ಕೆಲಸದಲ್ಲಿ ರಾಜ್ಯದಲ್ಲಿ ಬಹುಮಟ್ಟಿನ ಜನರು ಅವಲಂಬಿಸಿರತಕ್ಕ ಕಸುಬಾದ ವ್ಯವಸಾಯವನ್ನು ಮತ್ತು ಅದರಲ್ಲಿ ತೊಡಗಿರತಕ್ಕ ವ್ಯವಸಾಯಗಾರರ ಕಲ್ಯಾಣವನ್ನು ಸಾಧಿಸತಕ್ಕ ಬಗ್ಗೆ ಅವುಗಳಲ್ಲಿ ತೊಡಗಿಸಿರತಕ್ಕ ಹಣ ಒಂದು ದಶಕದಿಂದ ಇನ್ನೊಂದು ದಶಕಕ್ಕೆ ಹೋಗುವಷ್ಟು ಹಣವನ್ನು ತೊಡಗಿಸಿದ್ದಾರೆಯೇ ಅನ್ನುವುದನ್ನು ನೋಡುವುದಕ್ಕಾಗಿ ನಾನು ಒಂದು ಪ್ಯಾರಾದಿಂದ ಇನ್ನೊಂದು ಪ್ಯಾರಾಕ್ಕೆ ಗಮನವನ್ನು ಹರಿಸಿದಾಗ ಅದರಲ್ಲಿ ಕೊಟ್ಟಿರತಕ್ಕ ಅಂಶಗಳನ್ನು ನಾವು ಒಳಹೊಕ್ಕು ಆಳವಾಗಿ ಆಲೋಚನೆ ಮಾಡಿ ನೋಡಿದ್ದೇ ಆದರೆ ಇವರು ರಾಜ್ಯದ ಆಸ್ತಿಪಾಸ್ತಿಗಳನ್ನಾಗಲೀ ಸಂಪತ್ತನ್ನಾಗಲೀ ಜಾಸ್ತಿಮಾಡಲು ಸರ್ಕಾರದವರು ಸ್ಥಾಪನೆ ಮಾಡಿರತಕ್ಕ ಈ ಎಲ್ಲಾ ಕೈಗಾರಿಕೆಗಳೇನಿವೆ ಅವು, ರಾಜ್ಯದಲ್ಲಿ ಕೈಗೊಳ್ಳಲಾಗಿರುವ ಎಲ್ಲ ದೊಡ್ಡ ದೊಡ್ಡ ನೀರಾವರಿಯೋಜನೆಗಳೂ ಮತ್ತು ವಿದ್ಯುತ್ಪಾದನಾ ಕೇಂದ್ರಗಳೂ ಇತ್ಯಾದಿ ರಾಜ್ಯದ ಅಪಾರ ಬಂಡವಾಳವನ್ನು ಹಾಕಿ ನಡೆಸಲಾಗುತ್ತಿರುವ ಅನೇಕ ಸಂಘ ಸಂಸ್ಥೆಗಳಲ್ಲಿ ಹಾಗೂ ಕೇಂದ್ರದಿಂದ ದೊರೆತ ಧನಸಹಾಯವನ್ನೂ ಸಹಾ ತೊಡಗಿಸಿರತಕ್ಕ ಈ ಎಲ್ಲಾ ಸಂಸ್ಥೆಗಳಲ್ಲೂ ಮೇಲ್ವಿಚಾರಣೆ ನೋಡಿಕೊಳ್ಳತಕ್ಕ ಅಧಿಕಾರಿಗಳೇನಿದ್ದಾರೆ ಅವರು ಮತ್ತು ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿರತಕ್ಕ ಮಂತ್ರಿಮಂಡಳ ಮತ್ತು ಈ ಉದ್ಯಮದಲ್ಲಿ ಕೆಲಸಕಾರ್ಯಗಳನ್ನು ನಡೆಸತಕ್ಕ ಕಂಟ್ರಾಕ್ಟರುಗಳು ಈ ಮೂರು ಗುಂಪಿನ ಜನರೂ ಒಂದಾಗಿ ಹಾಕಿರತಕ್ಕ ಬಂಡವಾಳಕ್ಕೆ ಎಷ್ಟರಮಟ್ಟಿಗೆ ರಾಜ್ಯದ ಆಸ್ತಿಯನ್ನು ರೂಢಿಸಬಹುದಿತ್ತೋ ಅಷ್ಟರ ಮಟ್ಟಿಗೆ ರೂಢಿಸದೆ ಈ ಮೂರು ವರ್ಗದ ಜನರು ತಮ್ಮ ತಮ್ಮ ಅಭಿವೃದ್ಧಿಯನ್ನು ರೂಢಿಸುವುದಕ್ಕಾಗಿ ಹಣವನ್ನು ಹಂಚಿಕೊಂಡಿದ್ದಾರೇನೋ ಎಂಬ ಅನುಮಾನ ಯಾರಿಗಾದರೂ ಬರುತ್ತದೆ.

ಇನ್ನು ಇದೇ ರೀತಿಯಾಗಿ ಜನ ಸಾಮಾನ್ಯರ ಏಳಿಗೆಯ ಸಾಧನೆಗಾಗಿ ಮತ್ತು ಅವರ ನಾನಾ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ರಾಜ್ಯದಲ್ಲಿ ತಾಲ್ಲೂಕಾ ಮಟ್ಟದಲ್ಲೂ ಮತ್ತು ಜಿಲ್ಲಾ ಮಟ್ಟದಲ್ಲೂ ತಾಲ್ಲೂಕ್ ಹಾಗೂ ಜಿಲ್ಲಾ ಅಭಿವೃದ್ಧಿಮಂಡಳಿಗಳನ್ನೂ ಹಾಗೂ ಭೂ ಅಭಿವೃದ್ಧಿ ಬ್ಯಾಂಕುಗಳನ್ನೂ ಮತ್ತು ಮಾರ್ಕೆಟಿಂಗ್ ಸೊಸೈಟಿಗಳನ್ನೂ ಸ್ಥಾಪನೆ ಮಾಡಿದ್ದಾರೆ. ಅವುಗಳು

ಕೆಲಸ ಮಾಡುತ್ತಿರುವುದನ್ನು ನೋಡಿದರೆ ಅವು ಪ್ರಜಾಪ್ರಭುತ್ವದ ದಾರಿಯನ್ನು ಬಿಟ್ಟು ಬೇರೆ ಯಾವುದೋ ಹಾದಿಯನ್ನು ಹಿಡಿದು ಹೊರಟಂತೆ ಕಾಣುತ್ತಿದೆ. ಈ ಸಂಘ ಸಂಸ್ಥೆಗಳಿಗೆ ಜನರು ಪ್ರಜಾಪ್ರಭುತ್ವದ ತಳಹದಿಯ ಮೇಲೆ ಆರಿಸಿ ಬರುವಂತಿಲ್ಲ. ಅಲ್ಲಿಗೆ ಆರಿಸಿ ಬರತಕ್ಕವರೆಲ್ಲರೂ ಸಾಮಾನ್ಯವಾಗಿ ಒಂದೇ ಗುಂಪಿಗೆ ಒಂದೇ ವರ್ಗಕ್ಕೆ ಸೇರಿದವರಾಗಿರಬೇಕು ಎಂಬ ಭಾವನೆಗಳು ಎಲ್ಲೆಲ್ಲಿಯೂ ಕಂಡುಬರುತ್ತಿವೆ. ಆ ಒಂದು ಚಾಪಲ್ಯ ಒಂದು ಪಕ್ಷದವರಲ್ಲಿ ಬಹಳವಾಗಿದ್ದಂತೆ ಎದ್ದುಕಾಣುತ್ತಿದೆ. ಅಂದರೆ ತಾಲ್ಲೂಕ್ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಬ್ಯಾಂಕ್ ಮತ್ತು ಇತರೇ ಸಂಘ ಸಂಸ್ಥೆಗಳಲ್ಲಿ ಆಡಳಿತಪಕ್ಷದವರನ್ನೇ ಬೆಳೆಸಬೇಕು ಎಂಬ ಪ್ರಯತ್ನ ಸತತವಾಗಿ ನಡೆಯುತ್ತಿದೆ. ಈ ಎಲ್ಲ ಸಂಸ್ಥೆಗಳಲ್ಲೂ ತೊಡಗಿಸಿರತಕ್ಕ ಹಣವನ್ನು ಯಾವ ಉದ್ದೇಶಕ್ಕೆ ತೊಡಗಿಸಲಾಗಿದೆಯೋ ಅದಕ್ಕೆ ಬಳಸದೆ ಆ ಹಣವನ್ನು ಪಡೆದ ಸಂಸ್ಥೆಗಳವರು ಮತ್ತು ಆ ಹಣವನ್ನು ನೀಡಿದವರೂ ಮತ್ತು ಆ ಲೆಕ್ಕಪತ್ರಗಳನ್ನು ಆಡಿಟ್ ಮಾಡತಕ್ಕ ಸಿಬ್ಬಂದಿವರ್ಗದವರು ಈ ಮೂವರೂ ಒಂದಾಗಿ ಆ ಹಣವನ್ನು ಹಂಚಿಕೊಳ್ಳುತ್ತಿದ್ದಾರೇನೋ ಎಂಬ ಸಂಶಯ ಕೂಡ ಜನರಲ್ಲಿ ಮೂಡುವುದಕ್ಕೆ ಅವಕಾಶವಾಗಿದೆ.

Mr. DEPUTY SPEAKER.—The hon'ble Member may continue his speech tomorrow. The House now stands adjourned to meet tomorrow at 1-00 P.M.

The House adjourned at Six of the Clock to meet again at One of the Clock on Tuesday the 3rd March 1970.